Digitized by Arya Samaj Foundation Chennai and eGangotri

ಹಾ ಮಾ ನಾ ಹೊತ್ತಿಗೆಗಳು



ಸಂಪಾದಕಿ
ಡಾ. ಎಚ್. ಎಸ್. ಸುಜಾತಾ

ಸುಹಾಸ
ಮೈಸೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DONATION

Forwarded free of cost, and with the compliments of the Department of Education, Government of India, New Delhi.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಮಾನಾ ಹೊತ್ತಗೆಗಳು

ಡಾ. ಶ್ರೀಮತಿ ಎಚ್. ಎಸ್. ಸುಜಾತಾ (ಜ. ೧೫-೩-೧೯೪೪) ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್‌ಸಿ. ಪದವಿಯನ್ನೂ (೧೯೬೬); ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಪ್ರಥಮ ದರ್ಜೆಯಲ್ಲಿ ಎಂ.ಎ. (೧೯೭೧) ಹಾಗೂ ಪಿಎಚ್.ಡಿ. ಪದವಿ (೧೯೮೦) ಗಳನ್ನೂ ಪಡೆದರು. ೧೯೭೧ರಿಂದ ಮೈಸೂರಿನ ಡಿ. ಬನುಮಯ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾಗಿಯೂ ಅಲ್ಲೇ ೧೯೮೫ರಿಂದ ರೀಡರ್ ಆಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ಸುಜಾತಾ ಹತ್ತಾರು ಬಾರಿ ರಾಷ್ಟ್ರ ಹಾಗೂ ರಾಜ್ಯಮಟ್ಟದ ಕಮ್ಮಟ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಚಲನಚಿತ್ರ ಸಹೃದಯತಾ ಶಿಬಿರಗಳಲ್ಲಿ ಎರಡು ಸಾರಿ (೧೯೮೨ ಹೆಗ್ಗೋಡು, ೧೯೮೩ ಪುಣೆ) ಪಾಲುಗೊಂಡಿದ್ದಾರೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನೆರವಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ಚಲನಚಿತ್ರ ಅಧ್ಯಯನ ಕೇಂದ್ರದ ಕಾರ್ಯಕಾರಿ ಸಮಿತಿಯಲ್ಲಿ ೧೯೮೮ರಿಂದ ಸದಸ್ಯರಾಗಿದ್ದಾರೆ. ಗುಲ್ಬರ್ಗದಲ್ಲೂ (೧೯೮೨) ತುಮಕೂರಿನಲ್ಲೂ (೧೯೮೪) ನಡೆದ ಲೇಖಕಿಯರ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಚಿಂತನ, ಚರ್ಚೆ, ಸಂದರ್ಶನ, ವೀಕ್ಷಕ ವಿವರಣೆ, ಶಬ್ದಚಿತ್ರ, ಪುಸ್ತಕ ಪರಿಚಯ ಮೊದಲಾದ ಆಕಾಶವಾಣಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

ಡಾ. ಸುಜಾತಾ ಇದುವರೆಗೆ ಎಂಟು ಕೃತಿಗಳನ್ನೂ ಹಲವಾರು ವಿದ್ವತ್ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಮುಖ್ಯವಾದ ಕೃತಿಗಳು: 'ಎಂ. ಎಸ್. ಪುಟ್ಟಣ್ಣ: ಒಂದು ಅಧ್ಯಯನ' (೧೯೮೧), 'ಪುಟ್ಟಣ್ಣ ಹೇಳಿದ .ಕಥೆಗಳು' (ಮೂರು ಭಾಗಗಳಲ್ಲಿ, ೧೯೮೧), 'ಸೀತೆಯ ಭವಿಷ್ಯ' (ನಾರ್ಲ ವೆಂಕಟೇಶ್ವರ ರಾವ್ ಅವರ 'ಸೀತಜೋಸ್ಯಂ' ತೆಲುಗು ನಾಟಕದ ಅನುವಾದ ೧೯೮೬). ಪುಸ್ತಕೋದ್ಯಮಕ್ಕೆ ಮೀಸಲಾದ ಗ್ರಂಥಲೋಕ ನಿಯತಕಾಲಿಕೆ ಪ್ರಾರಂಭವಾದಾಗಿನಿಂದಲೂ ಅದರ ಬರಹಗಾರ್ತಿಯಾಗಿ, ೧೯೯೦ರಿಂದ ಸಮಾಲೋಚನ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

'ಎಂ. ಎಸ್. ಪುಟ್ಟಣ್ಣ: ಒಂದು ಅಧ್ಯಯನ' ಪಿಎಚ್.ಡಿ. ನಿಬಂಧಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿಯನ್ನೂ (೧೯೮೨) 'ಸೀತೆಯ ಭವಿಷ್ಯ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾದೆಮಿಯ ಅತ್ಯುತ್ತಮ ಸೃಜನಶೀಲ ಅನುವಾದ ಪುರಸ್ಕಾರವನ್ನೂ (೧೯೮೭) ಡಾ. ಸುಜಾತಾ ಪಡೆದಿದ್ದಾರೆ. ನೇಪಾಳ, ಥಾಯ್‌ಲೆಂಡ್, ಹಾಂಗ್‌ಕಾಂಗ್ ಮತ್ತು ಸಿಂಗಪುರಗಳಲ್ಲಿ ಅವರು ವ್ಯಾಪಕವಾಗಿ ಪ್ರವಾಸ ಮಾಡಿದ್ದಾರೆ.

ಸಂಪರ್ಕ ವಿಳಾಸ: ಡಾ. ಎಚ್. ಎಸ್. ಸುಜಾತಾ, ೫೩, 'ಸುಹಾಸ', ೬ನೇ ಬ್ಲಾಕ್, ಕುವೆಂಪುನಗರ,
ಮೈಸೂರು ೫೭೦ ೦೨೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ. ಹಾ. ಮಾ. ನಾಯಕರ ಕೃತಿಗಳ
ವರ್ಗೀಕೃತ ವರ್ಣನಾತ್ಮಕ ಗ್ರಂಥಸೂಚಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

पुस्तकालय
पुस्तकालय

DONATION

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ. ಹಾ. ಮಾ. ನಾಯಕರೊಂದಿಗೆ ಡಾ. ಎಚ್. ಎಸ್. ಸುಜಾತಾ; ಗುಲ್ಬರ್ಗಾ: ಸೆಪ್ಟೆಂಬರ್ ೨. ೧೯೮೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಮಾನಾ ಹೊತ್ತಗೆಗಳು

Forwarded free of cost, and with the compliments of the Department of Education, Government of India, New Delhi

8310

ಸಂಪಾದಕಿ

ಡಾ. ಎಚ್. ಎಸ್. ಸುಜಾತಾ

ಸುಹಾಸ ಪ್ರಕಟಣೆಗಳು

ಮೈಸೂರು

೧೯೯೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hā Mā Nā Hottagegaḷu, A classified descriptive Bibliography of the works of Dr. Ha. Ma. Nayak compiled by Dr. H. S. Sujatha, Reader in Kannada, D. Banumiah College, Mysore 570 024; First Edition May 1991 by Suhāsa Prakaṭaṇegaḷu, Mysore 570 023; Demy Octavo, 123+XX pages, Price Rs. 80/-

© ಡಾ. ಎಚ್. ಎಸ್. ಸುಜಾತಾ (೧೯೯೧)

ಪ್ರತಿಗಳು ದೊರೆಯುವ ಸ್ಥಳ

ಗೀತಾ ಬುಕ್ ಹೌಸ್
ಕೆ.ಆರ್. ಸರ್ಕಲ್
ಮೈಸೂರು ೫೭೦ ೦೦೧

ಸಪ್ನಾ ಬುಕ್ ಸ್ಟಾಲ್ (ಕನ್ನಡ ವಿಭಾಗ)
ತ್ರಿಭುವನ್ ಚಿತ್ರಮಂದಿರದ ಎದುರು
ಗಾಂಧಿನಗರ
ಬೆಂಗಳೂರು ೫೬೦ ೦೦೯

ಸಮಾಜ ಪುಸ್ತಕಾಲಯ
ಶಿವಾಜಿ ಬೀದಿ
ಧಾರವಾಡ ೫೮೦ ೦೦೧

ರಕ್ಷಾಪುಟ ವಿನ್ಯಾಸ : ಶ್ರೀ ಕಮಲೇಶ್, ಬೆಂಗಳೂರು
ಭಾವಚಿತ್ರಗಳು : ಶ್ರೀ ಎಚ್. ಎಸ್. ಪ್ರಭಾಕರ್, ಬೆಂಗಳೂರು

ಪ್ರಕಾಶಕರು : ಸುಹಾಸ ಪ್ರಕಟಣೆಗಳು, ೫೩, ೬ನೇ ಬ್ಲಾಕ್, ಕುವೆಂಪುನಗರ, ಮೈಸೂರು ೫೭೦ ೦೨೩
ಮುದ್ರಣ : ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ ೫೭೬ ೧೧೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಮಾನಂದರಿಗೆ
ಪ್ರೀತಿಯ ಕಾಣಿಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆಂಗಿನ ಸಿಹಿನೀರು, ಕೊಬರಿ

ಕನ್ನಡದ ನೆಲೆಯಿಂದ ಜಗತ್ತನ್ನು ದಿಟ್ಟಿಸುವ ಹವಣು.
ಸಕಾರದ ಕೃತಿಮಾಲೆಯಿಂದ ಸಾಹಿತ್ಯವನ್ನು ಸಾಕಾರಗೊಳಿಸಿದ ಪ್ರೌಢಿಮೆ.

ನಡೆನುಡಿಗಳಲಿ ಹಿರಿಯ ಅಂತರವಿರುವ
ಹೆಸರಾಂತವರ ನಡುವೆ ಹಾಮಾನಾ ಅವರ ಕಂಡಾಗ,
ಆಶ್ಚರ್ಯ ಸಂತೋಷಗಳ ಜೋಡಿಪುಲಕ.
ಹುಳಿತ ಜೋಳದ ರಾಶಿಯ ನಡುವೆ ಮೆಣಸುಕಾಳನು ಕಂಡಂತೆ,
ಹುಲುಸು ನೀಲಗಿರಿಗಳ ಮಧ್ಯದ ಶ್ರೀಗಂಧ ತರುವ ದರ್ಶಿಸಿದಂತೆ.

ಚಿನ್ನದ ಅಂತಃಕರಣಕ್ಕೆ ಉಕ್ಕಿನ ನಿಶ್ಚಯದ ಜೊತೆ,
ವಿಲಕ್ಷಣವಲ್ಲದ ವಿರಳ ಹೊಂದಿಕೆ.
ವಿಷಮ ಸನ್ನಿವೇಶಗಳಲ್ಲೂ ಗಾಂಭೀರ್ಯ ಕರಗದ ನಡವಳಿಕೆ.
ಎತ್ತರಕೆ ಏರಿಯೂ ಎಲ್ಲರ ಹತ್ತಿರಕೆ ಸಾರುವ ಔದಾರ್ಯ.
ಹಿರಿಯರಿರಲಿ, ಕಿರಿಯರಿರಲಿ, ಸಮಾನರೇ ಇರಲಿ, ತಪ್ಪಿದಲ್ಲಿ
ಅರೆಕೊರೆಗಳ ಚುಚ್ಚಿ ಸರಿಪಡಿಸುವ ಹೃದಯ ವೈಶಾಲ್ಯ,
ಅಪರೂಪದ ಗುಣ ಕಂಡಾಗ ಮುಕ್ತಮನದ ನಿರ್ಮಲ ಪ್ರಶಂಸೆ,
ಮಾತುಕತೆಯಲ್ಲಿ ಅಮಿತವಾದ ಮಾರ್ಮಿಕತೆ,
ಸಮ್ಮತಿಯ ಸೂಚನೆ ದೊರೆಯುವುದು ಮೌನದಿಂದ
ಇಲ್ಲವೇ ಅರ್ಥಪೂರ್ಣ ಮಂದಹಾಸದಿಂದ.
ಕಣ್ಣ ಹೊಳಪಿನಲಿ ಸಂತಸವ ಅಭಿವ್ಯಕ್ತಿಸುವ ಚಾತುರ್ಯ,
ಅಂಗೀಕಾರದ ಮುದ್ರೆ ಒತ್ತದಿದ್ದಾಗ ಮುಖ ನಿರ್ವಿಕಾರ,
ಅಸಮಾಧಾನದ ಪ್ರಕಟಣೆಗೆ ಹುಬ್ಬಿನ ಕುಣಿತದ ಸಹಾಯ.
ಸಂಭಾಷಣೆಯಲ್ಲಿ ಗೆಲ್ಲಲು ಬಂದವರು
ಸ್ವಂತಸೃಷ್ಟಿಯ ಸ್ವಗತದ ಸುಳಿಯಲ್ಲಿ ಸಿಲುಕಿ ಸೋಲುವರು.

ಶ್ರೀಮದ್ಗಾಂಭೀರ್ಯದ ತೆರೆ ಸರಿಸಿ ಇಣುಕುನೋಟ ಬೀರಿದವರು
ಮೂಕವಿಸ್ಮಿತರು. ಸಹಜ ಚಿಮ್ಮುವ ಆದರ, ವಿಶ್ವಾಸಗಳ ಕಂಡಾಗ,
ಮುಳ್ಳು, ಮೇಣಗಳ ಒಳಗೆ ಕುಳಿತಿರುವ ಇನಿದು ಹಲಸಿನ ತೊಳೆಗಳ ಸ್ಮರಣೆ.
ನಾರು, ಸಿಪ್ಪೆಗಳ ನಡುವೆ ಅಡಗಿರುವ ತೆಂಗಿನ ಸಿಹಿನೀರು, ಕೊಬರಿಗಳ ನೆನಪು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ಎಂ. ಎಸ್. ಪುಟ್ಟಣ್ಣನವರ ಬದುಕು ಬರಹಗಳಿಗೆ ಸಂಬಂಧಿಸಿದಂತೆ ನನ್ನ ಪ್ರೌಢ ಪ್ರಬಂಧವನ್ನು ಡಾ. ಹಾ.ಮಾ. ನಾಯಕರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಕಾಲೇಜಿನ ಕೆಲಸಕ್ಕೆ ಹಿಂದಿರುಗಿ ಫಲಿತಾಂಶಕ್ಕಾಗಿ ಕಾಯುತ್ತಿದ್ದ ದಿನಗಳು (೧೯೮೦). ಆಗ ತಲೆ, ಮುಖಗಳ ಎಡಭಾಗದಲ್ಲಿ ತೀವ್ರವಾದ ಸರ್ಪಸುತ್ತಿಗೆ ಗುರಿಯಾದೆ. ಎಡಗಣ್ಣು ತೆರೆಯಲೂ ಅಸಾಧ್ಯವಾಗಿ ರಜೆ ಹಾಕಬೇಕಾಗಿ ಬಂತು. ವೈದ್ಯರ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಹೊಸ ಪುಸ್ತಕಗಳ ಮೇಲೆ ಕಣ್ಣಾಡಿಸುವುದೊಂದೇ, ನೋವು ಮರೆಯಲು ನನಗಿದ್ದ ಮಾರ್ಗ. ಆ ದಿನಗಳಲ್ಲಿ ಹಾಮಾನಾ ಅವರ 'ಗೋಕಾಕ ಗ್ರಂಥಾವಳಿ' ಹೊರಬಂದಿತು. ತಕ್ಷಣ ಕೊಂಡು ಓದಿದೆ. ಅಂಥದೊಂದು ಕೃತಿಯನ್ನು—ಹಾಮಾನಾ ಅವರು ಒಪ್ಪಿದರೆ ಅವರ ಕೃತಿಗಳಿಗೆ ಸಂಬಂಧಿಸಿದಂತೆ—ಸಿದ್ಧಪಡಿಸುವ ಆಸೆಯಾಯಿತು. ಬಹು ಹಿಂದಿನಿಂದಲೇ ಅನುದ್ದೇಶಿತವಾಗಿ ಹಾಮಾನಾ ಅವರ ಅನೇಕ ಕೃತಿಗಳನ್ನು ಸಂಗ್ರಹಿಸಿದ್ದೆ. ಆದರೆ ನನ್ನ ಪ್ರೌಢಪ್ರಬಂಧ ಹಾಗೂ ಇತರ ಪ್ರಕಟಣೆಗಳಿಂದ ಈ ಆಸೆ ಕಾರ್ಯರೂಪಕ್ಕೆ ಬರದೆ ನನ್ನ ಮನಸ್ಸಿನ ಆಳದಲ್ಲೆಲ್ಲೋ ಹುದುಗಿಕೊಂಡಿತು.

ಎರಡು ವರ್ಷಗಳ ಕೆಳಗೆ ಮತ್ತೆ ಅಚಾನಕವಾಗಿ ಆ ಆಸೆ ಪುಟಿದೆದ್ದಿತು. ಹಾಮಾನಾ ಅವರ ಗಮನಕ್ಕೆ ಬರದಂತೆ ಈ ಸೂಚಿಯನ್ನು ಸಿದ್ಧಪಡಿಸುವುದು ಸಾಧ್ಯವೇ ಇರಲಿಲ್ಲ. ಅವರ ಒಪ್ಪಿಗೆಯನ್ನು ಕೇಳಿದಾಗ ಮುಖ ಮುರಿಯುವಂತೆ ಬೇಡವೆಂದು ಬಿಟ್ಟರು. ಅವರ ಈ ಬಗೆ ನನಗೆ ಅನಿರೀಕ್ಷಿತವಾಗಿರಲಿಲ್ಲವಾದ್ದರಿಂದ ನಾನು ಅಪ್ರತಿಭಳಾಗಲಿಲ್ಲ. ಮತ್ತೆ ಮತ್ತೆ ಆ ವಿಷಯವನ್ನು ಪ್ರಸ್ತಾಪಿಸುತ್ತಲೇ ಇದ್ದೆ. ನನ್ನ ಮೇಲಿನ ವಿಶ್ವಾಸದಿಂದ ಕಡೆಗೂ ಹಾಮಾನಾ ಅವರು ಒಪ್ಪಿಗೆ ನೀಡಿದಾಗ ನಾನು ಪಟ್ಟ ಸಂತೋಷದ ನೆನಪು ಮಾಸುವಂಥದಲ್ಲ.

* * *

'ಹಾಮಾನಾ ಹೊತ್ತಗೆಗಳು' ಏಕವ್ಯಕ್ತಿ ವಿಷಯಕ ವರ್ಗೀಕೃತ ವರ್ಣಾನಾತ್ಮಕ ಗ್ರಂಥಸೂಚಿ. ಈ ಸೂಚಿಯಲ್ಲಿ ಹಾಮಾನಾ ಅವರ ಈವರೆಗೆ ಪ್ರಕಟಗೊಂಡ ಕನ್ನಡ ಹಾಗೂ ಇಂಗ್ಲಿಷ್ ಗ್ರಂಥಗಳ, ಬೇರೆ ಭಾಷೆಗಳಿಗೆ ಹೋದ ಅವರ ಕೃತಿಗಳ ಮತ್ತು ಅವರನ್ನು ಕುರಿತ ಕನ್ನಡ ಗ್ರಂಥವೊಂದರ ವಿವರಗಳನ್ನು ಒಟ್ಟುಗೂಡಿಸಿದೆ. ಈ ಸೂಚಿ ಗ್ರಂಥಗಳಿಗೆ ಮಾತ್ರ ಸೀಮಿತ. ಹಾಮಾನಾ ಅವರ ಬಿಡಿಲೇಖನಗಳು ಇಲ್ಲಿನ ವಿವರಗಳಲ್ಲಿ ಸೇರಿಲ್ಲ.

ಹಾಮಾನಾ ಅವರ ನೂರ ಹದಿನೈದು ಕನ್ನಡ ಕೃತಿಗಳಲ್ಲಿ ಮೂರು ಕಥೆ, ಚಿತ್ರ, ಪ್ರಬಂಧಗಳು; ಒಂದು ಜೀವನ ಚರಿತ್ರೆ; ಮೂರು ಮಕ್ಕಳ ಸಾಹಿತ್ಯ; ಹದಿನಾಲ್ಕು ವಿಚಾರ, ವಿಮರ್ಶೆ; ಹದಿಮೂರು ಅಂಕಣ, ಆಕಾಶವಾಣಿ ಚಿಂತನ; ಮೂರು ಅನುವಾದ; ನಲವತ್ತೊಂಬತ್ತು ಸಂಪಾದಿತ; ಹದಿಮೂರು ಪಠ್ಯಪುಸ್ತಕಗಳು; ಹದಿನಾರು ಸೂಚಿ, ಕೋಶ, ಪರಾಮರ್ಶನ ಕೃತಿಗಳು. ಐದು ಇಂಗ್ಲಿಷ್ ಕೃತಿಗಳಲ್ಲಿ ನಾಲ್ಕು ಸಂಪಾದಿತ ಹಾಗೂ ಒಂದು ಸಂಶೋಧನೆ. ಅವರ ಮೂರು ಪುಸ್ತಕಗಳು ಮೂರು ಬೇರೆ ಬೇರೆ ಭಾಷೆಗಳಿಗೆ ಹೋಗಿವೆ. ಅವರನ್ನು ಕುರಿತ ಒಂದು ಕನ್ನಡ ಕೃತಿ ಹೊರಬಂದಿದೆ. ಈ ಹನ್ನೆರಡು ವಿಭಾಗಗಳ ಒಟ್ಟು ನೂರ ಇಪ್ಪತ್ತನಾಲ್ಕು ನಮೂದುಗಳು ಇಲ್ಲಿ ಸೇರಿವೆ. ಈ ವಿಭಾಗಗಳ ಶೇಕಡಾವಾರು ವಿವರಗಳು ಕ್ರಮವಾಗಿ ಇಂತಿವೆ: ೨.೪೨; ೦.೮೦; ೨.೪೨; ೧೧.೨೯; ೧೦.೪೮; ೨.೪೨; ೩೯.೫೨; ೧೦.೪೮; ೧೨.೯೦; ೪.೦೩; ೨.೪೨; ೦.೮೦.

ಹನ್ನೆರಡು ವಿಭಾಗಗಳಲ್ಲೂ ನಮೂದುಗಳ ವಿವರಗಳಿಗಿಂತ ಮೊದಲು ಆಯಾ ವಿಭಾಗಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ರೂಪದ ಒಂದು ವಿಶಿಷ್ಟ ಘಟಕವಿದೆ. ಇಡೀ ವಿಭಾಗಕ್ಕೆ ಅನ್ವಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುವ ಕೆಲವು ಮುಖ್ಯ ಲಕ್ಷಣಗಳನ್ನೂ ಸೂತ್ರಗಳನ್ನೂ ಇಲ್ಲಿ ಗುರುತಿಸಿದೆ. ಅಂಕಿ ಅಂಶಗಳಿಗೆ ಸಂಬಂಧಿಸಿದಂತೆ ಹಲವು ದಾಖಲೆಗಳನ್ನು ಇಲ್ಲಿ ಕೊಟ್ಟಿದೆ.

ಪ್ರತಿ ವಿಭಾಗದಲ್ಲೂ ನಮೂದುಗಳನ್ನು ಅಕಾರಾದಿಯಾಗಿ ಕೊಟ್ಟಿದೆ ಮತ್ತು ಕ್ರಮಾಂಕಗಳು ಮಧ್ಯೆ ಒಡೆಯದೆ ಮುಂದುವರೆಯುತ್ತವೆ. ಇಂಗ್ಲಿಷಿನ ಐದು ನಮೂದುಗಳೂ ಸೇರಿದಂತೆ ಎಲ್ಲ ನಮೂದುಗಳ ಕ್ರಮಾಂಕಗಳು ಕನ್ನಡದಲ್ಲಿಯೇ ಇರುತ್ತವೆ. ಇಂಗ್ಲಿಷಿನ ನಮೂದುಗಳ ಮಿಕ್ಕ ವಿವರಗಳು ಮಾತ್ರ, ಸಂಖ್ಯೆಗಳೂ ಸೇರಿದಂತೆ, ಇಂಗ್ಲಿಷಿನಲ್ಲಿ ಇರುತ್ತವೆ. ಪ್ರತಿ ನಮೂದಿನ ವಿವರಗಳಲ್ಲಿ ಎರಡು ಭಾಗಗಳಿವೆ. ಮೊದಲ ಸಾಲಿನಲ್ಲಿ ನಮೂದಿನ ಕ್ರಮಾಂಕವಿರುತ್ತದೆ. ನಮೂದಿನ ಈ ಸಂಖ್ಯೆ ಆಯಾ ಕೃತಿಯನ್ನು ಪ್ರತಿನಿಧಿಸುತ್ತದೆ. ಎರಡನೆಯ ಸಾಲಿನಲ್ಲಿ ಪುಸ್ತಕದ ಹೆಸರು ದಪ್ಪ ಅಕ್ಷರಗಳಲ್ಲಿ ಇರುತ್ತದೆ. ಮುಂದಿನ ಸಾಲುಗಳಲ್ಲಿ ಪ್ರಕಾಶನದ ಹೆಸರು, ವಿಳಾಸಗಳು; ಪ್ರಕಟಣೆಯ ವರ್ಷ; ಪುಸ್ತಕದ ಆಕಾರ, ಪುಟಸಂಖ್ಯೆಗಳು; ಬೆಲೆ–ಈ ಕ್ರಮದಲ್ಲಿ ವಿವರಗಳಿರುತ್ತವೆ. ಸಾಧಾರಣ ಹಾಗೂ ಕ್ಯಾಲಿಕೋ ಬೆಲೆಗಳೆರಡೂ ಸೂಚಿತವಾಗಿದ್ದಲ್ಲಿ ಎರಡನ್ನೂ ಕೊಟ್ಟಿದೆ. ಡಾಲರ್, ಪೌಂಡ್ ಇತ್ಯಾದಿ ವಿದೇಶೀ ನಾಣ್ಯ ಪದ್ಧತಿಯನ್ನು ಕೊಟ್ಟಿದ್ದರೆ ಅದನ್ನೂ ದಾಖಲಿಸಿದೆ. ಬೆಲೆ ಸೂಚಿತ ವಾಗಿಲ್ಲದಿದ್ದಲ್ಲಿ ಹಾಗೆಂದು ತಿಳಿಸಿದೆ. ಈ ನಾಲ್ಕು ಅಂಶಗಳನ್ನೂ ಅರ್ಧವಿರಾಮ ಚಿಹ್ನೆಯಿಂದ ಪ್ರತ್ಯೇಕಿಸಿದೆ. ಇದು ಮೊದಲ ಭಾಗ. ಎರಡನೆಯ ಭಾಗದಲ್ಲಿ ಪುಸ್ತಕದಲ್ಲಿರುವ ಲೇಖನ/ಪ್ರಬಂಧ ಮುಂತಾದುವುಗಳ ಹೆಸರು, ಪುಸ್ತಕ ಯಾರಿಗೆ ಅರ್ಪಿತ ಎಂಬ ವಿವರ, ಹೊದಿಕೆಯ ಚಿತ್ರ, ಮುಖಚಿತ್ರ, ಒಳಚಿತ್ರ ಹಾಗೂ ವರ್ಣವಿನ್ಯಾಸಗಳಿಗೆ ಕಾರಣರಾದ ಕಲಾವಿದರ ಹೆಸರು, ಪುಸ್ತಕ ಅನುವಾದಗೊಂಡಿದ್ದರೆ, ಪಠ್ಯವಾಗಿದ್ದರೆ ಆ ವಿವರಗಳು ಇರುತ್ತವೆ. ಅನುವಾದಿತ ಗ್ರಂಥಗಳಲ್ಲಿ ಮೂಲ ಲೇಖಕರ ಹಾಗೂ ಮೂಲ ಗ್ರಂಥದ ಹೆಸರುಗಳನ್ನು ತಿಳಿಸಿದೆ. ಪಠ್ಯ ಕೃತಿಗಳಲ್ಲಿ ಪಠ್ಯವಾಗಿದ್ದ ತರಗತಿ, ವರ್ಷಗಳನ್ನು ಕೊಟ್ಟಿದೆ. ಸಂಪಾದಿತ ಗ್ರಂಥಗಳಲ್ಲಿ ಲೇಖನಗಳ, ಲೇಖನದಾರರ ಹೆಸರುಗಳನ್ನೂ ಸಹಸಂಪಾದಕರಿದ್ದಲ್ಲಿ ಅವರ ಹೆಸರನ್ನೂ ಸೂಚಿಸಿದೆ. ಬೇರೆಯವರ ಮುನ್ನುಡಿ ಗಳಿದ್ದರೆ ಅವನ್ನು ಸೂಚಿಸಿದೆ. ಅನುಬಂಧ, ಕೋಶಗಳಿದ್ದಲ್ಲಿ ಅವನ್ನು ಕೊಟ್ಟಿದೆ. ಒಂದಕ್ಕಿಂತ ಹೆಚ್ಚು ಮುದ್ರಣಗಳನ್ನು ಕಂಡ ಪುಸ್ತಕಗಳ ವಿವರಗಳನ್ನು ನೀಡುವಾಗ ಸಾಮಾನ್ಯವಾಗಿ ಇತ್ತೀಚಿನ ಮುದ್ರಣವನ್ನು ಗಮನಿಸಿದೆ ಹಾಗೂ ಮುದ್ರಣ ಸಂಖ್ಯೆಯನ್ನು ಎ.ಮು. (ಎರಡನೆಯ ಮುದ್ರಣ), ಮೂ.ಮು. (ಮೂರನೆಯ ಮುದ್ರಣ), ನಾ.ಮು. (ನಾಲ್ಕನೆಯ ಮುದ್ರಣ), ಐ.ಮು. (ಐದನೆಯ ಮುದ್ರಣ), ಆ.ಮು. (ಆರನೆಯ ಮುದ್ರಣ) ಎಂದು ಸೂಚಿಸಿದೆ. ಇಲ್ಲಿನ ಮೊದಲ ಆರು ವಿಭಾಗಗಳ ಒಟ್ಟು ಮೂವತ್ತೇಳು ನಮೂದುಗಳಲ್ಲಿ 'ರವೀಂದ್ರನಾಥ ಠಾಕೂರ್' (೪) ಕೃತಿಯ ನಾಲ್ಕನೆಯ ಮುದ್ರಣ ವನ್ನು ನಾನು ನೋಡಿಲ್ಲ. ಮೊದಲ, ಎರಡನೆಯ, ಮೂರನೆಯ ಹಾಗೂ ಐದನೆಯ ಮುದ್ರಣಗಳನ್ನು ನೋಡಿದ್ದೇನೆ. ಜೊತೆಗೆ 'ಗುರುದೇವ ರವೀಂದ್ರರು' (೬) ಕೃತಿಯ ಮೊದಲ ಮುದ್ರಣ ಸಹ ನನಗೆ ನೋಡಲು ಸಿಗಲಿಲ್ಲ. ಆ ಪುಸ್ತಕದ ಎಲ್ಲ ಪುನರ್ಮುದ್ರಣಗಳನ್ನೂ ನೋಡಿದ್ದೇನೆ. ಮಿಕ್ಕ ಮೂವತ್ತೈದು ನಮೂದುಗಳ ಎಲ್ಲ ಮುದ್ರಣ/ಪುನರ್ಮುದ್ರಣಗಳನ್ನೂ ನೋಡಿದ್ದೇನೆ. ಆದ್ದರಿಂದ ಮೊದಲ ಮೂವತ್ತೇಳು ನಮೂದುಗಳ ಇತ್ತೀಚಿನ ಮುದ್ರಣವನ್ನು ಪರಿಗಣಿಸಿದ್ದರೂ ಮುಂಚಿನ ಮುದ್ರಣಗಳ ವರ್ಷ, ಪ್ರಕಾಶನ ಸಂಸ್ಥೆಗಳನ್ನು ತಿಳಿಸಿದೆ. ಪ್ರಸ್ತುತ ಮುದ್ರಣದಲ್ಲಿ ಬದಲಾವಣೆಯಿದ್ದಲ್ಲಿ ಸೂಚಿಸಿದೆ. ಅನಂತರದ ಆರು ವಿಭಾಗಗಳ ಒಟ್ಟು ಎಂಬತ್ತೇಳು ನಮೂದುಗಳಲ್ಲಿ ಪುನರ್ಮುದ್ರಣ ಕಂಡ ಕೃತಿಗಳಿದ್ದಲ್ಲಿ ಅಂಥವುಗಳ ಉಪಲಬ್ಧ ಮುದ್ರಣವನ್ನು ಮಾತ್ರ ಗಮನಿಸಿದೆ, ಅದು ಎಷ್ಟನೆಯ ಮುದ್ರಣ ಎಂಬುದನ್ನು ತಿಳಿಸಿದೆ, ಮಿಕ್ಕ ಮುದ್ರಣಗಳು ನೋಡಲೂ ಸಿಗದುದರಿಂದ ಅವುಗಳ ವಿವರಗಳನ್ನು ಕೊಡಲಾಗಿಲ್ಲ.

ಬೇರೆ ಭಾಷೆಗೆ ವಿಭಾಗದ ಮೂರು ಅನುವಾದಿತ ಕೃತಿಗಳಲ್ಲಿ ಪರಿವಿಡಿಯ ವಿವರಗಳು ಮೂಲದಲ್ಲಿದ್ದಂತೆಯೇ ಇವೆ. ಆ ಕಾರಣದಿಂದ ಮತ್ತೆ ವಿವರಗಳನ್ನು ನೀಡಿಲ್ಲ. ಮೂರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮೂದುಗಳ ಮೂಲಗಳನ್ನು ಅವುಗಳ ಕ್ರಮಾಂಕಗಳೊಂದಿಗೆ ಸೂಚಿಸಿದೆ. ಸಂಪಾದಿತ (ಇತರ ರೊಡನೆ); ಪಠ್ಯ ಹಾಗೂ ಸೂಚಿ, ಕೋಶ, ಪರಾಮರ್ಶನ ವಿಭಾಗಗಳಲ್ಲಿ ಹಾಮಾನಾ ಅವರಿಗೆ ಸಹಸಂಪಾದಕರಿದ್ದಾರೆ. ಇವುಗಳಲ್ಲಿ ಮೊದಲನೆಯ ವಿಭಾಗದಲ್ಲಿನ ಯಾವ ನಮೂದಿನಲ್ಲೂ ಅಧ್ಯಕ್ಷರ ಪ್ರಸಕ್ತಿ ಇಲ್ಲ. ಆದ್ದರಿಂದ ಇಲ್ಲಿ ಸಹಸಂಪಾದಕರ ಹೆಸರನ್ನು ಮಾತ್ರ ಹೇಳಿದೆ, ಪ್ರತಿ ನಮೂದಿಗೂ ಹಾಮಾನಾ ಹೆಸರನ್ನು ಹೇಳಹೋಗಿಲ್ಲ. ಪಠ್ಯ ವಿಭಾಗದ ಎಲ್ಲ ನಮೂದುಗಳಿಗೂ ಸೂಚಿ, ಕೋಶ, ಪರಾಮರ್ಶನ ವಿಭಾಗದ ಅನೇಕ ನಮೂದುಗಳಿಗೂ ಸಂಪಾದಕ ಸಮಿತಿ/ಮಂಡಲಿಯ ಯಾರಾದ ರೊಬ್ಬರು ಅಧ್ಯಕ್ಷರಾಗಿದ್ದಾರೆ. ಕೆಲವು ಬಾರಿ ಈ ಅಧ್ಯಕ್ಷರು ಹಾಮಾನಾ ಅವರೇ ಆಗಿದ್ದಾರೆ. ಈ ಅಂಶವನ್ನು ತಿಳಿಯಪಡಿಸುವ ಕಾರಣದಿಂದ ಈ ಎರಡು ವಿಭಾಗಗಳ ನಮೂದುಗಳ ವಿವರ ನೀಡುವಾಗ ಹಾಮಾನಾ ಅವರು ಅಧ್ಯಕ್ಷರಾಗಿರಲಿ, ಬೇರೆಯವರು ಅಧ್ಯಕ್ಷರಾಗಿರಲಿ, ಸಮಿತಿಯ ಎಲ್ಲ ಸದಸ್ಯರ ಹೆಸರನ್ನು ಹೇಳಿದೆ. ಅಂದರೆ ಈ ಎರಡು ವಿಭಾಗಗಳ ಪ್ರತಿ ನಮೂದಿನಲ್ಲಿ ಹಾಮಾನಾ ಅವರ ಹೆಸರು ಸೂಚಿತವಾಗಿದೆ. ಪುನರಾವರ್ತನೆ ಎಂಬಂತೆ ಮೇಲುನೋಟಕ್ಕೆ ತೋರಿದರೂ ಇದು ಅನಿವಾರ್ಯವಾಗಿದೆ. ಇಂಗ್ಲಿಷಿನಲ್ಲಿ ಹಾಮಾನಾ ರಚಿಸಿರುವ ಕೃತಿಗಳ ಸಂಖ್ಯೆ ಐದು ಮಾತ್ರ. ಆದ್ದರಿಂದ ಇವುಗಳನ್ನು ಮತ್ತೆ ಒಳವಿಭಾಗಗಳಾಗಿ ಗುರುತಿಸಿಲ್ಲ. ಆಯಾ ನಮೂದಿನ ಪ್ರಕಾರವನ್ನು ಅಲ್ಲಲ್ಲೇ ಸೂಚಿಸಿದೆ. ವಿಭಾಗಕ್ಕೆ ಸಂಬಂಧಿಸಿದ ಟಿಪ್ಪಣಿಯಲ್ಲಿಯೂ ಗುರುತಿಸಿದೆ.

ಎಲ್ಲ ನಮೂದುಗಳ ವಿವರಗಳ ನಂತರ ಹಾಮಾನಾ ಅವರ ಕನ್ನಡ ಮತ್ತು ಇಂಗ್ಲಿಷ್ ಹಸ್ತಾಕ್ಷರಗಳ ಮಾದರಿಗಳನ್ನು ಕೊಟ್ಟಿದೆ. ಅನಂತರದ ಅನುಬಂಧಗಳಲ್ಲಿ ಹಾಮಾನಾ ಅವರ ಜೀವನದ ಕೆಲವು ಮುಖ್ಯ ವರ್ಷಗಳು; ಹಾಮಾನಾ ಹೊತ್ತಗೆಗಳು (ಅಕಾರಾದಿ); ಹಾಮಾನಾ ಹೊತ್ತಗೆಗಳು (ವಿಷಯ ವಿಭಾಗೀಯ); ಹಾಮಾನಾ ಹೊತ್ತಗೆಗಳು (ವರ್ಷವಾರು); ಸಹ ಸಂಪಾದಕರು; ಅರ್ಪಣೆ ಪಡೆದವರು; ಕಲಾವಿದರು; ಪ್ರಕಾಶಕರು; ಮರುಮುದ್ರಣಗಳು; ಬಹುಮಾನಗಳು, ಪದಕಗಳು, ಪ್ರಶಸ್ತಿಗಳು—ಈ ಹತ್ತು ಸೂಚಿಗಳನ್ನು ಕೊಟ್ಟಿದೆ. ಈ ಸೂಚಿಗಳ ಸಿದ್ಧತೆಯಲ್ಲಿ ಎಲ್ಲ ನೂರ ಇಪ್ಪತ್ತನಾಲ್ಕು ನಮೂದುಗಳೂ ಪರಿಗಣಿತವಾಗಿವೆ.

ಹಾಮಾನಾ ಅವರನ್ನು ಕುರಿತು ನಾನು ಬರೆದಿರುವ ಒಂದು ಅಪ್ರಕಟಿತ ಕವನವನ್ನು ಕೃತಿಯ ಪ್ರಾರಂಭದಲ್ಲಿ ಕೊಟ್ಟಿದೆ. ಹಾಮಾನಾ ಅವರ ವ್ಯಕ್ತಿತ್ವವನ್ನು ನಾನು ಬಲ್ಲಂತೆ ಅದು ಚಿತ್ರಿಸುವುದರಿಂದ ಅದರ ಸೇರ್ಪಡೆ ಇಲ್ಲಿ ಸೂಕ್ತ ಎಂಬ ನಂಬಿಕೆ ನನ್ನದು.

ಹಾಮಾನಾ ಅವರ ಪುಸ್ತಕಪಟ್ಟಿಯಲ್ಲಿ ಮೊದಲಿನಿಂದ ಸೇರಿರುವ 'ಶಾಂತಿ ಸ್ವರೂಪ ಭಟ್ನಾಗರ್' (೩೬) ಕೃತಿಯಲ್ಲಿ ಹಾಮಾನಾ ಅವರ ಹೆಸರಿಲ್ಲ. ಹಾಮಾನಾ ಅವರನ್ನೇ ವಿಚಾರಿಸಿ ಅವರೇ ಅನುವಾದಕರೆಂಬುದನ್ನು ನಾನು ಖಚಿತಪಡಿಸಿಕೊಂಡಿದ್ದೇನೆ. 'ಸಾಹಿತ್ಯ ಸಂಪುಟ' (೯೮)ದಲ್ಲಿ ಸಂಪಾದಕ ಸಮಿತಿಯ ಯಾವ ಸದಸ್ಯರ ಹೆಸರೂ ಇಲ್ಲ. ಪುನಃ ನಾನು ಹಾಮಾನಾ ಅವರ ಮೊರೆ ಹೊಕ್ಕೆ, ಸಹಾಯ ಪಡೆದೆ. 'ಕನ್ನಡ ಡಿಂಡಿಮ' (೪೦)ದಲ್ಲಿಯೂ ಹಾಮಾನಾ ಅವರ ಹೆಸರಿಲ್ಲವಾದರೂ ಪ್ರಕಾಶಕರ ಮಾತಿನಲ್ಲಿ ಹಾಮಾನಾ ಸಂಪಾದಕತ್ವದ ಸ್ಪಷ್ಟ ಸೂಚನೆಯಿದೆ. ಹಾಮಾನಾ ಪ್ರಧಾನ ಸಂಪಾದಕರಾಗಿರುವ ಕೆಲವು ಕೃತಿಗಳಲ್ಲಿ [ಉದಾ. 'ವಿಜ್ಞಾನ ಸಾಹಿತ್ಯ ನಿರ್ಮಾಣ' (೬೪), 'ಶಾಸ್ತ್ರ ಸಾಹಿತ್ಯ ನಿರ್ಮಾಣ' (೬೬)] ಹಾಮಾನಾ ಸಂಪಾದಕತ್ವವನ್ನು ಬೇರೆಯಾಗಿ ಪುನಃ ಸೂಚಿಸಿಲ್ಲವಾದರೂ ಮುನ್ನುಡಿಗಳಲ್ಲಿ ಸೂಚನೆ ದೊರೆಯುತ್ತದೆ.

* * *

ಹಾಮಾನಾ ಅವರ ಕೃತಿಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಸೂಚಿಶಾಸ್ತ್ರದ ದೃಷ್ಟಿಯಿಂದ ಪೂರಕ ಮಾಹಿತಿಯನ್ನು ಈ ಮಾತುಗಳಲ್ಲಿ ಹೇಳಬಹುದು: ನಿರ್ದಿಷ್ಟತೆ, ನಿಖರತೆಗಳು ಹಾಮಾನಾ ಅವರಲ್ಲಿ ಎದ್ದು ಕಾಣುವ ಗುಣ. ಅವರ ಪುಸ್ತಕಗಳಲ್ಲಿ ಗ್ರಾಂಥಿಕ ವಿವರಗಳು ಮಸುಕಾಗಿರುವುದಿಲ್ಲ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸ್ಪಷ್ಟವಾಗಿರುವುದಿಲ್ಲ. ಯಾವುದೇ ರೀತಿಯ ಗೊಂದಲ ಗೋಜಲುಗಳು ಕಾಣುವುದಿಲ್ಲ, ಪ್ರಶ್ನೆಗಳು ಹುಟ್ಟುವುದಿಲ್ಲ. ಮರುಮುದ್ರಣ ಕಂಡ ಪುಸ್ತಕಗಳ ಹಿಂದಿನ ಮುದ್ರಣಗಳನ್ನು ಅವರು ಬಹುಮಟ್ಟಿಗೆ ಉಲ್ಲೇಖಿಸುತ್ತಾರೆ. ವಿಸ್ತೃತ ಆವೃತ್ತಿಯಾಗಿದ್ದರೆ ಅದನ್ನೂ ಸೂಚಿಸುತ್ತಾರೆ. ಪುಸ್ತಕದ ಸೌಂದರ್ಯವನ್ನು ಕುರಿತಂತೆ ಅವರಿಗೆ ತುಂಬ ಆಸಕ್ತಿ. ಉದಾ. 'ಬೆಳ್ಳಿ ಕರ್ನಾಟಕ' (೧೦) ಕೃತಿಗೆ ಸಾಂಕೇತಿಕವಾಗಿ ಬೆಳ್ಳಿಯ ರೇಕಿನಿಂದ ರಟ್ಟು ಕಟ್ಟಿದೆ. 'ಕಾವ್ಯಕಾರಂಜಿ', 'ಕಾವ್ಯದೀಪ', 'ಕಾವ್ಯನವರಾತ್ರಿ', 'ಕಾವ್ಯಮೇಳ', 'ಕಾವ್ಯೋತ್ಸವ' (೪೨, ೪೩, ೪೪, ೪೫, ೪೬)ಗಳಂತಹ ಸರ್ಕಾರಿ ಪ್ರಕಟಣೆಗಳೂ ಅನ್ವರ್ಥಕವಾದ ಸುಂದರ ಹೊದಿಕೆಗಳನ್ನು ಪಡೆದಿವೆ. ಪ್ರಕಟಣೆಯ ವಿನ್ಯಾಸಗಳ ಬದಲಾವಣೆಗಳನ್ನು ಅವರ ಕೃತಿಗಳು ರಚನಾತ್ಮಕವಾಗಿ ಒಳಗೊಳ್ಳುತ್ತವೆ. ಒಂದೇ ಅಂಕಣ ಮಾಲಿಕೆಯ ಎಲ್ಲ ಪುಸ್ತಕಗಳ ವಿನ್ಯಾಸ ಒಂದೇ ಬಗೆಯದಾಗಿರಬಹುದು (೨೫, ೨೮, ೨೯, ೩೧). ಪುಸ್ತಕಗಳು ಪುನರ್ಮುದ್ರಣಗೊಂಡಾಗ ವಿನ್ಯಾಸ ಬದಲಾಗದೆ ಇರಬಹುದು (೩೩), ಬದಲಾವಣೆ ಕಾಣಬಹುದು (೨). ಹಾಮಾನಾ ಅವರ ಕೃತಿಗಳ ರಕ್ಷಾಕವಚಗಳಲ್ಲಿ ಭಾವಚಿತ್ರ, ರೇಖಾಚಿತ್ರ ಹಾಗೂ ವಿವಿಧ ಬಗೆಯ ವರ್ಣವಿನ್ಯಾಸಗಳು ಕಾಣಸಿಕೊಳ್ಳುತ್ತವೆ, ಆಸಕ್ತರಿಗೆ ಅನುಕೂಲವಾಗುವ, ಕುತೂಹಲಿಗಳಿಗೆ ಇಷ್ಟವಾಗುವ ಅಪ್ಪಟ ವಿವರಗಳು ಅವರ ಮುನ್ನುಡಿಗಳಲ್ಲಿರುತ್ತವೆ. ತಮ್ಮ ಸಂಕಲನಗಳ ಲೇಖನಗಳು ಪೂರ್ವ ಪ್ರಕಟಿತವಾಗಿದ್ದಲ್ಲಿ ಅವುಗಳ ವಿವರಗಳನ್ನು ನೀಡುವುದು ಅವರಿಗೆ ಸಹಜ ಸಂಗತಿ. ತಾವು ಪುಸ್ತಕವನ್ನು ಅರ್ಪಿಸಿದವರಿಗೆ ಸಂಬಂಧಿಸಿದಂತೆ ಹಾಮಾನಾ ಆಪ್ತವಾದ ಬರವಣಿಗೆಯಲ್ಲಿ ಆತ್ಮೀಯತೆಯ ಹೊಳೆಯನ್ನು ಹರಿಸುತ್ತಾರೆ. ಅಪವಾದವೆಂಬಂತೆ ಮೌನಧಾರಣೆಯೂ ಅವರಲ್ಲಿ ಉಂಟು (೧, ೨೫, ೩೧). ತಮ್ಮ ಉದ್ದೇಶವನ್ನು ವಿವರಿಸಿ ಪುಸ್ತಕದ ಚೌಕಟ್ಟನ್ನು ಅವರು ಸ್ಪಷ್ಟಪಡಿಸುತ್ತಾರೆ. ಪುಸ್ತಕದ ಸೀಮಿತಗಳನ್ನು ಒಪ್ಪಿಕೊಳ್ಳುವ ನಮ್ರತೆ ಅವರದು. ತಮ್ಮ ಪುಸ್ತಕದ ಸಿದ್ಧತೆಯಲ್ಲಿ ಸಾಮಗ್ರಿ ಸಂಗ್ರಹಣದಿಂದ ಹಿಡಿದು ಕರಡಚ್ಚು ತಿದ್ದುವವರವರೆಗೆ ತಮಗೆ ನೆರವನ್ನು ನೀಡಿದ ಎಲ್ಲರಿಗೆ ಅವರು ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ನಮ್ಮ ಬಹುಪಾಲು ಪುಸ್ತಕಗಳಲ್ಲಿ ಅವುಗಳ ಚೆಲುವಿಗೆ ಕಾರಣರಾದ ಕಲಾವಿದರ ಹೆಸರಿರುವುದಿಲ್ಲ, ಇದ್ದಾಗಲೂ ಅವರ ದುಡಿಮೆಯ ಸ್ವರೂಪ ಎಂಥದೆಂದು ಅನೇಕ ಬಾರಿ ವಿಶದವಾಗುವುದಿಲ್ಲ. ಪುಸ್ತಕ ಪೂರ್ಣ ಸಿದ್ಧವಾಗುವವರೆಗೆ ಹಲವು ಬಾರಿ ಕಲಾವಿದರು ಯಾರೆಂಬುದು ಲೇಖಕರಿಗೇ ತಿಳಿದಿರುವುದಿಲ್ಲ. ಇಂಥ ಹಲವು ಕಾರಣಗಳಿಂದ ನಮ್ಮ ಅನೇಕ ಸಾಹಿತಿಗಳು ಕಲಾವಿದರ ಸ್ಮರಣೆಯನ್ನು ಮಾಡುವುದೂ ಇಲ್ಲ. ಇದಕ್ಕೆ ಅಪವಾದಗಳಿಲ್ಲವೆಂದಲ್ಲ, ತೀರ ವಿರಳ ಎಂದಷ್ಟೇ ಹೇಳಬಹುದು. ಹಾಮಾನಾ ಅಂಥ ವಿರಳರಲ್ಲಿ ಒಬ್ಬರು. ಸಂಬಂಧಪಟ್ಟ ಕಲಾವಿದರಿಗೆ ಅವರು ವಂದನೆ ತಿಳಿಸುವ ಪರಿಪಾಠವನ್ನು ಇಟ್ಟುಕೊಂಡಿರುವುದಕ್ಕೆ ಅವರ ಹಲವು ಪುಸ್ತಕಗಳು ಸಾಕ್ಷಿ ನುಡಿಯುತ್ತವೆ.

ಇಲ್ಲಿನ ನೂರ ಇಪ್ಪತ್ತನಾಲ್ಕು ನಮೂದುಗಳು ಏಳು ಆಕಾರಗಳಲ್ಲಿ ಇವೆ. ವಿವರಗಳು ಹೀಗಿವೆ: ಡೆಮ್ಮೈ ಷೋಡಶ—ಎರಡು; ಡೆಮ್ಮೈ ದ್ವಾದಶ—ಹದಿನಾಲ್ಕು; ಡೆಮ್ಮೈ ಅಷ್ಟ—ಐವತ್ತೈದು; ಡೆಮ್ಮೈ ಚತುರ್ಥ—ಹತ್ತು; ಕಿರೀಟ ಅಷ್ಟ—ನಲವತ್ತೊಂದು; ಕಿರೀಟ ಚತುರ್ಥ—ಒಂದು; ರಾಯಲ್ ಅಷ್ಟ—ಒಂದು.

ಹಾಮಾನಾ ಕೃತಿಗಳ ಬ್ಲರ್ಬ್ ಪುಸ್ತಕಕ್ಕೆ ಪೂರಕವಾಗಿರುತ್ತದೆ. ಅವುಗಳಲ್ಲಿ ವ್ಯಕ್ತಿ ಪರಿಚಯ ವಿರಬಹುದು (ಉದಾ. ೨೦), ಕೃತಿ ಪರಿಚಯವಿರಬಹುದು (ಉದಾ. ೩೪). ಕೆಲವು ಪುಸ್ತಕಗಳಲ್ಲಿ ಹಾಮಾನಾ ಅವರ ಸೂತ್ರ ಸಮಾನ ಮಾತುಗಳೋ (ಉದಾ. ೮), ಹಿಂದಿನ ಕೃತಿಯ ಬಗೆಗೆ ತಜ್ಞರ ಅಭಿಪ್ರಾಯಗಳೋ (ಉದಾ. ೩), ಪ್ರಸ್ತುತ ಕೃತಿಯ ಬಗೆಗೆ ವಿದ್ವಾಂಸರ ಹೇಳಿಕೆಗಳೋ (ಉದಾ. ೯), ಪ್ರಸಕ್ತ ಪುಸ್ತಕಕ್ಕೆ ಹೊಂದುವ ವಿಮರ್ಶಕರ ನುಡಿಗಳೋ (ಉದಾ. ೨-೨) ಇರುತ್ತವೆ. ಬ್ಲರ್ಬ್‌ನಲ್ಲಿ ಮುನ್ನುಡಿಯ ಮಾತುಗಳೂ ಇರಬಹುದು (ಉದಾ. ೫೦), ಕೃತಿಯ ಒಂದು ಪುಟ ಹಸ್ತಾಕ್ಷರದಲ್ಲಿ ಪುನರ್ಮುದ್ರಿತವಾಗಿರಬಹುದು (ಉದಾ. ೩೭). ಪುಸ್ತಕದ ಕೇಂದ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿಯ ಪ್ರಮುಖ ವಿಚಾರಗಳಿರಬಹುದು (ಉದಾ. ೬೯), ಕೃತಿಯ ಸಂದರ್ಭಕ್ಕೆ ತಕ್ಕ ಭಾವಚಿತ್ರಗಳಿರಬಹುದು (ಉದಾ. ೫೯). ಪುಸ್ತಕದ ಮುಂಭಾಗ, ಹಿಂಭಾಗಗಳು ಒಂದೇ ರೀತಿ ಇರಬಹುದು (ಉದಾ. ೮೫). ಪ್ರಕಾಶಕರ ನಿವೇದನೆಯೋ (ಉದಾ. ೧೩), ಪ್ರಕಟಣ ಸಂಸ್ಥೆಯ ಕೃತಿಪಟ್ಟಿಯೋ (ಉದಾ. ೧೪) ಇರಬಹುದು.

ಹಾಮಾನಾ ತಮ್ಮ ಕೃತಿಗಳಿಗೆ ನಾಮಕರಣ ಮಾಡುವುದರಲ್ಲಿ ಒಂದು ನಿಶ್ಚಿತ ಕ್ರಮವನ್ನು ಅನುಸರಿಸುತ್ತಾರೆ. ತಮ್ಮ ಸಾರಸ್ವತ ರಚನೆಗಳ ಹೆಸರುಗಳನ್ನು ಸಕಾರದಿಂದ ಆರಂಭಿಸುವುದು ಅವರಿಗೆ ತುಂಬ ಪ್ರಿಯ ಎಂಬುದು ಸುಸ್ಪಷ್ಟ. ವಿಚಾರ, ವಿಮರ್ಶೆ ವಿಭಾಗದ ಹದಿನಾಲ್ಕು ನಮೂದುಗಳಲ್ಲಿ ಹನ್ನೊಂದರ ಹಾಗೂ ಅಂಕಣ, ಆಕಾಶವಾಣಿ ಚಿಂತನ ವಿಭಾಗದ ಹದಿಮೂರು ನಮೂದುಗಳಲ್ಲಿ ಹನ್ನೆರಡರ ಹೆಸರುಗಳು ಸಕಾರದಿಂದ ಆರಂಭವಾಗಿರುವುದು ಆಕಸ್ಮಿಕವಲ್ಲ. ಜೊತೆಗೆ ಅನುಪ್ರಾಸದಲ್ಲಿಯೂ ಅವರಿಗೆ ಆಸಕ್ತಿ ಎಂಬುದು ಸುವ್ಯಕ್ತ (೪೮, ೮೩, ೧೧೫). ಹಾಮಾನಾ ಅವರ ಕೆಲವು ಕೃತಿಗಳ ಹೆಸರುಗಳು ಆಯಾ ಕೃತಿಯ ಒಟ್ಟು ಸ್ವರೂಪವನ್ನು ತಿಳಿಸುವಂಥವು (೯, ೨೨). ಕೆಲವು ಕೃತಿಗಳಲ್ಲಿ ಯಾವುದಾದರೊಂದು ಪ್ರಬಂಧ/ಲೇಖನ/ಕಥೆಯ ಹೆಸರು ಇಡೀ ಕೃತಿಗೆ ಹೆಸರು ನೀಡಿರುವುದುಂಟು (೧, ೩, ೭೨). ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಕೃತಿಯಾಗಿದ್ದಲ್ಲಿ ಆ ವ್ಯಕ್ತಿಯ ಹೆಸರೇ ಕೃತಿಯ ಹೆಸರೂ ಆಗಿರುವುದುಂಟು (೪, ೫). ಅದು ಆತ್ಮೀಯ ಸಂಬೋಧನೆಯೂ ಆಗಿರಬಹುದು (೩೮). ತಮ್ಮ ಹೆಸರಿನಲ್ಲಿ ತಮ್ಮ ಪ್ರಕಾರವನ್ನು ಹೊರಗೆಡಹುವ ಕೃತಿಗಳೂ ಇವೆ (೪೨, ೪೩, ೪೪, ೪೫, ೪೬). ಪುಸ್ತಕ ಹೊರಬರುತ್ತಿರುವ ಸಂದರ್ಭದ ಸೂಚನೆ ಹೆಸರಿನಲ್ಲಿ ಇಣುಕುವ ಉದಾಹರಣೆಗಳೂ ಉಂಟು (೧೦, ೫೯, ೮೪). ಸಮಾಜದ ವಕ್ರನೋಟಕ್ಕೆ ಸಿಲುಕಿದ ಬಡಪಾಯಿ ವಸ್ತುವಿನ ಒಳ್ಳೆಯ ಅಂಶವನ್ನು ಗುರುತಿಸಿ ಅದನ್ನು ತಮ್ಮ ಕೃತಿಯ ಹೆಸರಾಗಿಸಿರುವ ಹೃದಯವಂತಿಕೆ ಹಾಮಾನಾ ಅವರದು (೩೩). ಕೆಲವು ಹೆಸರುಗಳು ಅವರ ಆಂತರ್ಯದ ಪ್ರತಿಫಲನ (೮).

ಹಾಮಾನಾ ಅವರ ಕೃತಿಗಳಲ್ಲಿ ಅವರದೇ ಹೆಸರಿನ ಬಳಕೆಯನ್ನು ಕುರಿತು ಒಂದೆರಡು ಸಂಗತಿಗಳನ್ನು ತಿಳಿಸಬಹುದು. ಅವರು ಯಾವುದೇ ಹೊತ್ತಿನಲ್ಲೂ—ತಮ್ಮ ಪ್ರಾರಂಭಿಕ ರಚನೆಗಳಲ್ಲೂ ಸಹ—ಕಾವ್ಯನಾಮವನ್ನು ಬಳಸಿಲ್ಲ. ಹಾ.ಮಾ. ನಾಯಕ (ಉದಾ. ೨೨), ಎಚ್. ಮಾನಪ್ಪ ನಾಯಕ (ಉದಾ. ೭೪), ಎಚ್. ಎಂ. ನಾಯಕ್ (ಉದಾ. ೧೧೯)—ಈ ಮೊದಲಾದ ರೀತಿಯಲ್ಲಿ ಅವರ ಹೆಸರು ಅವರ ಗ್ರಂಥಗಳಲ್ಲಿ ಚಲಾವಣೆಯಾಗಿದೆ. ಕೆಲವು ಕೃತಿಗಳಲ್ಲಿ ಎರಡು ರೂಪಗಳು ಬಳಕೆಯಾಗಿರುವುದೂ ಉಂಟು (ಉದಾ. ೪೭, ೬೧). ಮೈಸೂರು ವಿಶ್ವವಿದ್ಯಾನಿಲಯದ ೨೨-೯-೧೯೭೦ರ ಅಧಿಕೃತ ಪ್ರಕಟಣೆಯಿಂದ ಮಾನಪ್ಪ ನಾಯ್ಕ ಎಂದಿದ್ದ ಅವರ ಹೆಸರು ಹಾ.ಮಾ. ನಾಯಕ ಎಂದಾಯಿತೆಂದು ತಿಳಿಯುತ್ತದೆ. ಅನಂತರ ಆ ಹೆಸರೇ ಪೂರ್ತಿಯಾಗಿ ಸ್ವೀಕೃತವಾಗಿರುವುದು ಸಹಜವಾಗಿಯೇ ಇದೆ. ಈ ದಿನಗಳಲ್ಲಿ ಅವರನ್ನು ಕುರಿತ ಬರವಣಿಗೆಯಲ್ಲಿ ಹಾಮಾನಾ ಎಂಬುದು ಸಹ ಸಮಾನವಾಗಿ—ಹೆಚ್ಚು ಕಡಿಮೆ ಕಾವ್ಯನಾಮದಂತೆ—ಬಳಕೆಯಾಗುವುದನ್ನು ಇಲ್ಲಿ ನೆನೆಯಬಹುದು.

ಈ ಸೂಚಿಯ ಹಸ್ತಪ್ರತಿ ಪೂರ್ಣ ಸಿದ್ಧವಾಗಿ ಅಚ್ಚಿನ ಮನೆಗೆ ಹೋಗುವ ಹಂತದಲ್ಲಿದ್ದಾಗ ದೊರಕಿದ/ಹೊರಬಂದ ಪುಸ್ತಕಗಳ ವಿವರಗಳನ್ನು ಹೆಚ್ಚಿನ ನಮೂದುಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಕೊಟ್ಟಿದೆ. ಆ ನಮೂದುಗಳ ವಿವರಗಳ ನಂತರ ಯಾವ ವಿಭಾಗಕ್ಕೆ ಇವುಗಳು ಸೇರಬೇಕು ಎಂಬುದನ್ನು ಸೂಚಿಸಿದೆ. ಕ್ರಮಾಂಕಗಳು ಇಲ್ಲಿ ಮುಂದುವರೆದಿವೆ. ಈ ನಮೂದುಗಳಿಗೆ ಸಂಬಂಧಿಸಿದ ಆನುಷಂಗಿಕ ಮಾಹಿತಿಯನ್ನು ಆಯಾ ವಿಭಾಗದ ಟಿಪ್ಪಣಿಯಲ್ಲಿ ಆಗಲೀ ಸಹಾಯಕ ಸೂಚಿಗಳಲ್ಲಿ ಆಗಲೀ ಸೇರಿಸಲಾಗಿಲ್ಲ ಎಂಬುದನ್ನು ಓದುಗರು ದಯವಿಟ್ಟು ಗಮನಿಸಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಮಾನಾ ತಮ್ಮ ಐವತ್ತನೆಯ ವಯಸ್ಸಿನಲ್ಲಿ ಐದು (೧೦, ೧೮, ೧೯, ೨೧, ೨೪) ಪುಸ್ತಕಗಳನ್ನು ಹೊರತರಲು ನಿರ್ಧರಿಸಿ ಕಾರ್ಯಗತ ಮಾಡಿದ್ದಾರೆ. ಅದೇ ಜಾಡಿನಲ್ಲಿ ಈಗ ತಮ್ಮ ಅರುವತ್ತನೆಯ ವಯಸ್ಸಿನಲ್ಲಿ 'ಅರುವತ್ತರ ಆರಲು' ಮಾಲೆಯಲ್ಲಿ ಹತ್ತು ಪುಸ್ತಕಗಳನ್ನು ಪ್ರಕಟಿಸಲು ಯೋಜಿಸಿದ್ದಾರೆ. ಮೂರು ಕೃತಿಗಳು (೧೨೭, ೧೨೮, ೧೨೯) ಈಗಾಗಲೇ ಹೊರಬಂದಿವೆ.

* * *

ಹಾಮಾನಾ ಅವರ ಅಪ್ರಕಟಿತ ಕೃತಿಗಳನ್ನು ಕುರಿತಂತೆ ನನ್ನ ಗಮನಕ್ಕೆ ಬಂದಿರುವ ಸಂಗತಿಗಳು ಇಷ್ಟು: 'ಬಯಲ ಬಯಕೆ' ಎಂಬ ಅವರ ಕಾದಂಬರಿಯಾಗಲೀ 'ಹೊಸ ಬಾಳಿನ ಹೋರಾಟ' ಎಂಬ ಕಥಾಸಂಕಲನವಾಗಲೀ ಬೆಳಕು ಕಂಡಿಲ್ಲ. 'ಯಶೋಗೀತ'[೧] ಎಂಬ ಕವನಸಂಕಲನವೂ ಅಪ್ರಕಟಿತ. ಅವರ ಬಿಡಿಕವನಗಳು ನಿಯತಕಾಲಿಕೆಗಳಲ್ಲಿ ಪ್ರಕಟವಾದದ್ದುಂಟು. ಇತ್ತೀಚಿನ ಉದಾಹರಣೆ ಎಂದರೆ ತಮ್ಮ ರಷ್ಯಾ ಪ್ರವಾಸದ ನಂತರ ಅವರು 'ಪ್ರಜಾವಾಣಿ'ಯಲ್ಲಿ ಪ್ರಕಟಿಸಿದ 'ರಷ್ಯಾ ದಿನಚರಿಯಿಂದ'. ಅವರ ಆಕಾಶವಾಣಿ ರೂಪಕ/ನಾಟಕಗಳು ಸಹ ಅಚ್ಚಿನ ಮನೆ ತಲುಪಿಲ್ಲ. ಅವರು ಹಲವು ಬಾರಿ ವಿದೇಶ ಪ್ರವಾಸವನ್ನು ಕೈಗೊಂಡಿದ್ದರೂ ಪ್ರವಾಸಕಥನ ಒಂದೂ ಅವರಿಂದ ರಚಿತವಾಗಿಲ್ಲ. ತಮ್ಮ ಆತ್ಮಕಥೆಯನ್ನು ಅವರು ಇನ್ನೂ ಬರೆಯಬೇಕಾಗಿದೆ.

ಹಾಮಾನಾ ಅವರ ಕಾವ್ಯದ ಒಲವನ್ನು ಕುರಿತಂತೆ ಒಂದೆರಡು ವಿಚಾರಗಳನ್ನು ಪ್ರಸ್ತಾಪಿಸುವುದು ಸೂಕ್ತ ಎಂದುಕೊಂಡಿದ್ದೇನೆ. ನಾಡಿಗೆ ಸ್ವಾತಂತ್ರ್ಯ ಬಂದಾಗ ಹಾಮಾನಾ ಅವರಿಗೆ ಹದಿನಾರರ ಹರೆಯ. ಇಡೀ ದೇಶ ಸಂಭ್ರಮದಿಂದ ಪಾಲುಗೊಂಡ ಆ ಸಂದರ್ಭವನ್ನು ಅವರು ವಿಶಿಷ್ಟ ರೀತಿಯಲ್ಲಿ ಆಚರಿಸಿದರು. ಆಗ ಅವರು ಅನೇಕರಂತೆ ಸಿಹಿ ಹಂಚಬಹುದಾಗಿತ್ತು, ಭಾಷಣ ಮಾಡಬಹುದಾಗಿತ್ತು. ಆದರೆ ಪದ್ಯ ಬರೆದು ಕರಪತ್ರದಂತೆ ಮುದ್ರಿಸಿ ಹಂಚಿದ್ದು ಗಮನಾರ್ಹ. ಅವರ ಮೂರು ಅನುವಾದ ಕೃತಿಗಳಲ್ಲಿ ಎರಡು (೩೫, ೩೭) ಕವನಸಂಗ್ರಹಗಳು ಎಂಬುದು ಪರಿಗಣಿಸಬೇಕಾದ ಸಂಗತಿ. ಮೈಥಿಲಿ, ಪಂಜಾಬಿ ಭಾಷೆಗಳಿಂದ ಕವನಗಳನ್ನು ಕನ್ನಡಕ್ಕೆ ತಂದ ಹಾಮಾನಾ ಈಗ ಕಾಶ್ಮೀರಿಯಿಂದ ಅಂಥದೇ ಪ್ರಯತ್ನ ನಡೆಸಿದ್ದಾರೆ. ನೂರಕ್ಕೂ ಹೆಚ್ಚು ಸೂಕ್ತಿಗಳನ್ನು ಕನ್ನಡಿಸಿ ಮೊದಲ ಕಂತನ್ನು[೨] ಈಗಾಗಲೇ ಪ್ರಕಟಿಸಿದ್ದಾರೆ. ಅವರ ಸಂಪಾದಿತ ಕೃತಿಗಳಲ್ಲಿ ಒಂಬತ್ತು (೪೦, ೪೨, ೪೩, ೪೪, ೪೫, ೪೭, ೮೧, ೮೨, ೮೪) ಕೃತಿಗಳು ಕಾವ್ಯಕ್ಕೆ ಸಂಬಂಧಿತವಾದುವು. ಎಲ್ಲ ಭಾರತೀಯ ಭಾಷೆಗಳ ಕವನಗಳನ್ನು ಹಿಂದಿಗೆ ಅನುವಾದಿಸಿ ಭಾರತೀಯ ಜ್ಞಾನಪೀಠ ಪ್ರಕಾಶನವು ಹೊರತಂದ ಈವರೆಗಿನ ಎಲ್ಲ ಸಂಕಲನಗಳ ಕನ್ನಡ ಕವನಗಳ ಆಯ್ಕೆಯನ್ನು ಅವರು ಮಾಡಿದ್ದಾರೆ. ಇತರರೊಡನೆ ಸಂಪಾದಿಸಿರುವ ಹಲವು ಪತ್ರಗಳ, ಅನೇಕ ಸೊಗಸಾದ ಕವನಗಳ ಆಯ್ಕೆಗೆ ಹಾಮಾನಾ ಕಾರಣರಾಗಿದ್ದಾರೆ. ಜೊತೆಗೆ ಹಲವು ಕವಿಸಮ್ಮೇಳನಗಳ ಅಧ್ಯಕ್ಷತೆಗಳು ಅವರ ಕಾವ್ಯದ ಒಲವಿಗೆ ಸಾಕ್ಷಿ. ಅವರ ಗದ್ಯ ಸಹ ಹಲವೆಡೆ ಕಾವ್ಯದ ಬಳುಕನ್ನು ಪಡೆಯುತ್ತದೆ. ಈ ಎಲ್ಲ ಅಂಶಗಳೂ ಕೇವಲ ಕಾಕತಾಳೀಯ ಎಂದು ತಳ್ಳಿಹಾಕದಂಥವು. ಒಂದು ವೇಳೆ ಅವರು ಕಾವ್ಯಕ್ಕೇ ಪ್ರಮುಖವಾಗಿ ತಮ್ಮನ್ನು ಒಪ್ಪಿಸಿಕೊಂಡಿದ್ದರೆ ನಮ್ಮ ಚಿಂತನಶೀಲ ಕವಿಗಳಲ್ಲಿ ಒಬ್ಬರಾಗುತ್ತಿದ್ದರು.

* * *

---

[೧] ಈ ಅಪ್ರಕಟಿತ ಕೃತಿಯನ್ನು ಓದಲು ನನಗೆ ಅವಕಾಶ ನೀಡಿದ ಹಾಮಾನಾ ಅವರಿಗೆ ನಾನು ಋಣಿ. ಇಲ್ಲಿ ನಲವತ್ತೊಂಬತ್ತು ಕವನಗಳಿವೆ. ಹೆಚ್ಚಿನವು ಆದರ್ಶ ತುಂಬಿದ ಕನಸುಗಾರಿಕೆಯ ರಚನೆಗಳು. ಪ್ರಕೃತಿ ಪ್ರೇಮ, ನಾಡು ನುಡಿಗಳ ಪ್ರೀತಿ ಹಲವಕ್ಕೆ ವಸ್ತು. ವ್ಯಕ್ತಿ ಚಿತ್ರಗಳೂ ಇವೆ. ಹದಿಹರೆಯಕ್ಕೆ ಸಹಜವಾದ ಪ್ರಣಯ ಕೆಲವು ಕವನಗಳಿಗೆ ಕಾರಣ.

[೨] ಲಲ್ಲ ಸೂಕ್ತಿಗಳು; ಸುದ್ದಿ ಸಂಗಾತಿ, ದೀಪಾವಳಿ ಸಂಚಿಕೆ; ೧೯೯೦; ಪು. ೩೭-೩೯.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಸೂಚಿಯಲ್ಲಿನ ಹಲವು ಕೃತಿ, ದಾಖಲೆಗಳನ್ನು ಪಡೆಯಲು ನಾನು ಹಾಮಾನಾ ಅವರನ್ನು ತುಂಬ ಬಲವಂತ ಮಾಡಿದ್ದೇನೆ, ಪಟ್ಟು ಹಿಡಿದು ಒತ್ತಾಯ ಮಾಡಿದ್ದೇನೆ. ಹಲವು ಬಾರಿ ಕನ್ನಡ ಅಧ್ಯಯನ ಸಂಸ್ಥೆಯಲ್ಲೂ ಅವರ ಮನೆಯಲ್ಲೂ ಅವರನ್ನು ಭೆಟ್ಟಿ ಮಾಡಿದ್ದೇನೆ. ಅಂಥ ಹೊತ್ತಿನಲ್ಲಿ ಅವರ ಸಮಯ ನನ್ನದು ಎಂಬಂತೆ ನಡೆದುಕೊಂಡಿದ್ದೇನೆ. ಒಂದೆರಡು ಬಾರಿ ಅವರಿಗೆ ತುಂಬ ಕೆಲಸವಿದ್ದಾಗ ಅವರು ಈ ಈ ದಿನ ನೀವು ಬರುವುದು ಬೇಡ ಎನ್ನಬೇಕಾಗಿ ಬಂತು! ಆಗೆಲ್ಲ ದೂರವಾಣಿಯ ಮೂಲಕ ಅವರನ್ನು ಸಂಪರ್ಕಿಸಿದ್ದೇನೆ. ಎಷ್ಟೋ ಬಾರಿ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಅವರನ್ನು ತೀರ ಸಹಜವಾಗಿ ಭೇಟಿಯಾದಾಗ ಸಹ ಇದೇ ಸಂಬಂಧದ ಮಾತು ಮುಂದುವರಿಸಿದ್ದೇನೆ. ತನಿಖೆಯಂತಹ ನನ್ನ ಪ್ರಶ್ನೆಗಳಿಂದ ಅವರಿಗೆ ಮುಜುಗರ, ಕಿರಿಕಿರಿಗಳು ಅನೇಕ ಸಲ ಉಂಟಾದುದು ನನಗೆ ಚೆನ್ನಾಗಿಯೂ ಗೊತ್ತು. ಆದರೆ ಬೇರೆ ವಿಧಿಯಿರಲಿಲ್ಲ. ನನ್ನ ಎಲ್ಲ ಒತ್ತಾಯ, ಒತ್ತಡಗಳು ಪುಸ್ತಕದ ಅಚ್ಚುಕಟ್ಟಿಗಾಗಿ ಮಾತ್ರ ಎಂಬುದು ಅವರಿಗೆ ತಿಳಿದ ವಿಷಯವಾಗಿದೆ ಎಂಬುದು ನನಗೆ ಸಮಾಧಾನ ನೀಡುವ ಸಂಗತಿ. ಕೆಲವು ಅಲಭ್ಯ ಕೃತಿಗಳು, ಮುದ್ರಣಗಳು ಅವರ ಸಹಕಾರವಿಲ್ಲದಿದ್ದಲ್ಲಿ ನನಗೆ ದೊರೆಯುವ ಯಾವ ಸಾಧ್ಯತೆಯೂ ಇರಲಿಲ್ಲ ಎಂಬುದು ನನ್ನ ನೆನಪಿನಲ್ಲಿ ಸದಾ ಇರುತ್ತದೆ. ನಾನು ಕೊಟ್ಟ ಎಲ್ಲ ತೊಂದರೆಗಳನ್ನೂ ತಾಳಿ ಕೊಂಡು ನನಗೆ ಅಗತ್ಯವಿದ್ದ ದಾಖಲೆಗಳನ್ನು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞ.

ಒಂದು ರೀತಿಯಲ್ಲಿ ನನಗೆ ಇಂಥದೊಂದು ಸೂಚಿಯ ಪ್ರಾಥಮಿಕ ತರಬೇತಿ ಹಾಮಾನಾ ಅವರಿಂದಲೇ ನನ್ನ ಪ್ರೌಢಪ್ರಬಂಧ 'ಎಂ. ಎಸ್. ಪುಟ್ಟಣ್ಣ: ಒಂದು ಅಧ್ಯಯನ'ದ ಸಿದ್ಧತೆಯಲ್ಲಿ ಆಗಿತ್ತು. ಗ್ರಂಥಋಣ ವಿಭಾಗದ ವಿವರಗಳನ್ನು ನೀಡಲು ಹಾಮಾನಾ ಅವರ 'ಕನ್ನಡ ಜಾನಪದ ಗ್ರಂಥಸೂಚಿ'ಯನ್ನು ನಾನು ವಿಶೇಷವಾಗಿ ನೆಚ್ಚಿದ್ದೆ. "ಸಂಶೋಧನೆಗೆಂದು ನನ್ನ ಬಳಿ ಬರುವವರಿಗೆಲ್ಲ ಹೀಗೆಯೇ ಮಾಡಿ ಎಂದಿದ್ದರೂ ಅದನ್ನು ನೆರವೇರಿಸಿದವರು ನೀವೊಬ್ಬರೇ" ಎಂದು ಹಾಮಾನಾ ಮೆಚ್ಚಿದ್ದರು. ಕನ್ನಡದ ಅನೇಕ ಹಿರಿಯ ವಿದ್ವಾಂಸರು ಕನ್ನಡದ ಪ್ರೌಢಪ್ರಬಂಧಗಳಲ್ಲಿ ಇತರ ಅನೇಕ ಒಳ್ಳೆಯ ಅಂಶಗಳೊಡನೆ ಅತಿ ಹೆಚ್ಚು ವಿವರಗಳಿಂದ ಕೂಡಿದ ಗ್ರಂಥಸೂಚಿಯನ್ನು ಹೊಂದಿದ ಮೊದಲ ಕೃತಿ ಎಂಬ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಈ ಸೂಚಿ ಸಿದ್ಧವಾಗುತ್ತಿರುವ ಈ ಹೊತ್ತಿನಲ್ಲಿ ಹಾಮಾನಾ ಅವರಿಂದ ನಾನು ಪಡೆದ ಎಲ್ಲ ಸಹಾಯವೂ ನೆನಪಿನಲ್ಲಿದೆ.

ಕರ್ನಾಟಕದ ಹೆಚ್ಚಿನ ವಿಶ್ವವಿದ್ಯಾನಿಲಯಗಳಲ್ಲಿನ ಗ್ರಂಥಾಲಯಗಳ ಹಿಂದಿನ ಕ್ರತುಶಕ್ತಿಯಾಗಿರುವ ಪ್ರೊ. ಕೆ. ಎಸ್. ದೇಶಪಾಂಡೆಯವರು ನನ್ನಲ್ಲಿ ಅವರಿಗೆ ಇರುವ ಅಭಿಮಾನದಿಂದ ನನ್ನ ಪುಸ್ತಕದ ಬಗೆಗೆ ಮೆಚ್ಚು ಮಾತುಗಳನ್ನಾಡಿದ್ದಾರೆ. ಅವರಿಗೆ ನಾನು ಕೃತಜ್ಞ. ಸಂಶೋಧನೆ ಹಾಗೂ ಗ್ರಂಥಾಲಯ ವಿಜ್ಞಾನ ಈ ಎರಡು ಕ್ಷೇತ್ರಗಳಲ್ಲೂ ಹೆಸರು ಮಾಡಿರುವ ಹಿರಿಯ ವಿದ್ವಾಂಸರಾದ ಡಾ. ಶ್ರೀನಿವಾಸ ಹಾವನೂರರು ಇಂಥ ಸೂಚಿಗಳ ಅಗತ್ಯವನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದಾರೆ. ನನ್ನಲ್ಲಿ ಅವರಿಗಿರುವ ಭರವಸೆ, ಅಭಿಮಾನಗಳಿಂದ ನನ್ನ ಬಗ್ಗೆ ಒಳ್ಳೆಯ ಮಾತು ಗಳನ್ನಾಡಿದ್ದಾರೆ. ನಾನು ಅವರಿಗೆ ಋಣಿ.

ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಆರ್. ಎಲ್. ಅನಂತರಾಮಯ್ಯನವರು, ಈ ಹಿಂದೆ ನೋಡಿಯೂ ನಾನು ಮರೆತಿದ್ದ ಎರಡು ಕೃತಿಗಳನ್ನು (೬೪, ೬೬) ನನ್ನ ಗಮನಕ್ಕೆ ತಂದು ವಿಶೇಷವಾದ ಸಹಾಯವನ್ನು ಮಾಡಿದ್ದಾರೆ. ಪ್ರಸಾರಾಂಗದ ಹಲವು ಪ್ರಕಟಣೆಗಳನ್ನು ನನ್ನ ಪರಾಮರ್ಶನಕ್ಕಾಗಿ ಒದಗಿಸಿದ್ದಾರೆ. ನಮೂದುಗಳ ಆಕಾರಕ್ಕೆ ಸಂಬಂಧಪಟ್ಟಂತೆ ನನ್ನ ಅರಿವು ಹೆಚ್ಚಾಗುವಂತೆಯೂ ಅವರು ನೋಡಿಕೊಂಡಿದ್ದಾರೆ. ಕನ್ನಡ ಪುಸ್ತಕೋದ್ಯಮ ಕೈಂಕರ್ಯದ ಕುರುಹಾಗಿ ಅವರು ಹೊರತರುತ್ತಿರುವ 'ಗ್ರಂಥಲೋಕ'ದ ಸಾಹಚರ್ಯದಿಂದ ನನಗೆ ತುಂಬ ಸಹಾಯವಾಗುವಂತೆ ಮಾಡಿದ್ದಾರೆ. ಈ ಪುಸ್ತಕದ ಪ್ರಕಟಣೆಯ ಪ್ರತಿ ಹಂತದಲ್ಲೂ ಅವರು ತಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಮೂಲ್ಯ ಸಲಹೆಗಳನ್ನು ಕೊಟ್ಟಿದ್ದಾರೆ. ಅಚ್ಚಾದ ಪುಸ್ತಕ ಕನ್ನಡಿಗರ ಕೈ ಸೇರುವಲ್ಲಿ 'ಗ್ರಂಥಲೋಕ' ಮಹತ್ತರ ಪಾತ್ರವನ್ನು ವಹಿಸಿದೆ. 'ಗ್ರಂಥಲೋಕ'ದಲ್ಲಿನ ಪ್ರಕಟಣಪೂರ್ವ ಯೋಜನೆಯ ಹಿಂದೆ ಇರುವ ಶಕ್ತಿ ಪೂರ್ತಿಯಾಗಿಯೂ ಅನಂತರಾಮಯ್ಯನವರದೇ. ಇಂಥದೊಂದು ಸುಂದರ ಯೋಜನೆಯಲ್ಲಿ 'ಹಾಮಾನಾ ಹೊತ್ತಗೆಗಳು' ಕೃತಿಯ ಮೂಲಕ ಒಂದು ಪ್ರಯೋಗ ಮಾಡಬೇಕೆಂದು ನಿರ್ಧರಿಸಿರುವುದಾಗಿಯೂ ಅದಕ್ಕೆ ನಾನು ಅನುವು ಮಾಡಿಕೊಡುವುದರ ಮೂಲಕ ಸಹಕರಿಸ ಬೇಕೆಂದೂ ವಾದಿಸಿ ಇಲ್ಲಿ ಹಣದ ಪ್ರಸಕ್ತಿಯೇ ಬರುವುದಿಲ್ಲ ಎಂಬ ತರ್ಕವನ್ನು ನನ್ನ ಮುಂದಿಟ್ಟವರು ಅವರು. ಪುಸ್ತಕ ಸಿದ್ಧವಾಗುತ್ತ ಬಂದಂತೆ "ನಿಮ್ಮ ಕೆಲಸ ಹೂವಿನ ಸರವನ್ನೆತ್ತಿದಂತೆ ಸಾಗುತ್ತಿದೆ" ಎಂಬ ನಿರ್ಮಲ ಸಂತೋಷವನ್ನು ವ್ಯಕ್ತಪಡಿಸಿದವರು ಅವರು. ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನಗೆ ಪ್ರಿಯವಾದ ಸಂಗತಿ.

ಈ ಸೂಚಿಯನ್ನು ಸಿದ್ಧಪಡಿಸುವಾಗ ಕನ್ನಡದ ಅನೇಕ ಗ್ರಂಥಸೂಚಿಗಳಿಂದ ಸಹಾಯವನ್ನು ಪಡೆದಿದ್ದೇನೆ. ಹಾಮಾನಾ ಅವರದೇ ಮೂರು (೧೧೨, ೧೧೪, ೧೧೫) ಗ್ರಂಥಸೂಚಿಗಳಿವೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಕನ್ನಡ ಗ್ರಂಥಸೂಚಿಯ ಹನ್ನೊಂದು ಸಂಪುಟ ಗಳನ್ನು ನೋಡಿದ್ದೇನೆ. ಅವುಗಳಲ್ಲಿ ಕಡೆಯ ಹತ್ತು ಸಂಪುಟಗಳ (೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧) ಸಂಪಾದಕ ಸಮಿತಿಯಲ್ಲಿ ಹಾಮಾನಾ ಅವರೂ ಒಬ್ಬರು. ಇವುಗಳಲ್ಲದೆ 'ಗೋವಿಂದ ಪೈ ವಾಙ್ಮಯ ದರ್ಶನ' (ಸಂ. ಮ. ವಿ. ನಾಯಕ, ಶ್ರೀನಿವಾಸ ಹಾವನೂರ), 'ಸುರುಚಿ: ನೂರು' (ಸಂ. ಸಿ. ಪಿ. ಕೆ.), 'ಐಬಿಎಚ್ ಗ್ರಂಥಾವಳಿ' (ಸಂ. ಟಿ. ವಿ. ವೆಂಕಟರಮಣಯ್ಯ) ಗಳನ್ನು ಅವಲೋಕಿಸಿದ್ದೇನೆ. ಈ ಎಲ್ಲ ಸೂಚಿಗಳ ಸಂಪಾ ದಕರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಯಾವ ಸೂಚಿಗಳಲ್ಲೂ ಇಲ್ಲದ ಕೆಲವು ಅಂಶಗಳು ಪ್ರಕೃತ ಸೂಚಿಯಲ್ಲಿವೆ ಎಂದು ನಮ್ರವಾಗಿ ತಿಳಿಸಬಯಸುತ್ತೇನೆ. ಉದಾ. ಪ್ರತಿ ವಿಭಾಗದ ಮೊದಲಲ್ಲಿರುವ ದಾಖಲೆಗಳಿಂದ ಕೂಡಿದ ಬರಹ, ಅನುಬಂಧಗಳಲ್ಲಿನ ಕೆಲವು ಸೂಚಿಗಳು.

ಮಾನಸಗಂಗೋತ್ರಿ ಗ್ರಂಥಾಲಯದ ಕನ್ನಡ ವಿಭಾಗದ ಸಹಾಯಕ ಗ್ರಂಥಪಾಲರಾದ ಶ್ರೀ ಎಂ. ಆರ್. ನಾಗರಾಜು ಅವರೂ ಅದೇ ವಿಭಾಗದ ಬೆರಳಚ್ಚುಗಾರ್ತಿ ಶ್ರೀಮತಿ ಎಚ್. ಆರ್. ವಿಮಲಾ ಅವರೂ ನನಗೆ ಅಗತ್ಯವಿದ್ದ ಪುಸ್ತಕಗಳನ್ನು ಒದಗಿಸುವಲ್ಲಿ ವಿಶೇಷವಾದ ಸಹಾಯ ನೀಡಿದ್ದಾರೆ. ಇವರಿಬ್ಬರಿಗೂ ನಾನು ಋಣಿ. ಡಿ. ಬನುಮಯ್ಯ ಕಾಲೇಜಿನ ಗ್ರಂಥಪಾಲರಾದ ಶ್ರೀ ಟಿ. ಆರ್. ವೆಂಕಟೇಶ್ ಅವರು ನಾನು ಕೇಳಿದ ಪುಸ್ತಕಗಳನ್ನು ನನ್ನ ಕೈಸೇರುವಂತೆ ಮಾಡಿದ್ದಾರೆ, ಅವರಿಗೆ ನಾನು ಕೃತಜ್ಞೆ. ಗೀತಾ ಬುಕ್ ಹೌಸಿನ ಶ್ರೀ ಗೋಪಾಲಕೃಷ್ಣ ಅವರು ನನ್ನ ಮೇಲಿನ ವಿಶ್ವಾಸದಿಂದ ತಮ್ಮಲ್ಲಿನ ಎರಡು ಪುಸ್ತಕಗಳನ್ನು (೧೨೦, ೧೨೩) ನಾನು ಇಚ್ಛಿಸಿದಷ್ಟು ಕಾಲ ಕೊಟ್ಟಿದ್ದಾರೆ. ಅವರ ಉಪಕಾರವನ್ನು ನೆನೆಯುತ್ತೇನೆ. ಮೂರು (೭೮, ೭೯, ೮೦) ಹಿಂದೀ ನಮೂದುಗಳ ಓದುವಿಕೆಯಲ್ಲಿ ಡಾ. ಈ. ಜ್ಯೋತಿ, ಶ್ರೀ ಎಚ್. ವಿ. ರಾಮಚಂದ್ರ ಮತ್ತು ಶ್ರೀ ಎಚ್. ಬಿ. ರಂಗನಾಥ್ ಸಹಕಾರ ನೀಡಿದ್ದಾರೆ. ಎಚ್. ಬಿ. ರಂಗನಾಥ್ ಮರಾಠಿ ಕೃತಿಯ (೧೨೨) ಓದಿನಲ್ಲಿಯೂ ಹಾಮಾನಾ ಹೊತ್ತಗೆಗಳ ಶೇಕಡಾವಾರು ವಿವರಗಳನ್ನು ಪಡೆಯು ವಾಗಲೂ ಸಹಾಯ ಮಾಡಿದ್ದಾರೆ. ಈ ಮೂವರಿಗೆ ನನ್ನ ವಂದನೆಗಳು ಸಲ್ಲುತ್ತವೆ. ಈ ಕೃತಿ ಸಿದ್ಧವಾಗುವ ಹೊತ್ತಿನಲ್ಲಿ ಹಲವು ರೀತಿಯಲ್ಲಿ ನನ್ನ ಸಹಾಯಕ್ಕೆ ಒದಗಿ ಬಂದ ಶ್ರೀಮತಿ ಐ. ಕೆ. ವಸುಂಧರಾ ಅವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

ಇದು 'ಸುಹಾಸ'ದ ಮೊದಲ ಕೃತಿ, ನನಗೆ ಇದೊಂದು ಸಂತೋಷದ ಸಂಗತಿ. ತಪ್ಪಿಲ್ಲದ, ಕ್ಷಿಪ್ರವಾದ, ಸುಂದರವಾದ ಮುದ್ರಣಕ್ಕೆ ಹೆಸರಾದ ಮಣಿಪಾಲದ ಪವರ್ ಪ್ರೆಸ್‌ನಲ್ಲಿ ನನ್ನ ಈ ಪುಸ್ತಕ ಅಚ್ಚಾಗಿರುವುದು ನನಗೆ ಹೆಮ್ಮೆಯ ಸಂಗತಿ. ಮಣಿಪಾಲದ ಈ ಮುದ್ರಣಾಲಯದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿಬ್ಬಂದಿ ಇದನ್ನು ಒಂದು ಗುಂಪುಕಾರ್ಯವಾಗಿ ಪರಿಗಣಿಸಿ ಸಹಕಾರ ನೀಡಿರುವುದು ನನ್ನ ಸ್ಮರಣೆಯಲ್ಲಿ ಸದಾ ಹಸಿರಾಗಿರುತ್ತದೆ. ಮುಖ್ಯವಾಗಿ ಫೋಟೋ ಕಂಪೋಸಿಂಗ್ ವಿಭಾಗದ ಶ್ರೀ ವಿನ್‌ಸ್ಟನ್ ಕರ್ಕಡ, ಕುಮಾರಿ ಶಕುಂತಲಾ, ಕುಮಾರಿ ಪ್ರಭಾವತಿ, ಕರಡಚ್ಚು ತಿದ್ದುವ ಕಾರ್ಯದಲ್ಲಿ ನೆರವು ನೀಡಿದ ಕುಮಾರಿಯರಾದ ವಸುಮತಿ ಮತ್ತು ವಾಣಿ .ಪಿ. ಭಂಡಾರ್ಕರ್ ಹಾಗೂ ಸಂಸ್ಕರಣ ವಿಭಾಗದ ಶ್ರೀ ಡಿ. ಕೆ. ಗುಡಿ ಮತ್ತು ಶ್ರೀ ಬಿ. ಅನಂತರತ್ನಾಕರ ಅವರುಗಳಿಗೆ ನಾನು ಋಣಿ. ಈ ಹೊತ್ತಿನಲ್ಲಿ ಮುದ್ರಣಾಲಯದ ಜನರಲ್ ಮ್ಯಾನೇಜರ್ ಶ್ರೀ ಬಿ. ಕೃಷ್ಣಯ್ಯ ನವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸುವುದು ನನ್ನ ಸಂತೋಷದ ಕರ್ತವ್ಯ. ಕೇವಲ ಆರು ವಾರಗಳಲ್ಲಿ ಫೋಟೋ ಟೈಪ್ ಸೆಟ್ಟಿಂಗ್ ಮತ್ತು ಆಫ್‌ಸೆಟ್ ಮುದ್ರಣದಲ್ಲಿ ನನ್ನ ಕೃತಿ ಅಚ್ಚಾಗುವಂತೆ ಅವರು ನೋಡಿಕೊಂಡಿದ್ದಾರೆ. ಈ ಸಂಬಂಧವಾಗಿ ಮೂರು-ನಾಲ್ಕು ಬಾರಿ ನಾನು ಮಣಿಪಾಲಕ್ಕೆ ಹೋದಾಗ ಅವರು ನನಗೆ ತೋರಿದ ಸೌಜನ್ಯ, ಅಕ್ಕರೆಗಳು ನನ್ನ ನೆನಪಿನಲ್ಲಿ ಯಾವಾಗಲೂ ಇರುವಂತಹವು. ಅವರು ನೀಡಿದ ಆತಿಥ್ಯವನ್ನು ಮರೆಯುವುದಂತೂ ಸಾಧ್ಯವೇ ಇಲ್ಲ.

ಈ ಕೃತಿಯ ಭಾವಚಿತ್ರಗಳನ್ನು ತೆಗೆದುಕೊಟ್ಟವರು ಶ್ರೀ ಎಚ್. ಎಸ್. ಪ್ರಭಾಕರ್. ರಕ್ಷಾಪುಟ ವಿನ್ಯಾಸ ಕಲಾವಿದ ಕಮಲೇಶ್ ಅವರದು. ಬೆಂಗಳೂರಿನ ಎಂ. ಎಸ್. ಸ್ಟುಡಿಯೋ ಮತ್ತು ಮಣಿಪಾಲದ ಪವರ್ ಪ್ರೆಸ್‌ನವರು ಈ ಭಾವಚಿತ್ರಗಳು ರೂಪುಗೊಳ್ಳುವಲ್ಲಿ ಸಹಕರಿಸಿದ್ದಾರೆ. ಈ ಎಲ್ಲರಿಗೂ ನಾನು ಋಣಿ. 'ಗ್ರಂಥಲೋಕ' ಕೈಗೊಂಡ ಪ್ರಕಟಣಪೂರ್ವ ಯೋಜನೆಯಲ್ಲಿ ಸಹಕರಿಸಿದ ಸಾಹಿತ್ಯಾಭಿಮಾನಿಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

* * *

ಹಾಮಾನಾ ಅವರು ಪ್ರಕಟಿಸಿರುವ ಎಲ್ಲ ಪುಸ್ತಕಗಳನ್ನೂ ಈ ಸೂಚಿಯಲ್ಲಿ ಸೇರಿಸಬೇಕೆಂಬುದು ನನ್ನ ಆಸೆಯಾಗಿದ್ದರೂ ಉದ್ದೇಶಿತ ಕರ್ತವ್ಯವಾಗಿದ್ದರೂ ಆ ಕಾರ್ಯ ಪೂರ್ಣವಾಗಿದೆ ಎಂಬ ಭ್ರಮೆ ನನಗಿಲ್ಲ. ಹಾಮಾನಾ ಅವರ ಇತ್ತೀಚಿನ ಕೃತಿಗಳ ಪುಸ್ತಕ ಪಟ್ಟಿಯಲ್ಲೂ ಅವರ ಎಲ್ಲ ಕೃತಿಗಳೂ ದಾಖಲಾಗಿಲ್ಲ. ನಾನು ಅಂತಿಮವಾಗಿ ಸಿದ್ಧಪಡಿಸಿದ 'ಹಾಮಾನಾ ಹೊತ್ತಗೆಗಳು' ಸೂಚಿಯನ್ನು ಅವರ ಕೈಗೆ ಕೊಟ್ಟಾಗ ಅವರು ಹೇಳಿದ "ಇದರಲ್ಲಿ ಇಲ್ಲದ ನನ್ನ ಕೃತಿಗಳು ಯಾವುದೂ ನನಗೆ ತಿಳಿಯದು" ಎಂಬ ಮಾತಿನಿಂದ ಪ್ರಕಟಿತ ಕೃತಿಗಳಲ್ಲಿ ಬಹುಪಾಲು ಈ ಗ್ರಂಥಸೂಚಿಯಲ್ಲಿ ಸೇರಿದೆ ಎಂಬ ಧೈರ್ಯ ನನಗಿದೆ. ಆಕಸ್ಮಾತ್ ಬಿಟ್ಟುಹೋಗಿರಬಹುದಾದ ಕೃತಿಗಳನ್ನು ಯಾರಾದರೂ ತೋರಿಸಿಕೊಟ್ಟಲ್ಲಿ ಕೃತಜ್ಞತೆಗಳೊಡನೆ ಮರುಮುದ್ರಣದಲ್ಲಿ ಅಂಥವನ್ನು ಸೇರಿಸಿಕೊಳ್ಳುತ್ತೇನೆ.[೧]

ಈ ಪುಸ್ತಕವನ್ನು ಸಿದ್ಧಪಡಿಸುವಾಗ—ಪಥ್ಯ ಮತ್ತು ಸೂಚಿಗಳಿಗೆ ಸಂಬಂಧಿಸಿದಂತೆ—ನನ್ನ ಪೂರ್ವಯೋಜಿತ ನೀಲನಕ್ಷೆಯಂತೆಯೇ ಬಹುಪಾಲು ಕಾರ್ಯ ಕೈಗೂಡಿದೆ. ಆದರೂ ಹಾಮಾನಾ ಅವರಿಗೂ ಕನ್ನಡನಾಡಿನ ಹಲವು ಪತ್ರಿಕೆಗಳಿಗೂ ಇರುವ ಸಂಬಂಧ; ಹಾಮಾನಾ ಅವರ ಮಾರ್ಗ ದರ್ಶನದಲ್ಲಿ ಸಿದ್ಧವಾದ ಪ್ರಕಟಿತ/ಅಪ್ರಕಟಿತ ಪಿಎಚ್.ಡಿ. ಪ್ರಬಂಧಗಳು ಹಾಗೂ ಹಾಮಾನಾ ಅವರಿಗೆ ಅರ್ಪಿತವಾದ ಪುಸ್ತಕಗಳು—ಇವುಗಳನ್ನು ಕುರಿತ ಸೂಚಿಗಳನ್ನು ಸೇರಿಸಲಾಗಿಲ್ಲ. ಸಂಗ್ರಹಿತ ಮಾಹಿತಿಗಳಲ್ಲಿನ ಅರೆಕೊರೆಗಳೇ ಇದಕ್ಕೆ ಕಾರಣ. ಕಡೆಗೂ ಹಲವು ಪತ್ರಿಕೆ/ಕೃತಿಗಳು ನೋಡಲೂ ಸಿಗಲಿಲ್ಲ. ದ್ವಿತೀಯ ಮೂಲದಿಂದ ಸಂಗ್ರಹಿತವಾದ ವಿವರಗಳನ್ನು ಬಳಸಿಕೊಳ್ಳಲು ನಾನು ಸಿದ್ಧಳಾಗಿರಲಿಲ್ಲ. ಹೀಗಾಗಿ ಈ ಸೂಚಿಗಳನ್ನು ಕೈಬಿಡುವುದು ಅನಿವಾರ್ಯವಾಯಿತು.

---

[೧] ಪುಸ್ತಕದ ಮುದ್ರಣ ಮುಗಿದು, ಈ ಮುನ್ನುಡಿ ಅಚ್ಚಿಗೆ ಹೋಗುವಾಗ ಹಾಮಾನಾ ಅವರ 'ಸಂಪ್ರತಿ—೨' ಹೊರ ಬಿದ್ದಿದೆ. 'ಸಂಭ್ರಮ' ಮತ್ತು 'ಕನ್ನಡ ಮನಸ್ಸು' ಎಂಬ ಎರಡು ಕೃತಿಗಳ ಮುದ್ರಣ ಮುಗಿಯುತ್ತಾ ಬಂದಿದೆ. ಇನ್ನೂ ಹೆಸರಿಡದ ಮೂರು ಪುಸ್ತಕಗಳು ಅಚ್ಚಿಗೆ ಹೋಗಲಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚಿಶಾಸ್ತ್ರ ನನ್ನ ಆಸಕ್ತಿಯ ವಿಷಯ, ಅರ್ಹತೆಯ ಕ್ಷೇತ್ರವಲ್ಲ. ಹಾಮಾನಾ ಅವರ ಬಗ್ಗೆ ನನಗಿರುವ ಪ್ರೀತಿ, ಗೌರವಗಳ ಕುರುಹಾಗಿ ಮಾತ್ರವೇ ಈ ಪುಸ್ತಕ ಸಿದ್ಧವಾಗಿದೆ. ಸಿದ್ಧತೆಯ ಒಂದು ಹಂತದಲ್ಲಿ ಈ ಸೂಚಿಯ ಕೆಲವು ಭಾಗಗಳನ್ನು ಹಾಮಾನಾ ಅವರಿಗೆ ತೋರಿಸಿದಾಗ ಅವರು ನನ್ನ ಕ್ರಮವನ್ನು ಎಲ್ಲೂ ನಿರಾಕರಿಸಲಿಲ್ಲ ಎಂಬುದು ನನಗೆ ಆತ್ಮವಿಶ್ವಾಸ, ಸಂತೋಷಗಳನ್ನು ನೀಡಿದೆ. ಈ ಸೂಚಿ ಅವರಿಗೆ ಮೆಚ್ಚುಗೆಯಾದೀತು ಎಂದು ಆಶಿಸುತ್ತೇನೆ. ನನ್ನ ಮಿತಿ, ಕೊರತೆಗಳನ್ನು ಬಲ್ಲ ಅವರು ಈ ಕೃತಿಯಲ್ಲಿ ಅಂತರ್ಗತವಾಗಿರುವ ನನ್ನ ಶ್ರಮ, ಕಾಳಜಿಗಳನ್ನು ಗುರುತಿಸುತ್ತಾರೆ ಎಂದು ನಂಬುತ್ತೇನೆ. ಹಾಮಾನಾ ಅವರನ್ನು ಅವರ ಕೃತಿಗಳ ಮೂಲಕ ತುಂಬ ನಿಕಟವಾಗಿ ಅರಿಯುವ ಅವಕಾಶ ಈ ಸೂಚಿಯಿಂದ ನನಗೆ ಲಭಿಸಿದೆ. ಅದು ನನ್ನ ಪಾಲಿನ ಒಂದು ವಿಶಿಷ್ಟ ಅನುಭವ.

ಇನ್ನೊಂದು ವಿಷಯ: ತಜ್ಞತೆಯಾಗಲೀ ಹೆಚ್ಚಿನ ತರಬೇತಿಯಾಗಲೀ ಇಲ್ಲದ ಕ್ಷೇತ್ರದಲ್ಲಿ ಅಡಿಯಿಡುವಾಗ ತೀರ ವೈಯಕ್ತಿಕವಾದ ಆತ್ಮವಿಶ್ವಾಸವೊಂದೇ ಭರವಸೆಯ ಅಂಶವಾಗಿರುತ್ತದೆ. ಈ ಕಾರ್ಯವನ್ನು ಕೈಗೆತ್ತಿಕೊಂಡ ಹೊತ್ತಿನಲ್ಲಿ ನನ್ನ ಸ್ಥಿತಿಯಾದರೂ ಅಷ್ಟೇ ಆಗಿತ್ತು. ಆದರೆ ದಡದ ಮೇಲೆ ನಿಂತು ಈಜುವ ರೀತಿಯನ್ನು ಧ್ಯಾನಿಸುವ ಬದಲು ನೀರಿಗೆ ಬಿದ್ದು ಕೈಕಾಲು ಬಡಿಯುತ್ತಾ ದಡ ಸೇರುವ ಪ್ರಯತ್ನದಿಂದ ಈಜುವುದರ ಮರ್ಮ ತಾನಾಗಿ ಕೈವಶವಾಗುತ್ತದೆ. ದಡ ಬಿಟ್ಟಾಗಿನಿಂದ ದಡ ಸೇರುವವರೆಗಿನ ನಡುವಿನ ಕಾಲದಲ್ಲಿ ನಮ್ಮ ಪಾತ್ರ ಸಕ್ರಿಯವಾದ್ದರಿಂದ ಈಜನ್ನು ಕುರಿತಂತೆ ತಿಳುವಳಿಕೆಯೂ ಲಭಿಸುತ್ತದೆ. ಈ ಸೂಚಿಯನ್ನು ತಯಾರಿಸುವಾಗಿನ ನನ್ನ ಅನುಭವ ಅಂಥದೊಂದು ಉದಾಹರಣೆ. ಸೂಚಿಶಾಸ್ತ್ರವನ್ನು ಕುರಿತಂತೆ ನನ್ನ ಅಜ್ಞಾನ ಈಗ ಎಷ್ಟೋ ಪಾಲು ಕಡಿಮೆ ಯಾಗಿರುವುದು ನನ್ನ ಗಮನಕ್ಕೆ ಬಂದಿದೆ. ಇದು ನನಗೆ ತುಂಬ ಸಂತಸವನ್ನು ನೀಡಿದ ಸಂಗತಿ. ಈ ದೃಷ್ಟಿಯಿಂದ ನನ್ನ ಕೃತಿ ಸಿದ್ಧವಾಯಿತು ಎಂಬ ಆನಂದಕ್ಕಿಂತ ಇದರ ತಯಾರಿಯಲ್ಲಿ ನಾನು ಪಡೆದ ಅರಿವು, ಅನುಭವಿಸಿದ ತೃಪ್ತಿಗಳು ಹೆಚ್ಚಿನವು. ಈ ಕೃತಿಯಲ್ಲಿ ಉಳಿದಿರಬಹುದಾದ ಅರೆಕೊರೆಗಳನ್ನು ನನ್ನ ಗಮನಕ್ಕೆ ತರುವ ನನ್ನ ಓದುಗರಿಗೆ ನಾನು ಋಣಿ.

ನನ್ನ ಪತಿ ರಮಾನಂದರಿಗೆ ಈ ಕೃತಿಯನ್ನು ಅರ್ಪಿಸಿದ್ದೇನೆ. ಅವರು ಅಂಕಿ, ಅಂಶಗಳ, ದಾಖಲೆಗಳ ಪ್ರಿಯರು. ಈ ಕೃತಿ ಅವರಿಗೆ ಒಪ್ಪಿತವಾಗುತ್ತದೆ ಎಂದು ನನ್ನ ನಂಬಿಕೆ.

ಮೈಸೂರು — ಎಚ್. ಎಸ್. ಸುಜಾತಾ

ಬುದ್ಧಪೂರ್ಣಿಮಾ, ಮೇ ೨೮, ೧೯೯೧

CC-0. In Public Domain. Gurukul Kangri Collection, Haridwar

Forwarded free of cost, and with the compliments of the Department of Education, Government of India, New Delhi.

Digitized by Arya Samaj Foundation Chennai and eGangotri

ಪರಿವಿಡಿ

ಕಥೆ, ಚಿತ್ರ, ಪ್ರಬಂಧ ೧
ಜೀವನ ಚರಿತ್ರೆ ೨
ಮಕ್ಕಳ ಸಾಹಿತ್ಯ ೩
ವಿಚಾರ, ವಿಮರ್ಶೆ ೪
ಅಂಕಣ, ಆಕಾಶವಾಣಿ ಚಿಂತನ ೧೦
ಅನುವಾದ ೨೨
ಸಂಪಾದಿತ ೨೪
ಪಠ್ಯಪುಸ್ತಕಗಳು ೭೩
ಸೂಚಿ, ಕೋಶ, ಪರಾಮರ್ಶನ ೮೪
In English ೯೧
ಬೇರೆ ಭಾಷೆಗೆ ೯೬
ಹಾಮಾನಾ ಕುರಿತು ೯೭
ಹೆಚ್ಚಿನ ನಮೂದುಗಳು ೯೮

ಅನುಬಂಧಗಳು

ಹಾಮಾನಾ ಅವರ ಜೀವನದ ಕೆಲವು ಮುಖ್ಯ ವರ್ಷಗಳು ೧೦೭
ಹಾಮಾನಾ ಹೊತ್ತಗೆಗಳು (ಅಕಾರಾದಿ) ೧೧೦
ಹಾಮಾನಾ ಹೊತ್ತಗೆಗಳು (ವಿಷಯ ವಿಭಾಗೀಯ) ೧೧೧
ಹಾಮಾನಾ ಹೊತ್ತಗೆಗಳು (ವರ್ಷವಾರು) ೧೧೨
ಸಹಸಂಪಾದಕರು ೧೧೨
ಅರ್ಪಣೆ ಪಡೆದವರು ೧೧೪
ಕಲಾವಿದರು ೧೧೫
ಪ್ರಕಾಶಕರು ೧೧೬
ಮರುಮುದ್ರಣಗಳು ೧೧೭
ಬಹುಮಾನಗಳು, ಪದಕಗಳು, ಪ್ರಶಸ್ತಿಗಳು ೧೧೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥೆ, ಚಿತ್ರ, ಪ್ರಬಂಧ

ಹಾಮಾನಾ ಅವರ ಸೃಜನಶೀಲ ಸಾಹಿತ್ಯದಲ್ಲಿ ಪ್ರಮುಖವಾದ ಮೂರು (೧, ೨, ೩) ಕೃತಿಗಳು ಈ ವಿಭಾಗದಲ್ಲಿವೆ. ಮೊದಲನೆಯದು ಏಳು ಲಲಿತಪ್ರಬಂಧಗಳ ಸಂಕಲನ, ಪೂರ್ತಿ ಕಲ್ಪನೆಯಿಂದ ಕೂಡಿದ್ದು. ಎರಡನೆಯದು ಹದಿನಾರು ಕಿರುಗತೆಗಳ ಸಂಚಯ, ಸತ್ಯಸಂಗತಿಗಳ ಆಧಾರವಿರುವಂಥವು. ಲಲಿತಪ್ರಬಂಧಗಳಲ್ಲಿ ನಡೆದ ಘಟನೆಗಳೂ ಕತೆಗಳಲ್ಲಿ ಕಲ್ಪನೆಯೂ ಇರುವ ಪರಿಚಿತ ರೀತಿಯ ಹಿನ್ನೆಲೆಯಲ್ಲಿ ಇಲ್ಲಿನ ಭಿನ್ನ ಬಗೆಯನ್ನು ಗಮನಿಸಬಹುದಾಗಿದೆ. ಮೂರನೆಯದರಲ್ಲಿ ಐದು ಕತೆಗಳು ಸ್ವಂತ ರಚನೆಗಳು, ಆರು ಕತೆಗಳು ಅನುವಾದಿತಗಳು. ಈ ಅನುವಾದಗಳಲ್ಲಿ ಒಂದು ಬಂಗಾಳಿಯಿಂದ ಮೂರು ಇಂಗ್ಲಿಷಿನಿಂದ ಬಂದಿವೆ, ಉಳಿದ ಎರಡು ಜನಪದ ಕತೆಗಳಲ್ಲಿ ಒಂದು ಚೀನಾದ್ದು, ಒಂದು ಬಂಗಾಳದ್ದು.

೧

ನಮ್ಮ ಮನೆಯ ದೀಪ

ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು ೫೭೦ ೦೦೧; ಐ.ಮು. ೧೯೮೮; ಡೆಮ್ಮೈ ದ್ವಾದಶ, ೧೨೮; ೧೨.೦೦

ಮಕ್ಕಳ ಮನಸ್ಸು; ನಮ್ಮ ಮನೆಯ ದೀಪ; ರಮೆಯ ತಾಯಿ; ಮಾತಿನ ಮಲ್ಲಿ; ಬಾಲ ಸರಸ್ವತಿ; ಮಕ್ಕಳ ಜಗತ್ತು; ಕನಸಿನ ಮಗಳು ಎಂಬ ಏಳು ಪ್ರಬಂಧಗಳು. ಅನುಬಂಧದಲ್ಲಿ ಪ್ರಕೃತ ಕೃತಿಯನ್ನು ಕುರಿತು ಎಸ್. ಪಿ. ಪಾಟೀಲ, ದೇ. ಜವರೇಗೌಡ, ಎನ್. ಎಸ್. ತಾರಾನಾಥ ಮತ್ತು ಎಂ. ರಾಮಚಂದ್ರರ ಲೇಖನಗಳು.

ಪತ್ನಿ ಯಶೋಧರಾ ಅವರಿಗೆ ಅರ್ಪಣೆ, ಪು. ತಿ. ನರಸಿಂಹಾಚಾರರ ಮುನ್ನುಡಿ. ಮೊದಲ ಮುದ್ರಣ: ಉಷಾ ಸಾಹಿತ್ಯಮಾಲೆ, ಮೈಸೂರು; ೧೯೫೬. ಎರಡು, ಮೂರು, ನಾಲ್ಕನೆಯ ಮುದ್ರಣಗಳು: ಶಾರದಾ ಮಂದಿರ, ಮೈಸೂರು; ೧೯೬೬, ೧೯೭೧, ೧೯೮೪.

ಮರಾಠಿಗೆ ಅನುವಾದಿತ. ನೋಡಿ ನಮೂದು ೧೨೨.

೨

ಬಾಳ್ನೋಟಗಳು

ಉಷಾ ಸಾಹಿತ್ಯಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು ೫೭೦ ೦೦೧; ವಿಸ್ತೃತ ಎ.ಮು. ೧೯೮೩; ಡೆಮ್ಮೈ ದ್ವಾದಶ, ೮೨; ೬.೦೦

ನಮ್ಮ ಅಜ್ಜಯ್ಯ; ಜಲಜಾಕ್ಷಿ ಹೋಟೆಲು; ಗೌಡರು ಕೊಂಡ ಕಾರು; ಮಾಂಗಲ್ಯ ಹರಣ; ಸ್ವಾತಂತ್ರ್ಯೋತ್ಸವ; ಮೂಕ ದೈನ್ಯ; ಪಾರ್ವತಿಯ ಪುಣ್ಯ; ಗಣಮಗ ಗಂಗ; ಷಿಕಾರಿಯಲ್ಲಿ; ಗೌಡರ ಭೂತ; ಪುಟ್ಟಣ್ಣನ ವೇಷ; ನುಂಗಿದ ವಿಷ; ರಾತ್ರಿಶಾಲೆ; ಆಗದ ಮದುವೆ; ಸ್ವಾಮಿಗಳ ಸ್ವಾಮಿದ್ರೋಹ; ಸೇರೆಗಾರ ಸೀನಪ್ಪ ಶೆಟ್ಟರು ಎಂಬ ಹದಿನಾರು ಕಿರುಗತೆಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುರುಗಳು ಕೆ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರಿಗೆ ಅರ್ಪಿತ. ಕಮಕೋಡು ನರಸಿಂಹ ಶಾಸ್ತ್ರಿಗಳ ಹರಕೆ. ಓನ್ನುಡಿಯಲ್ಲಿನ ಬಾಳ್ನೋಟಗಳ ಕತೆ ಸ್ವಾರಸ್ಯಕರ ಅಂಶ ಗಳನ್ನು ಹೇಳುತ್ತದೆ. ಸೇರೆಗಾರ ಸೀನಪ್ಪ ಶೆಟ್ಟರು ಪ್ರಸ್ತುತ ಮುದ್ರಣದಲ್ಲಿ ಹೊಸದಾಗಿ ಸೇರಿದೆ. ಮೊದಲ ಮುದ್ರಣ: ಪ್ರತಿಭಾ ಗ್ರಂಥಮಾಲೆ, ಧಾರವಾಡ; ೧೯೫೦.

೩

ಹಾವು ಮತ್ತು ಹೆಣ್ಣು

ಉಷಾ ಸಾಹಿತ್ಯಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು ೫೭೦ ೦೦೧; ೧೯೬೬; ಕಿರೀಟ ಅಷ್ಟದಳ, ೧೧೨; ೧.೫೦

ಹಾವು ಮತ್ತು ಹೆಣ್ಣು; ಕಲೆಯ ಬೆಲೆ; ಉಭಯ ಸಂಕಟ; ಯಾರೋ ಅಂದರು; ಜಾಣ ಹೆಂಡತಿ; ಅಫೀಮಿನ ಆರಂಭ; ಬೊಂಬಾಯಿ ಬಳಿ; ಆ ರಾತ್ರಿಯ ಬೇಟೆ; ಹೀಗೂ ಜೀವನ; ಹೆಣ್ಣು ಹೃದಯ; ಆಶಾವಾದಿ ಎಂಬ ಹನ್ನೊಂದು ಸಣ್ಣಕತೆಗಳು. ಮೊದಲ ಆರು ಅನುವಾದಗಳು. ಹಾವು ಮತ್ತು ಹೆಣ್ಣು ತಾರಾಶಂಕರ ಬ್ಯಾನರ್ಜಿ ಅವರ ನಾರಿ ಓ ನಾಗಿನಿಯದು. ಕಲೆಯ ಬೆಲೆ, ಉಭಯ ಸಂಕಟ ಮತ್ತು ಯಾರೋ ಅಂದರು ಇವುಗಳು ಕ್ರಮವಾಗಿ ಜಾನ್ ಗಾಲ್ಸ್‌ವರ್ದಿಯವರ ಕ್ವಾಲಿಟಿ, ಇ. ವಿ. ಲುಕಾಸ್ ಅವರ ಟ್ರೈಟ್ ಕಾರ್ನರ್ಸ್ ಮತ್ತು ಎರಿಸ್ಕಿನ್ ಕಾಲ್ಡ್‌ವೆಲ್ ಅವರ ರೂಮರ್. ಜಾಣ ಹೆಂಡತಿ ಮತ್ತು ಅಫೀಮಿನ ಆರಂಭಗಳು ಕ್ರಮವಾಗಿ ಚೀನಾ ಮತ್ತು ಬಂಗಾಳದ ಜನಪದ ಕತೆಗಳು.

ರಂ. ಶ್ರೀ. ಮುಗಳಿ ಅವರಿಗೆ ಅರ್ಪಣೆ. ಸಿಂಹನಾಥನ್ ಅವರ ಹೊದಿಕೆಯ ಚಿತ್ರ.

ಜೀವನ ಚರಿತ್ರೆ

ಈ ವಿಭಾಗದಲ್ಲಿ ಒಂದೇ ಒಂದು ಶೀರ್ಷಿಕೆಯಿದೆ. ಭಾರತದ ಪ್ರಮುಖ ಕವಿಗಳಲ್ಲಿ ಒಬ್ಬರಾದ ರವೀಂದ್ರನಾಥ ಠಾಕೂರರ ಜೀವನ ಚರಿತ್ರೆಯನ್ನು ಇದು ನಿರೂಪಿಸುತ್ತದೆ. ಹಾಮಾನಾ ಅವರು ಬರೆದಿರುವ ಏಕೈಕ ಜೀವನ ಚರಿತ್ರೆ ಒಬ್ಬ ಮಹಾಲೇಖಕನನ್ನು ಕುರಿತದ್ದು ಎಂಬುದು ಗಮನಾರ್ಹವಾಗಿದೆ.

೪

ರವೀಂದ್ರನಾಥ ಠಾಕೂರ್

ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪; ಐ.ಮು. ೧೯೭೧; ಕಿರೀಟ ಅಷ್ಟದಳ, viii+೨೦೦; ೬.೦೦, ೧೦.೦೦

ರವೀಂದ್ರನಾಥ ಠಾಕೂರರ ಜೀವನ ಚರಿತ್ರೆ. ಗುರುದೇವ; ಠಾಕೂರರ ಮನೆತನ; ರಾಜ ಮತ್ತು ಋಷಿ; ಜನನ–ಬಾಲ್ಯ; ಕಲ್ಕತ್ತಾ–ಶತಮಾನದ ಹಿಂದೆ; ಶಾಲೆಯ ಸೆರೆ; ಕಾವ್ಯೋದಯ; ಹಿಮಾಲಯ ದರ್ಶನ; ಸಾಹಿತ್ಯ ಸೃಷ್ಟಿ–ದೇಶಭಕ್ತಿ; ಇಂಗ್ಲೆಂಡಿಗೆ ಎರಡು ಬಾರಿ; ನಿರ್ಝರಿಯ ಎಚ್ಚರ; ಶೆಲೈಡ; ಶಾಂತಿ, ವಿಶ್ವ, ಭಾರತಿ; ದಿಗ್ವಿಜಯ; ಕವಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾವಿಲ್ಲ! ಎಂಬ ಹದಿನೈದು ಅಧ್ಯಾಯಗಳು.

ಗುರುಗಳು ಸುಕುಮಾರ ಸೇನ್ ಅವರಿಗೆ ಅರ್ಪಣೆ. ಕಡೆಯಲ್ಲಿ ರವೀಂದ್ರರ ವಂಶ, ಠಾಕೂರರ ಕೃತಿಗಳು ಮತ್ತು ಗ್ರಂಥಋಣ. ಮುಖಚಿತ್ರದಲ್ಲಿ ರವೀಂದ್ರನಾಥ ಠಾಕೂರರು. ಹೊದಿಕೆಯ ಮೇಲೆ ಅವರದೇ ರೇಖಾಚಿತ್ರ. ಮೊದಲ ಮುದ್ರಣ: 'ಶಿವಪ್ರಸಾದ್', ಬೆಂಗಳೂರು; ೧೯೬೦. ಸಂಕ್ಷಿಪ್ತ ಪಠ್ಯ ಆವೃತ್ತಿ: ನರೇಶ್ ಅಂಡ್ ಕಂಪೆನಿ, ಬೆಂಗಳೂರು; ೧೯೬೧. ಎರಡು, ಮೂರು, ನಾಲ್ಕನೆಯ ಮುದ್ರಣಗಳು: ಶಾರದಾ ಮಂದಿರ, ಮೈಸೂರು; ೧೯೬೭, ೧೯೭೦, ೧೯೭೧.

ಸಂಕ್ಷಿಪ್ತ ಪಠ್ಯ ಆವೃತ್ತಿ ೧೯೬೧ರ ಎಸ್.ಎಸ್.ಎಲ್.ಸಿ. ತರಗತಿಗೆ ಪಠ್ಯವಾಗಿತ್ತು. ಮೂರನೆಯ ಮುದ್ರಣ ೧೯೭೦ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಬಿ.ಎ., ಬಿ.ಎಸ್‌ಸಿ. ಮತ್ತು ಬಿ.ಕಾಂ. ತರಗತಿಗಳಿಗೆ ಪಠ್ಯವಾಗಿತ್ತು.

ಮಕ್ಕಳ ಸಾಹಿತ್ಯ

ಈ ವಿಭಾಗದಲ್ಲಿ ಚಿಣ್ಣರಿಗೆ ಉಪಯುಕ್ತವಾಗುವ ಮೂರು ಪುಸ್ತಿಕೆಗಳಿವೆ. ಅವುಗಳಲ್ಲಿ ಎರಡು (೬, ೭) ಹೊಸದಾಗಿ ಓದು ಕಲಿತ ವಯಸ್ಕರನ್ನು ಉದ್ದೇಶಿಸಿ ಬರೆದವು. ಈ ಮೂರರಲ್ಲಿ ಯಾವುದೊಂದೂ ಮಕ್ಕಳನ್ನು ರಂಜಿಸುವ ಕಲ್ಪನೆಯ ಕತೆಯಲ್ಲ. ಮೂರು ಶೀರ್ಷಿಕೆಗಳೂ ಜೀವನ ಚರಿತ್ರೆಗಳೇ. ಮೊದಲನೆಯದು ಕರ್ನಾಟಕದ ಒಬ್ಬ ಶಿವಶರಣೆಯನ್ನು ಕುರಿತದ್ದು. ಎರಡನೆಯದು ಭಾರತದ ಮಹಾ ಲೇಖಕನೊಬ್ಬನನ್ನು ಪರಿಚಯಿಸುತ್ತದೆ. ಮೂರನೆಯದು ಜಾಗತಿಕ ವ್ಯಾಪ್ತಿಯ ಒಬ್ಬ ಪ್ರವಾದಿಯ ವಿಚಾರವನ್ನು ನಿರೂಪಿಸುತ್ತದೆ.

೫

ಅಕ್ಕಮಹಾದೇವಿ

ಭಾರತ ಭಾರತಿ ಪುಸ್ತಕ ಸಂಪದ, ಬೆಂಗಳೂರು ೫೬೦ ೦೧೯; ೧೯೭೫; ಡೆಮ್ಮೈ ಷೋಡಶ, ೪೮; ೦.೯೦

ಭಾರತ ಭಾರತಿ ಪುಸ್ತಕ ಸಂಪದ (ಪ್ರಧಾನ ಸಂಪಾದಕ: ಎಲ್. ಎಸ್. ಶೇಷಗಿರಿ ರಾವ್) ಮಾಲಿಕೆಯ ೨೫೦ನೆಯ ಕ್ರಮಾಂಕದ ಕೃತಿ. ಅಕ್ಕಮಹಾದೇವಿಯ ಜೀವನದ ಕಿರು ಪರಿಚಯ. ಮಕ್ಕಳಿಗಾಗಿ ಬರೆದ ಸಚಿತ್ರ ಪುಸ್ತಿಕೆ. ಕಲೆ ಜಿ. ಕೆ. ಸತ್ಯ. ಅವರದು.

೬

ಗುರುದೇವ ರವೀಂದ್ರರು

ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪; ಎ.ಮು. ೧೯೭೬; ಕಿರೀಟ ಅಷ್ಟದಳ, ೩೮; ೧.೫೦

ರವೀಂದ್ರನಾಥ ಠಾಕೂರರ ಜೀವನ ಪರಿಚಯವನ್ನು ಹತ್ತು ಕಿರು ಅಧ್ಯಾಯಗಳಲ್ಲಿ ಮಾಡಿಕೊಡುವ ಪುಸ್ತಿಕೆ. ಮಕ್ಕಳನ್ನೂ ಹೊಸದಾಗಿ ಓದು ಕಲಿತ ವಯಸ್ಕರನ್ನೂ ಉದ್ದೇಶಿಸಿದ್ದು. ಇದೇ ಲೇಖಕರ ರವೀಂದ್ರನಾಥ ಠಾಕೂರ್ ಗ್ರಂಥದ (ನಮೂದು ೪)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಧಾರದಿಂದ ರಚಿತ. ಮೊದಲ ಮುದ್ರಣ: ವಯಸ್ಕರ ಶಿಕ್ಷಣ ಸಮಿತಿ, ಮೈಸೂರು; ೧೯೬೧.

೭

ಮಹಮ್ಮದ್ ಪೈಗಂಬರ್

ಶ್ರೀ ಲಕ್ಷ್ಮೀ ಬುಕ್ ಹೌಸ್, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪; ನಾ.ಮು. ೧೯೮೯; ಕಿರೀಟ ಅಷ್ಟದಳ, ೩೬; ೪.೦೦

ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜೀವನ ಪರಿಚಯ. ಮೊದಲ ಮುದ್ರಣ: ವಯಸ್ಕರ ಶಿಕ್ಷಣ ಸಮಿತಿ, ಮೈಸೂರು; ೧೯೫೨. ಎರಡನೆಯ ಮುದ್ರಣ: ಸುರುಚಿ ಪ್ರಕಾಶನ, ಮೈಸೂರು; ೧೯೭೬. ಮೂರನೆಯ ಮುದ್ರಣ: ಶಾರದಾ ಮಂದಿರ, ಮೈಸೂರು; ೧೯೮೪.

ವಿಚಾರ, ವಿಮರ್ಶೆ

ವಿಚಾರ, ವಿಮರ್ಶೆ ವಿಭಾಗದಲ್ಲಿ ಹಾಮಾನಾ ಅವರ ಹದಿನಾಲ್ಕು ಕೃತಿಗಳಿವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳೂ ಸೇರಿದಂತೆ ಹಲವು ಸಮ್ಮೇಳನಗಳಲ್ಲಿ ಹಾಮಾನಾ ಅವರು ಮಾಡಿದ ಉದ್ಘಾಟನ, ಸ್ವಾಗತ, ಪ್ರಧಾನ, ಅಧ್ಯಕ್ಷ ಹಾಗೂ ಸಮಾರೋಪ ಭಾಷಣಗಳು; ವಿಚಾರಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳು; ಅಭಿನಂದನ, ಸನ್ಮಾನ, ಸ್ಮರಣ ಸಂದರ್ಭಗಳಿಗಾಗಿ ಸಿದ್ಧಪಡಿಸಿದ ಬರಹಗಳು; ನಿಯತಕಾಲಿಕೆಗಳ ವಿಶೇಷ ಸಂಚಿಕೆಗಳಿಗಾಗಿ ಬರೆದ ಲೇಖನಗಳು; ಪ್ರಬುದ್ಧ ಕರ್ಣಾಟಕದ ಸಂಪಾದಕೀಯ ಹಾಗೂ ವಸ್ತುಕೋಶದ ಬರಹಗಳು; ವಿಶ್ವಕೋಶ, ಸಾಹಿತ್ಯ ಚರಿತ್ರೆ ಮೊದಲಾದ ಸಂಪುಟಗಳಿಗೆ ಬರೆದ ಲೇಖನಗಳು; ಪುಸ್ತಕ ಪರಿಚಯ, ವಿಮರ್ಶೆಗಳು; ಅನುವಾದಗಳು; ಬೇರೆಯವರ ಕೃತಿಗಳಿಗೆ ಬರೆದ ಮುನ್ನುಡಿಗಳು; ಆಕಾಶವಾಣಿಯಲ್ಲಿ ಪ್ರಸಾರವಾದುವುಗಳು—ಮುಂತಾದವು ಈ ಹೊತ್ತಗೆಗಳಲ್ಲಿ ಒಟ್ಟಾಗಿವೆ.

ಸಂಕಲಿತ ಲೇಖನಗಳಲ್ಲಿ ಏಕಸೂತ್ರತೆಯನ್ನು ಹೊಂದಿರುವ ನಿರ್ದಿಷ್ಟ ಸ್ವರೂಪದ ಹೊತ್ತಗೆಗಳು ಎಂಟು (೮, ೯, ೧೦, ೧೪, ೧೬, ೧೭, ೧೮, ೨೦). ವಿವರಗಳು ಇಂತಿವೆ: ೮—ಐವತ್ತೇಳನೆಯ ಹಾಗೂ ಐವತ್ತೆಂಟನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಭಾಷಣಗಳು; ೯—ಜಾನಪದ; ೧೦—ಕನ್ನಡ ಭಾಷೆ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿಗಳಿಗೆ ಸಂಬಂಧಿತ; ೧೪—ವಿವಿಧ ಸಂದರ್ಭಗಳ ಭಾಷಣಗಳು; ೧೬, ೧೭—ಸಾಹಿತ್ಯಕ; ೧೮—ಇತರರ ಕೃತಿಗಳಿಗೆ ಬರೆದ ಮುನ್ನುಡಿಗಳು; ೨೦—ವ್ಯಕ್ತಿ ಚಿತ್ರಗಳು. ಮಿಕ್ಕ ಆರು (೧೧, ೧೨, ೧೩, ೧೫, ೧೯, ೨೧) ಸಂಕೀರ್ಣ ಸ್ವರೂಪದವು.

ಇವುಗಳಲ್ಲಿ ನಾಲ್ಕು (೯, ೧೫*, ೧೬, ೧೮) ಪುಸ್ತಕಗಳಲ್ಲಿನ ಎಲ್ಲ ಲೇಖನಗಳೂ ಪೂರ್ವ ಪ್ರಕಟಿತ. ಎಂಟು (೮, ೧೦, ೧೧, ೧೨, ೧೪, ೧೯, ೨೦, ೨೧) ಕೃತಿಗಳಲ್ಲಿ ಪೂರ್ವ ಪ್ರಕಟಿತ ವಾದುವೂ ಇದೇ ಮೊದಲ ಬಾರಿಗೆ ಪ್ರಕಟಗೊಳ್ಳುತ್ತಿರುವ ಲೇಖನಗಳೂ ಒಟ್ಟಾಗಿವೆ. ಎರಡು (೧೩, ೧೭) ಕೃತಿಗಳಲ್ಲಿ ಲೇಖನಗಳ ಪೂರ್ವ ಪ್ರಕಟಣೆಯ ಸೂಚನೆ ಸ್ಪಷ್ಟವಾಗಿಲ್ಲ. ಯಾವ ಒಂದು ಕೃತಿಯಲ್ಲೂ ಎಲ್ಲ ಬರಹಗಳೂ ಮೊದಲ ಬಾರಿಗೆ ಬೆಳಕು ಕಾಣುತ್ತಿರುವ ಉದಾಹರಣೆ ಇಲ್ಲ.

* ಇಲ್ಲಿನ ಮೊದಲ ಎರಡು ಲೇಖನಗಳು ಪೂರ್ವ ಪ್ರಕಟಿತವಾಗಿರುವ ಸೂಚನೆ ಸಂಕಲನದಲ್ಲಿ ಇಲ್ಲ. ಕನ್ನಡನುಡಿ ೩೪—೨೦; ದಸರಾದರ್ಶಿನಿ ೧೯೭೨ಗಳಲ್ಲಿ ಕ್ರಮವಾಗಿ ಈ ಎರಡು ಲೇಖನಗಳು ಪ್ರಕಟವಾದ ಮಾಹಿತಿಯನ್ನು ಒದಗಿಸಿದವರು ಹಾಮಾನಾ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೮

ಕನ್ನಡವನ್ನು ಕಟ್ಟುವ ಕೆಲಸ

ಐಬಿಎಚ್ ಪ್ರಕಾಶನ, ೫ನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು ೫೬೦ ೦೦೯; ೧೯೮೭; ಡೆಮ್ಮೈ ದ್ವಾದಶ, xxiv+೨೨೪; ೧೫.೦೦

ಐವತ್ತೇಳನೆಯ ಮತ್ತು ಐವತ್ತೆಂಟನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಸಂಬಂಧಿಸಿದ್ದು. ಕನ್ನಡವನ್ನು ಕಟ್ಟುವ ಕೆಲಸ; ಸಂಪಾದಕೀಯ ಅಭಿಪ್ರಾಯಗಳು; ಕೆಲವು ಪ್ರತಿಕ್ರಿಯೆಗಳು; ಸಮಾರೋಪ ಸಮಾರಂಭ ಭಾಷಣ; ಅಧ್ಯಕ್ಷಪದ ಒಪ್ಪಿಸಿಕೊಟ್ಟ ಭಾಷಣ ಎಂಬ ಐದು ಅಧ್ಯಾಯಗಳು. ಕಡೆಯಲ್ಲಿ ಸಮ್ಮೇಳನದ ಹೊತ್ತಿನಲ್ಲಿ ಪ್ರಕಟವಾದ ಲೇಖನಗಳು, ಸಂದರ್ಶನಗಳು ಮತ್ತು ಸಮ್ಮೇಳನ ಸಮೀಕ್ಷೆಗಳ ವಿವರಗಳಿರುವ ಸಂದರ್ಭ ಬರಹಸೂಚಿ.

ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರಿಗೆ ಅರ್ಪಣೆ. ಹೊದಿಕೆಯ ಚಿತ್ರ ಮತ್ತು ಮುಖಪುಟ ಚಿತ್ರಗಳು ಪಿ. ಎಸ್. ಚಂದ್ರಶೇಖರ ಅವರದು.

೯

ಜಾನಪದ ಸ್ವರೂಪ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು ೫೭೦ ೦೦೨; ಆ.ಮು. ೧೯೯೦; ಡೆಮ್ಮೈ ದ್ವಾದಶ, ೮೦; ೧೨.೦೦

ವಿಲಿಯಂ ಥಾಂಸ್ ಮತ್ತು ಜಾನಪದ; ಜನಪದ ಸಾಹಿತ್ಯ, ಅದರ ಸ್ವರೂಪ; ಜಾನಪದ ಅಧ್ಯಯನ—ವೈಜ್ಞಾನಿಕ ದೃಷ್ಟಿ; ಜನಪದ ಕಲೆ—ಒಂದು ನೋಟ ಎಂಬ ನಾಲ್ಕು ಲೇಖನಗಳ ಸಂಗ್ರಹ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಅರ್ಪಣೆ. ಹೊದಿಕೆಯ ಚಿತ್ರ ವೆಂಕಟೇಶ್ ಅವರದು. ಮೊದಲ ಐದು ಮುದ್ರಣಗಳು ಸಹ ತ. ವೆಂ. ಸ್ಮಾರಕ ಗ್ರಂಥ ಮಾಲೆಯವು; ೧೯೭೧, ೧೯೭೫, ೧೯೭೮, ೧೯೮೨, ೧೯೮೮.

ತೆಲುಗಿಗೆ ಅನುವಾದಿತ. ನೋಡಿ ನಮೂದು ೧೨೧.

೧೦

ಬೆಳ್ಳಿ ಕರ್ನಾಟಕ

ಗೋಧೂಳಿ, ಜಯಲಕ್ಷ್ಮೀಪುರಂ, ಮೈಸೂರು ೫೭೦ ೦೧೨; ೧೯೮೧; ಕಿರೀಟ ಅಷ್ಟದಳ, ೭೮; ೬.೦೦

ನಾನು ಕನ್ನಡ ತಾಯಿಯನ್ನು ಕಂಡೆ; ನಾವು ಬಯಸಿದ ಕರ್ನಾಟಕ; ಕಾಲು ಶತಮಾನದ ಕರ್ನಾಟಕ: ದೇವರಿಲ್ಲದ ಗುಡಿ; ಸಾಂಸ್ಕೃತಿಕ ಅಪೇಕ್ಷೆ ಹಾಗೆಯೇ ಉಳಿದಿದೆ; ಭಾಷೆ—ಸಾಹಿತ್ಯಗಳ ಪ್ರಗತಿ: ಒಂದು ನೋಟ; ಪ್ರಶ್ನೋತ್ತರ; ತಾಯ್ನುಡಿಯಲ್ಲಿ ಶಿಕ್ಷಣ; ಗೋಕಾಕ್ ಸಮಿತಿ ವರದಿ ಎಂಬ ಲೇಖನ, ಭಾಷಣ ಹಾಗೂ ಸಂದರ್ಶನಗಳ ಸಂಕಲನ.

ದ. ರಾ. ಬೇಂದ್ರೆ ಅವರಿಗೆ ಅರ್ಪಣೆ. ರಜತ ವರ್ಣದ ಸಾಂಕೇತಿಕ ರಕ್ಷಾಕವಚ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡ ಸಾಹಿತ್ಯ ಚರಿತ್ರೆ: ಸ್ವರೂಪ, ಸಮೀಕ್ಷೆ; ಕವಿರಾಜಮಾರ್ಗ: ಸಾಹಿತ್ಯ ಮೌಲ್ಯ; ಮೊದಲನೆಯ ಗುಣವರ್ಮ; ಹರಿಹರನ ರಗಳೆಗಳು: ಸಂಖ್ಯೆಯ ಸಮಸ್ಯೆ; ಕನ್ನಡದಲ್ಲಿ ರಾಮಾಯಣ; ಪ್ರಬುದ್ಧ ಕರ್ಣಾಟಕದ ಈಚಿನ ಇಪ್ಪತ್ತೈದು ವರ್ಷಗಳು; ಶ್ರೀ ಸಾಹಿತ್ಯ ಎಂಬ ಏಳು ಲೇಖನಗಳು.

ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರಿಗೆ ಅರ್ಪಿತ. ಕೆ. ಮುರಳೀಧರ ರಾವ್ ಅವರ ಹೊದಿಕೆಚಿತ್ರ.

೧೭

ಸಮೀಕ್ಷೆ

ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು ೫೭೦ ೦೦೧; ೧೯೬೭; ಕಿರೀಟ ಅಷ್ಟದಳ, ೧೮೦; ೩.೭೫

ಹತ್ತು ವರ್ಷಗಳ ಕನ್ನಡ ವಿಮರ್ಶೆ; ಒಂದು ದಶಕದ ಕನ್ನಡ ಸಾಹಿತ್ಯ; ಈಚಿನ ಕನ್ನಡ ವ್ಯಾಕರಣ ಸಾಹಿತ್ಯ ಎಂಬ ಮೂರು ಲೇಖನಗಳು. ವಿಮರ್ಶೆ: ಒಂದು ಪತ್ರ ವ್ಯವಹಾರ; ೧೯೫೫–೬೫ರ ಅವಧಿಯಲ್ಲಿ ಪ್ರಕಟವಾದ ವಿಮರ್ಶಾತ್ಮಕ ಗ್ರಂಥಗಳು; ಕನ್ನಡ ಪುಸ್ತಕಗಳ ವಾರ್ಷಿಕ ಪ್ರಕಟಣೆ; ಸಾಹಿತ್ಯ ಅಕೆಡೆಮಿ ಪ್ರಶಸ್ತಿ ಪಡೆದ ಕನ್ನಡ ಗ್ರಂಥಗಳು ಮತ್ತು ಲೇಖಕರು; ಈಚಿನ ಕನ್ನಡ ವ್ಯಾಕರಣ ಸಾಹಿತ್ಯದ ಕೆಲವು ಗ್ರಂಥಗಳು ಎಂಬ ಐದು ಅನುಬಂಧಗಳು.

ಪು. ತಿ. ನ. ಅವರಿಗೆ ಅರ್ಪಣೆ. ಎರಡನೆಯ ಲೇಖನ ಇಂಗ್ಲಿಷಿಗೆ ಅನುವಾದಿತ. ನೋಡಿ ನಮೂದು ೧೨೩.

೧೮

ಸಿಂಗಾರ

ಉಷಾ ಸಾಹಿತ್ಯಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು ೫೭೦ ೦೦೧; ೧೯೮೧; ಕಿರೀಟ ಅಷ್ಟದಳ, ೧೫೬; ೧೨.೦೦

ಚದುರಂಗರ ಕಥೆಗಳು (ಚದುರಂಗ); ನೆಲದ ಒಡಲು (ಬೆಸಗರಹಳ್ಳಿ ರಾಮಣ್ಣ); ತೇರು ಬಂತು ತೌರಿಗೆ (ಎಂ. ರಾಮಕೃಷ್ಣ); ಪರ್ಜನ್ಯ (ಮಾವಿನಕೆರೆ ರಂಗನಾಥನ್); ಉಪ್ಪು ಕಡಲು (ಎಸ್. ವಿ. ಪರಮೇಶ್ವರ ಭಟ್ಟ); ವಚನೋದ್ಯಾನ (ಸಿದ್ದಯ್ಯ ಪುರಾಣಿಕ); ನವನೀತ (ವಾಣಿ); ರಾಧೇಯ ಮತ್ತು ರತಿವಿಲಾಪ (ಕೃಷ್ಣಮೂರ್ತಿ ಪುರಾಣಿಕ); ಸಿದ್ದವನಹಳ್ಳಿ ಕೃಷ್ಣಶರ್ಮ (ನೀಲತ್ತಹಳ್ಳಿ ಕಸ್ತೂರಿ); ಸೃಜನಶೀಲ (ಹ. ವೆಂ. ನಾಗರಾಜ ರಾವ್); ಹೋರಾಟಗಾರ ಕೆಂಚಪ್ಪ (ಪಿ. ಆರ್. ತಿಪ್ಪೇಸ್ವಾಮಿ); ಅಮೆರಿಕದಲ್ಲಿ ಗೊರೂರು (ಗೊರೂರು ರಾಮಸ್ವಾಮಿ ಅಯ್ಯಂಗಾರ್) ಎಂಬ ಹನ್ನೆರಡು ಕೃತಿಗಳಿಗೆ ಬರೆದ ಮುನ್ನುಡಿಗಳು.

ಅ. ನ. ಕೃಷ್ಣರಾಯರಿಗೆ ಅರ್ಪಣೆ. ಮುರಳೀಧರ ರಾವ್ ಅವರ ಹೊದಿಕೆಚಿತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೯

ಸೃಜನ

ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು ೫೭೦ ೦೦೧; ೧೯೮೧; ಕಿರೀಟ ಅಷ್ಟದಳ, ೧೩೨; ೧೦.೦೦

ದೀಪಾವಳಿಯ ನೆನಪುಗಳು; ನಾನು ಮತ್ತು ಪುಸ್ತಕಗಳು; ಗಾಂಧೀ ಎಂಬ ಹೆಸರು; ನ್ಯಾಯಾನ್ಯಾಯ ವಿವೇಚನೆ; ಮುತ್ತಿನ ಹಾರ; ಓದುವ ಕಲೆ; ಭಾಷೆಯಿಂದ ಭಾಷೆಗೆ; ಸಾಹಿತ್ಯ ಮತ್ತು ಸಂವಹನ; ನಮ್ಮ ಆಧುನಿಕ ಸಾಹಿತ್ಯದ ಸಮಸ್ಯೆಗಳು; ಏಕಲಿಪಿ; ದಸರಾ; ಕೆಲವು ಪ್ರಸಂಗಗಳು; ಹೋಗಿ ಬರುತ್ತೇನೆ ಎಂಬ ಹದಿಮೂರು ಪ್ರಬಂಧಗಳು.

ಮಕ್ಕಳು ಕವಿತಾ ಮತ್ತು ರವಿ ಅವರುಗಳಿಗೆ ಅರ್ಪಣೆ. ಕೆ. ಮುರಳೀಧರ ರಾವ್ ಅವರ ಹೊದಿಕೆಚಿತ್ರ.

೨೦

ಸ್ತವನ

ಮಿತ್ರ ಪ್ರಕಾಶನ, ೨೪ ಸರಸ್ವತೀಪುರಂ ಹೊಸ ಬಡಾವಣೆ, ಮೈಸೂರು ೫೭೦ ೦೦೯; ೧೯೮೦; ಕಿರೀಟ ಅಷ್ಟದಳ, ೧೫೬; ೯.೦೦

ಡಾ। ಸುನೀತಿ ಕುಮಾರ ಚಟರ್ಜಿ; ಕುವೆಂಪು; ದ. ರಾ. ಬೇಂದ್ರೆ; ಶಿವರಾಮ ಕಾರಂತ; ಅ. ನ. ಕೃಷ್ಣರಾವ್; ಆರ್. ಸಿ. ಹಿರೇಮಠ; ಮುಳಿಯ ತಿಮ್ಮಪ್ಪಯ್ಯ; ಭಾರತೀಸುತ; ಎಚ್. ಎಂ. ಶಂಕರನಾರಾಯಣ ರಾವ್; ಕು. ಶಿ. ಹರಿದಾಸ ಭಟ್ಟ; ಜಯತೀರ್ಥ ರಾಜಪುರೋಹಿತ; ನುಗ್ಗೇಹಳ್ಳಿ ಗುಜ್ಜೇಗೌಡ; ಕೆ. ವಿ. ಶಂಕರಗೌಡ; ವಿ. ಆರ್. ನಾರ್ಲ; ಗೊರೂರು ರಾಮಸ್ವಾಮಿ ಅಯ್ಯಂಗಾರ್; ಡಿ. ವಿ. ಅರಸು; ದೇವರಾಜ ಅರಸು ಅವರುಗಳನ್ನು ಕುರಿತ ಹದಿನೇಳು ವ್ಯಕ್ತಿಚಿತ್ರಗಳು.

ಎಸ್. ವಿ. ಪರಮೇಶ್ವರ ಭಟ್ಟ ಅವರಿಗೆ ಅರ್ಪಿತ. ಕೆ. ಮುರಳೀಧರ ರಾವ್ ಅವರ ಹೊದಿಕೆಚಿತ್ರ.

೨೧

ಸ್ಮರಣ

ಮಿತ್ರ ಪ್ರಕಾಶನ, ೨೪ ಸರಸ್ವತೀಪುರಂ ಹೊಸ ಬಡಾವಣೆ, ಮೈಸೂರು ೫೭೦ ೦೦೯; ೧೯೮೧; ಕಿರೀಟ ಅಷ್ಟದಳ, ೧೩೨; ೮.೦೦

ಕನ್ನಡ ಕುಲಪುರೋಹಿತರು; ಎಂ. ಎಸ್. ಪುಟ್ಟಣ್ಣ; ಬಂಕಿಮಚಂದ್ರ ಚಟರ್ಜಿ; ಶರತ್‌ಚಂದ್ರ ಚಟರ್ಜಿ; ಪ್ರೇಮಚಂದ್; ಜೀನ್ ಪಾಲ್ ಸಾರ್ತ್ರ್; ಕೆ. ಜಿ. ಕುಂದಣಗಾರ; ಸಾಮರ್ಸೆಟ್ ಮಾಮ್; ಎಚ್. ಜೆ. ಭಾಭಾ; ನಂದಲಾಲ್ ಬಸು; ವಿ. ಎಸ್. ಅಗರವಾಲ; ಟಿ. ಚೌಡಯ್ಯ; ಪೂಜ್ಯ ನೆನಪು; ಶುಭಕಾಮನೆ; ಮೈಸೂರು ವಿಶ್ವವಿದ್ಯಾನಿಲಯ: ಐವತ್ತು ಎಂಬ ಹದಿನೈದು ಬರಹಗಳು.

ಎ. ಆರ್. ಕೃಷ್ಣಶಾಸ್ತ್ರೀ ಅವರಿಗೆ ಅರ್ಪಿತ. ಕೆ. ಮುರಳೀಧರ ರಾವ್ ಅವರ ಹೊದಿಕೆಚಿತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂಕಣ, ಆಕಾಶವಾಣಿ ಚಿಂತನ

ಹಾಮಾನಾ ಅವರ ಅಂಕಣ ಲೇಖನ ಮತ್ತು ಆಕಾಶವಾಣಿ ಚಿಂತನಗಳೆರಡನ್ನೂ ಈ ವಿಭಾಗದಲ್ಲಿ ಗಮನಿಸಲಾಗಿದೆ. ಅಂಕಣಕ್ಕೆ ಪುಟಮಿತಿ ಇದ್ದಂತೆ ಆಕಾಶವಾಣಿ ಚಿಂತನಕ್ಕೆ ಕಾಲಮಿತಿ ಇದೆ. ಅಂಕಣ ಲೇಖನಗಳ ಪ್ರಕಟಣೆಯ ನಡುವಿನ ಕಾಲಕ್ಕೆ ಒಂದು ನಿಯಮಿತತೆ ಅನ್ವಯವಾದಂತೆ ಆಕಾಶವಾಣಿ ಚಿಂತನಗಳ ಪ್ರಸಾರದ ನಡುವಿನ ಕಾಲಕ್ಕೂ ಒಂದು ನಿಯಮಿತತೆ ಅನ್ವಯವಾಗುತ್ತದೆ. ಇಂಥ ಸಾಮಾನ್ಯ ಸೂತ್ರಗಳ ಕಾರಣದಿಂದ ಈ ಎರಡು ಪ್ರಕಾರಗಳನ್ನು ಒಂದೇ ತಲೆಬರಹದಡಿಯಲ್ಲಿ ವಿವೇಚಿಸಿದೆ.

ಈವರೆಗೆ ಹಾಮಾನಾ ಅವರ ಒಂಬತ್ತು ಅಂಕಣಗಳು ಏಳು ಪತ್ರಿಕೆ/ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳ ವಿವರಗಳು ಇಂತಿವೆ: ಸಾಹಿತ್ಯ ಸಲ್ಲಾಪ—ಕನ್ನಡಪ್ರಭ; ತಿಂಗಳ ಪುಸ್ತಕ, ಗ್ರಂಥಲೋಕದ ಸುತ್ತಮುತ್ತ, ತಿಂಗಳ ಆಯ್ಕೆ—ಗ್ರಂಥಲೋಕ; ಡಾ. ಹಾ. ಮಾ. ನಾಯಕ ಬರೆಯುತ್ತಾರೆ—ಪ್ರಜಾಮತ; ವರ್ತಮಾನ—ಇಂಚರ; ಸಂಪ್ರತಿ—ಪ್ರಜಾವಾಣಿ; ಪುಸ್ತಕ ಪ್ರಸಂಗ—ಸಂಕೇತ; ಸ್ವಗತ—ತರಂಗ. ಇವುಗಳಲ್ಲಿ ದಿನಪತ್ರಿಕೆಗಳಾದ ಕನ್ನಡಪ್ರಭ, ಪ್ರಜಾವಾಣಿಗಳು ಕ್ರಮವಾಗಿ ಸೋಮವಾರದ ಸಾಹಿತ್ಯ ಪುಟದಲ್ಲಿ ಮತ್ತು ಭಾನುವಾರದ ಸಾಪ್ತಾಹಿಕ ಪುರವಣಿಯಲ್ಲಿ ಹಾಮಾನಾ ಅವರ ಅಂಕಣ ಲೇಖನಗಳನ್ನು ವಾರಕ್ಕೊಮ್ಮೆ ಪ್ರಕಟಿಸಿವೆ. ಮಿಕ್ಕವುಗಳಲ್ಲಿ ಎರಡು (ಗ್ರಂಥಲೋಕ, ಇಂಚರ) ಮಾಸಪತ್ರಿಕೆಗಳು, ಒಂದು (ಸಂಕೇತ) ಪಾಕ್ಷಿಕ*, ಎರಡು (ಪ್ರಜಾಮತ, ತರಂಗ) ವಾರಪತ್ರಿಕೆಗಳು. ಒಂದಕ್ಕಿಂತ ಹೆಚ್ಚು ಅಂಕಣಗಳನ್ನು ಪ್ರಕಟಿಸಿದ ಏಕೈಕ ಪತ್ರಿಕೆ ಗ್ರಂಥಲೋಕ. ಪುಸ್ತಕೋದ್ಯಮಕ್ಕೆ ಮೀಸಲಾದ ಈ ಪತ್ರಿಕೆ ಹಾಮಾನಾ ಅವರ ಮೂರು ಅಂಕಣಗಳಿಗೆ ಮಾಧ್ಯಮವಾಗಿದೆ.

ಹಾಮಾನಾ ಅವರ ಮೊತ್ತಮೊದಲ ಅಂಕಣ** ಸಾಹಿತ್ಯ ಸಲ್ಲಾಪ, ಇತ್ತೀಚಿನದು ಸ್ವಗತ. ಅವರು ಈವರೆಗೆ ಹನ್ನೊಂದು ಅಂಕಣ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಈ ಗ್ರಂಥಗಳಲ್ಲಿನ ಒಟ್ಟು ಅಂಕಣಗಳ ಸಂಖ್ಯೆ ಆರುನೂರ ಇಪ್ಪತ್ತೊಂಬತ್ತು. ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣದ ಲೇಖನಗಳು ನಾಲ್ಕು ಸಂಪುಟಗಳಲ್ಲಿ (೨೫, ೨೮, ೨೯, ೩೧), ಸಾಹಿತ್ಯ ಸಲ್ಲಾಪ ಮತ್ತು ತಿಂಗಳ ಪುಸ್ತಕ ಅಂಕಣಗಳ ಲೇಖನಗಳು ಎರಡೆರಡು ಸಂಪುಟಗಳಲ್ಲಿ (೩೦, ೩೨; ೨೪, ೨೬), ಗ್ರಂಥಲೋಕದ ಸುತ್ತಮುತ್ತ ಮತ್ತು ವರ್ತಮಾನ ಅಂಕಣಗಳ ಲೇಖನಗಳು ಒಂದೊಂದು ಸಂಪುಟದಲ್ಲಿ (೨೨; ೩೪) ಪ್ರಕಟವಾಗಿವೆ. ಸಂಪ್ರತಿಯ ಮೊದಲ ಸಂಪುಟ (೨೭) ಮಾತ್ರ ಬೆಳಕು ಕಂಡಿದೆ. ಇವುಗಳಲ್ಲಿ ವರ್ತಮಾನ ಅಂಕಣದ ಲೇಖನಗಳ ಸಂಖ್ಯೆ—ಹದಿನೆಂಟು—ಅತಿ ಚಿಕ್ಕದು. ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣ ಲೇಖನಗಳ ಸಂಖ್ಯೆ—ಇನ್ನೂರ ಇಪ್ಪತ್ತಮೂರು—ಅತಿ ದೊಡ್ಡದು. ಸಂಪ್ರತಿಯ ಎಲ್ಲ ಸಂಪುಟಗಳೂ ಪ್ರಕಟವಾದಾಗ ಗರಿಷ್ಠ ಸಂಖ್ಯೆಯ ಲೇಖನಗಳ ದಾಖಲೆ ಅದರ ಪಾಲಿಗೆ ಬರುತ್ತದೆ. ಕನ್ನಡ ಲೇಖಕರಲ್ಲಿ ಈ ಸಂಖ್ಯೆಯ—ಒಂಬತ್ತು—ಅಂಕಣಗಳನ್ನು ಬರೆದವರಾಗಲೀ ಈ ಸಂಖ್ಯೆಯ—ಹನ್ನೊಂದು—ಅಂಕಣಗ್ರಂಥಗಳನ್ನು ಪ್ರಕಟಿಸಿದವರಾಗಲೀ ಯಾರಾದರೂ ಇದ್ದರೆ ನನಗೆ ತಿಳಿಯದು. ಈ ಸಂದರ್ಭದಲ್ಲಿ

* ೧೯೮೯ರ ಆಗಸ್ಟ್ ೩೧ರಲ್ಲಿ ಪ್ರಾರಂಭವಾದಾಗ ಪಾಕ್ಷಿಕವಾಗಿದ್ದ ಸಂಕೇತ ೧೯೯೦ರ ನವೆಂಬರ್ ೧೧-೧೭ರ ಸಂಚಿಕೆಯಿಂದ ವಾರಪತ್ರಿಕೆಯಾಯಿತು. ಮುಂದೆ ಈ ನಿಯತಕಾಲಿಕೆ ನಿಲ್ಲುವವರೆಗೂ ವಾರಪತ್ರಿಕೆಯಾಗಿಯೇ ಮುಂದುವರೆಯಿತು.

** ನಿಜದಲ್ಲಿ ಪೂರ್ಣಿಮೆಗೆ ಪತ್ರಗಳು (ನಂದಿನಿ ಮಾಸಪತ್ರಿಕೆ: ಸಂಪುಟ ೨, ಸಂಚಿಕೆಗಳು ೧, ೨, ೩; ಏಪ್ರಿಲ್, ಮೇ, ಜೂನ್ ೧೯೫೧) ಎಂಬುದು ಹಾಮಾನಾ ಅವರು ಪ್ರಾರಂಭಿಸಿದ ಮೊತ್ತಮೊದಲ ಅಂಕಣ. ಆದರೆ ಇದು ಮೂರು ಕಂತುಗಳ ನಂತರ ಮುಂದುವರೆಯಲಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಮುಂದೆ ೧೯೬೭ರಲ್ಲಿ ಹಾಮಾನಾ ಅವರು ಅಂಕಣ ಸಾಹಿತ್ಯ ಪ್ರಕಾರದ ಕೃಷಿಯನ್ನು ಪುನರಾರಂಭಿಸಿದ ಮೇಲೆ ಅವರ ಒಂಬತ್ತು ಅಂಕಣಗಳಲ್ಲಿ ಯಾವ ಒಂದು ಅಂಕಣವೂ ಪತ್ರರೂಪ ಅಥವಾ ಇನ್ನಿತರ ತಂತ್ರಗಳನ್ನು ಅಳವಡಿಸಿಕೊಳ್ಳಲಿಲ್ಲ. ಹಾಮಾನಾ ಅವರು ಆರಂಭಿಸಿದ ಎರಡನೆಯ ಅಂಕಣ ನಾ ಕಂಡ ಸಾಹಿತಿಗಳು (ನಂದಿನಿ ಮಾಸಪತ್ರಿಕೆ: ಸಂಪುಟ ೨, ಸಂಚಿಕೆಗಳು ೫, ೬, ೭; ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ೧೯೫೧). ಮೂರು ಲೇಖನಗಳ ತರುವಾಯ ಈ ಅಂಕಣವೂ ನಿಂತುಹೋಯಿತು. ಈ ಸಂಚಿಕೆಗಳಲ್ಲಿ ಆಗಸ್ಟ್ ೧೯೫೧ರ ಸಂಚಿಕೆ ಮಾತ್ರ ನನಗೆ ನೋಡಲು ದೊರಕಲಿಲ್ಲ. ಮಿಕ್ಕ ಐದು ಸಂಚಿಕೆಗಳನ್ನೂ ನೋಡಿದ್ದೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಮಾನಾ ಅವರಿಗೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿಯನ್ನು ದೊರಕಿಸಿಕೊಟ್ಟ ಸಂಪ್ರತಿಯ ಇನ್ನೊಂದು ಹೆಗ್ಗಳಿಕೆಯನ್ನು ಇಲ್ಲಿ ಗಮನಿಸಬಹುದಾಗಿದೆ. ಅದು ಭಾರತೀಯ ಭಾಷೆಗಳಲ್ಲಿ ಅಂಕಣ ಬರಹ ಸಂಕಲನಕ್ಕೆ ದೊರಕಿದ ಮೊತ್ತಮೊದಲ ಪ್ರಶಸ್ತಿಯೂ ಹೌದು.

ಹಾಮಾನಾ ತಮ್ಮ ಮೊದಲ ಅಂಕಣ ಸಾಹಿತ್ಯ ಸಲ್ಲಾಪವನ್ನು ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಬರೆದಿದ್ದಾರೆ. ಆ ಕಾಲದಲ್ಲಿ ಬೇರೆ ಯಾವ ಅಂಕಣವನ್ನೂ ಪ್ರಾರಂಭಿಸಿಲ್ಲ. ಅಷ್ಟೇ ಅಲ್ಲ, ಈ ಅಂಕಣ ಮುಗಿದ ಮೇಲೂ ಸುಮಾರು ಐದೂವರೆ ವರ್ಷಗಳ ಕಾಲ ಬೇರೆ ಅಂಕಣ ಬರಹಕ್ಕೆ ಕೈ ಹಾಕಿಲ್ಲ. ಆದರೆ ಅವರ ಎರಡನೆಯ ಅಂಕಣ ತಿಂಗಳ ಪುಸ್ತಕ ಪ್ರಾರಂಭವಾದ ಮೇಲೆ ಬೇರೆಯೇ ಸ್ಥಿತಿ ಕಾಣುತ್ತದೆ. ತಿಂಗಳ ಪುಸ್ತಕ ಹಾಗೂ ಗ್ರಂಥಲೋಕದ ಸುತ್ತಮುತ್ತ ಅಂಕಣಗಳ ನಡುವೆ ಅಂತರವಿಲ್ಲ. ಜೊತೆಗೆ ಈ ಅಂಕಣಗಳ ಮೊದಲು ಕೊನೆಗಳ ನಡುವೆ ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣದ ಇನ್ನೂರ ಇಪ್ಪತ್ತಮೂರು ಲೇಖನಗಳು ಹೊರಬಂದಿವೆ. ಗ್ರಂಥಲೋಕದ ಸುತ್ತಮುತ್ತ ಅಂಕಣದ ಪ್ರಾರಂಭ ಮುಕ್ತಾಯಗಳ ನಡುವೆ ವರ್ತಮಾನ ಅಂಕಣದ ಪ್ರಾರಂಭ ಮುಕ್ತಾಯಗಳು ಘಟಿಸಿವೆ. ಗ್ರಂಥಲೋಕದ ಸುತ್ತಮುತ್ತ ಅಂಕಣ ನಿಂತ ಒಂದು ವರುಷದ ನಂತರ ಸಂಪ್ರತಿ ಪ್ರಾರಂಭವಾಗಿ ಐದೂವರೆ ವರ್ಷಗಳಿಗೂ ಹೆಚ್ಚು ಕಾಲ ನಡೆದು ಇತ್ತೀಚೆಗೆ* ಕೊನೆಗಂಡಿದೆ. ಇದರ ಜೊತೆಗೆ ಅನಿಯತ ಅಂಕಣ ತಿಂಗಳ ಆಯ್ಕೆ**ಯಲ್ಲೂ ಕೆಲವು ಕಾಲ ಹಾಮಾನಾ ತೊಡಗಿದ್ದರು. ಪಾಕ್ಷಿಕವಾಗಿದ್ದ ಸಂಕೇತ ವಾರಪತ್ರಿಕೆಯಾದ ನಂತರ ಒಂದು ಸಂಚಿಕೆಯಲ್ಲಿ ಮಾತ್ರ ಪುಸ್ತಕ ಪ್ರಸಂಗ*** ಪ್ರಕಟವಾಗಿದ್ದು ಅನಂತರ ಮುಂದು ವರೆಯಲಿಲ್ಲ. ಸದ್ಯದಲ್ಲಿ ಹಾಮಾನಾ ಅವರು ತೊಡಗಿರುವ ಅಂಕಣ ತರಂಗ ವಾರಪತ್ರಿಕೆಯ ಸ್ವಗತ ಮಾತ್ರ.

ಸಾಹಿತ್ಯ ಸಲ್ಲಾಪ, ವರ್ತಮಾನ, ಪುಸ್ತಕ ಪ್ರಸಂಗ ಅಂಕಣಗಳು ಕ್ರಮವಾಗಿ ಕನ್ನಡಪ್ರಭ, ಇಂಚರ, ಸಂಕೇತ ಪತ್ರಿಕೆಗಳ ಮೊದಲ ಸಂಚಿಕೆಗಳಿಂದಲೇ ಪ್ರಕಟಗೊಂಡವುಗಳು. ಇವುಗಳಲ್ಲಿ ವರ್ತಮಾನ ಅಂಕಣ ಇಂಚರ ಮಾಸಪತ್ರಿಕೆಯ ಪ್ರಾರಂಭದಿಂದ ಅಂತ್ಯದವರೆಗೂ ಪ್ರಕಟವಾಗಿದೆ. ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಮತ್ತು ಸಂಪ್ರತಿ ಅಂಕಣಗಳು ಹೊಸ ವರ್ಷದ ಕೊಡುಗೆಗಳಾಗಿ ಆಯಾ ವರ್ಷದ ಮೊದಲ ಸಂಚಿಕೆಗಳಿಂದ ಪ್ರಾರಂಭವಾದುವು. ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣ ಅಂತಾರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಪ್ರಾರಂಭವಾಗಿ ಅಂತಾರಾಷ್ಟ್ರೀಯ ವೃದ್ಧರ ವರ್ಷದಲ್ಲಿ ಮುಕ್ತಾಯವಾಗಿದೆ. ಡಾ. ಹಾ. ಮಾ. ನಾಯಕ ಬರೆಯುತ್ತಾರೆ, ಗ್ರಂಥಲೋಕದ ಸುತ್ತಮುತ್ತ, ವರ್ತಮಾನ, ತಿಂಗಳ ಆಯ್ಕೆ ಮತ್ತು ಪುಸ್ತಕ ಪ್ರಸಂಗ—ಈ ಐದು ಅಂಕಣಗಳು ಬೇರೆ ಒಂದಾದರೂ ಅಂಕಣ ಚಾಲ್ತಿಯಲ್ಲಿರುವಾಗ ಪ್ರಾರಂಭವಾದುವುಗಳು.

ಈ ಅಂಕಣಗಳಲ್ಲಿ ತಿಂಗಳ ಪುಸ್ತಕ, ಗ್ರಂಥಲೋಕದ ಸುತ್ತಮುತ್ತ, ಪುಸ್ತಕ ಪ್ರಸಂಗ ಅಂಕಣಗಳು ಪುಸ್ತಕ ಮಹತ್ತ್ವವನ್ನು ಸೂಚಿಸುವ ಅನ್ವರ್ಥನಾಮಕಗಳು. ಸಾಹಿತ್ಯ ಸಲ್ಲಾಪ, ಡಾ. ಹಾ. ಮಾ. ನಾಯಕ ಬರೆಯುತ್ತಾರೆ, ಸಂಪ್ರತಿ ಅಂಕಣಗಳು ಹಲವು ವೇಳೆ ಮುಖ್ಯವಾಗಿ ಕೆಲವು ಬಾರಿ ಆನುಷಂಗಿಕವಾಗಿ ಪುಸ್ತಕಗಳನ್ನೂ ಅವುಗಳ ಪ್ರಾಮುಖ್ಯವನ್ನೂ ಎತ್ತಿ ಹಿಡಿಯುತ್ತವೆ. ತಿಂಗಳ ಆಯ್ಕೆ, ಅನೇಕ ಕಾರಣಗಳಿಂದ ಆಯಾ ತಿಂಗಳಲ್ಲಿ ಗಮನಾರ್ಹವೆನಿಸಿದ ಯಾವುದಾದರೊಂದು ಪುಸ್ತಕದ ಭಾಗವನ್ನು ಆಯ್ಕೆ ಮಾಡುತ್ತದೆ. ವರ್ತಮಾನ ಅಂಕಣ ಮಾತ್ರ ಪ್ರಮುಖವಾಗಿ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ವಿಚಾರಗಳನ್ನು ತನ್ನ ಕೇಂದ್ರದಲ್ಲಿರಿಸಿಕೊಂಡಿದೆ. ಈ ದೃಷ್ಟಿಯಿಂದ ಹಾಮಾನಾ ಅವರ ಅಂಕಣ ಸಾಹಿತ್ಯದಲ್ಲಿ ವರ್ತಮಾನ ತೀರ ವಿಶಿಷ್ಟವಾದ ಅಂಕಣ.

---

* ಸಂಪ್ರತಿಯ ಕಡೆಯ ಕಂತಿನ ದಿನಾಂಕ ೨-೯-೧೯೯೦.

** ತಿಂಗಳ ಆಯ್ಕೆಗಳಲ್ಲಿ ಕಡೆಯದು ೧-೫-೧೯೯೦.

*** ಪುಸ್ತಕ ಪ್ರಸಂಗದ ಕಡೆಯ ಬರಹ ನವೆಂಬರ್ ೧೧-೧೭, ೧೯೯೦.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಂಗಳ ಪುಸ್ತಕ, ತಿಂಗಳ ಆಯ್ಕೆ ಅಂಕಣಗಳು ತಮ್ಮ ಹೆಸರಿನಲ್ಲಿ ತಾವು ಪ್ರಕಟವಾಗುವ ಅವಧಿಯ ಸ್ಪಷ್ಟ ಸೂಚನೆಯನ್ನು ಬಿಂಬಿಸಿವೆ. ವರ್ತಮಾನ ಮತ್ತು ಸಂಪ್ರತಿ ಅಂಕಣಗಳ ಹೆಸರುಗಳು ಹಾಮಾನಾ ಅವರಿಗೆ ವರ್ತಮಾನ ಕಾಲದ ಆಗುಹೋಗುಗಳಲ್ಲಿ ಇರುವ ಆಸಕ್ತಿಯನ್ನು ಸೂಚಿಸುತ್ತವೆ. ಅವರ ಇನ್ನೊಂದು ಅಂಕಣ ಮಾಲಿಕೆಯ ಒಂದು ಗ್ರಂಥದ ಹೆಸರು ಸಾಂಪ್ರತ ಎಂದಿರುವುದನ್ನು ಇಲ್ಲಿ ನೆನೆಯಬಹುದು. (ಸಂಜಯ) ಉವಾಚ, Thus Spake (Vivekananda) ಮಾದರಿಯಲ್ಲಿ ರೂಪುಗೊಂಡು ಮೌಖಿಕ ಮಾಧ್ಯಮದ ಬದಲು ಬರೆಯುವ ಮಾಧ್ಯಮಕ್ಕೆ ಬದಲಾಯಿಸಿಕೊಂಡಿರುವ ಸೂಚನೆ ನೀಡುವ ಹೆಸರು ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣದ್ದು*.

ಹನ್ನೊಂದು ಅಂಕಣ ಗ್ರಂಥಗಳಲ್ಲಿಯೂ ಪ್ರತಿ ಅಂಕಣದ ಕಡೆಯಲ್ಲಿ ಅದು ಪ್ರಕಟವಾದ ದಿನಾಂಕವನ್ನು ಕೊಟ್ಟಿದೆ. ತಿಂಗಳ ಅಂಕಣಗಳಲ್ಲಿ ಯಾವುದೊಂದು ಅಂಕಣವೂ ಒಮ್ಮೆಯೂ ತಪ್ಪಿಲ್ಲ, ಹೆಚ್ಚುಕಮ್ಮಿಯಾಗಿಲ್ಲ. ವಾರದ ಅಂಕಣಗಳಲ್ಲಿ ಕೆಲವು ರಚನೆಗಳು ಒಂದೆರಡು ದಿನ ತಡವಾಗಿ ಪ್ರಕಟವಾಗಿವೆ. ಪ್ರಕಟವೇ ಆಗದೆ ಸರದಿ ತಪ್ಪಿದ ಏಕಾಂಗಿ ಉದಾಹರಣೆ ಎಂದರೆ ಸಂಪ್ರತಿಯ ಎರಡು ವರ್ಷಗಳ ಅವಧಿಯಲ್ಲಿ ಒಮ್ಮೆ ಮಾತ್ರ.

ಕೆಲವು ಕಡೆ ಅಂಕಣವೇ ಅಂಕಣ ಬರಹಗಳ ಸಂಕಲನಕ್ಕೂ ಹೆಸರು ನೀಡಿರುವುದುಂಟು. ಸಾಹಿತ್ಯ ಸಲ್ಲಾಪ ಅಂಕಣದ ಎರಡು ಗ್ರಂಥಗಳಲ್ಲಿ ಮೊದಲನೆಯದಕ್ಕೆ ಸಾಹಿತ್ಯ ಸಲ್ಲಾಪ ಎಂಬುದೇ ಹೆಸರಾಗಿದೆ. ಅದೇ ರೀತಿ ಸಂಪ್ರತಿ ತನ್ನ ಮಾಲಿಕೆಯ ಮೊದಲ ಅಂಕಣ ಗ್ರಂಥಕ್ಕೆ ತನ್ನದೇ ಹೆಸರನ್ನು ನೀಡಿದೆ. ಗ್ರಂಥ ಲೋಕದ ಸುತ್ತಮುತ್ತ ಎಂಬುದು ಸಹ ಅಂಕಣ ಹಾಗೂ ಅದರ ಲೇಖನಗಳ ಸಂಕಲನ ಎರಡಕ್ಕೂ ಇಟ್ಟಿರುವ ಹೆಸರು.

ಚಿಂತನ, ಸುಭಾಷಿತ, ಚಿನ್ನುಡಿ, ವಿಚಾರ ದೀಪಿಕೆ ಎಂಬ ಶೀರ್ಷಿಕೆಗಳಲ್ಲಿ ಮೈಸೂರು, ಬೆಂಗಳೂರು, ಗುಲ್ಬರ್ಗ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾದ ಕಿರು ಲೇಖನಗಳ ಎರಡು (೨೩, ೩೩) ಸಂಗ್ರಹಗಳನ್ನು ಹಾಮಾನಾ ಹೊರತಂದಿದ್ದಾರೆ. ಇವುಗಳಲ್ಲಿನ ಒಟ್ಟು ಲೇಖನಗಳ ಸಂಖ್ಯೆ ಅರುವತ್ತೈದು. ಮೊದಲನೆಯದು ಸೂಲಂಗಿ, ಚಿಂತನ ಪ್ರಧಾನವಾದ ಪ್ರಬಂಧಗಳನ್ನೊಳಗೊಂಡಿದೆ. ಎರಡನೆಯದು ಸಂಗತಿ, ಪ್ರಸಂಗ ಪ್ರಧಾನವಾದ ಬರಹಗಳನ್ನುಳ್ಳದ್ದು. ಇವುಗಳಲ್ಲಿ ಅನೇಕ ಪ್ರಬಂಧಗಳು ಆಯಾ ಕೇಂದ್ರದಿಂದ ಮರುಪ್ರಸಾರಗೊಂಡಿವೆ, ಬೇರೆ ಕೇಂದ್ರಗಳಿಂದಲೂ ಪ್ರಸಾರವಾಗಿವೆ. ಎರಡೂ ಕೃತಿಗಳ ಅನೇಕ ಲೇಖನಗಳು ಬೇರೆ ಬೇರೆ ನಿಯತಕಾಲಿಕೆಗಳಲ್ಲಿ, ಸಂಗ್ರಹಗಳಲ್ಲಿ ಕಾಣಿಸಿಕೊಂಡಿವೆ. ಇತರ ಭಾಷೆಗಳಿಗೆ ಅನುವಾದಗೊಂಡಿವೆ. ಈ ಎರಡು ಕೃತಿಗಳಲ್ಲಿಯೂ ಯಾವುದೇ ಲೇಖನ ಯಾವ ಕೇಂದ್ರದಿಂದ ಪ್ರಸಾರವಾಯಿತು ಎಂಬುದನ್ನಾಗಲೀ ಪ್ರಸಾರಗೊಂಡ ದಿನಾಂಕವನ್ನಾಗಲೀ ಸೂಚಿಸಿಲ್ಲ.

ಆಕಾಶವಾಣಿ ಚಿಂತನಗಳ ಸಂಕಲನವನ್ನು ಹೊರತಂದ ಕನ್ನಡ ಲೇಖಕರಲ್ಲಿ ಹಾಮಾನಾ ಅವರೇ ಮೊದಲಿಗರು ಎಂಬ ಅಂಶವನ್ನು ಇಲ್ಲಿ ಗಮನಿಸಬಹುದಾಗಿದೆ.

---

* ಹಾಮಾನಾ ಅವರ ಇಡೀ ಬರವಣಿಗೆಯ ರಚನಾಕ್ರಮದಲ್ಲಿ ಒಂದು ಅಂಶವನ್ನು ಗಮನಿಸಬಹುದು. ಸಭೆಸಮಾರಂಭಗಳಲ್ಲಿ ಅವರು ಮಾಡುವ ಉದ್ಘಾಟನ/ಸ್ವಾಗತ/ಮುಖ್ಯ/ಅಧ್ಯಕ್ಷ/ಸಮಾರೋಪ ಭಾಷಣಗಳು ಹಾಗೂ ಆಕಾಶವಾಣಿ ಭಾಷಣಗಳು ಯಾವುದಾದರೊಂದು ಪತ್ರಿಕೆಯಲ್ಲಿ ಪ್ರಕಟವಾಗಿ, ಅನಂತರ ಅವರ ಸಂಕಲನ ಗ್ರಂಥಗಳಲ್ಲಿ ಸೇರುತ್ತವೆ. ಸಾಂದರ್ಭಿಕ ಮಹತ್ತ್ವದಿಂದ ಬೇರೆ ಸಂಕಲನ ಕೃತಿಗಳಲ್ಲೂ ಪ್ರವೇಶ ಪಡೆಯಬಹುದು. ಮೌಖಿಕವಾಗದೆ ನೇರ ಪ್ರಕಟಣೆಗೆ ಬರುವಂಥವು ಎಂದರೆ ಅಂಕಣಲೇಖನಗಳು ಮಾತ್ರ. ಆದರೆ ಇಲ್ಲೂ ವಿರಳವಾಗಿಯಾದರೂ ಅಪವಾದಗಳಿಲ್ಲದೆ ಇಲ್ಲ. ಒಟ್ಟಿನಲ್ಲಿ ಮೌಖಿಕದಿಂದ ಬರವಣಿಗೆಗೆ ಬದಲಾಯಿಸಿಕೊಳ್ಳುವ ಅವರ ಸಾರಸ್ವತ ರಚನಾಕ್ರಮ ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಎಂಬ ಅಂಕಣದ ಹೆಸರಿನಲ್ಲೂ ಇಣುಕಿರುವುದು ಸಾರಸ್ಯಕರವೂ ಗಮನಾರ್ಹವೂ ಆಗಿರುವ ಒಂದು ಅಂಶ. ಬರವಣಿಗೆಯ ಕ್ರಮಕ್ಕೆ ಸಂಬಂಧಿಸಿದ ತಾಂತ್ರಿಕ ಅಂಶವೊಂದು ಬರಹದ ಹೆಸರಿನಲ್ಲಿಯೂ ಪ್ರತಿಫಲನಗೊಂಡಿರುವ **ಉದಾಹರಣೆ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨೨

ಗ್ರಂಥಲೋಕದ ಸುತ್ತಮುತ್ತ

ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪; ೧೯೮೪; ಕಿರೀಟ ಅಷ್ಟದಳ ೧೮೪; ೧೮.೦೦, ೨೫.೦೦

ಅಕ್ಟೋಬರ್ ೧೯೮೧ರಿಂದ ಡಿಸೆಂಬರ್ ೧೯೮೩ರ ವರೆಗೆ 'ಗ್ರಂಥಲೋಕ'ದಲ್ಲಿ ಪ್ರಕಟವಾದ 'ಗ್ರಂಥಲೋಕದ ಸುತ್ತಮುತ್ತ' ತಿಂಗಳ ಅಂಕಣ ಬರಹದ ಇಪ್ಪತ್ತೇಳು ಕಂತುಗಳು.

ಎಚ್. ಎಂ. ಶಂಕರನಾರಾಯಣ ರಾಯರಿಗೆ ಅರ್ಪಣೆ. ಅನುಬಂಧದಲ್ಲಿ ಮುಖ್ಯ ವಿಷಯಸೂಚಿ.

೨೩

ಸಂಗತಿ

ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು ೫೭೦ ೦೦೧; ೧೯೮೭; ಡೆಮ್ಮೆ ದ್ವಾದಶ, ೧೪೦; ೧೮.೦೦

ಮೈಸೂರು, ಬೆಂಗಳೂರು, ಗುಲ್ಬರ್ಗ ಆಕಾಶವಾಣಿ ಕೇಂದ್ರಗಳ ಸುಭಾಷಿತ, ಚೆನ್ನುಡಿ, ಚಿಂತನ, ವಿಚಾರ ದೀಪಿಕೆ ಮುಂತಾದ ಶೀರ್ಷಿಕೆಗಳ ಅಡಿಯಲ್ಲಿ ಪ್ರಸಾರವಾದ ಮೂವತ್ತೈದು ಚಿಂತನಗಳು.

ನಾನು ಕನ್ನಡ ತಾಯಿಯನ್ನು ಕಂಡೆ; ಸಂದೇಶ ನಿನಾದ; ಕನ್ನಡ ಹಾ, ಸವಿಗನ್ನಡ; ಸರ್ವೋದಯ; ಕಲೆಯ ಬೇರು; ಮಾರ್ಗದರ್ಶಕಿ; ಎರಡು ಮುಖಗಳು; ಸುಖದ ರಹಸ್ಯ; ಕರ್ತವ್ಯದ ಕರೆ; ಬೆಳಕಿನ ಬಯಕೆ; ಜೀವನ; ಅಪಘಾತಗಳು; ಪ್ರಾರ್ಥನೆ; ಚಳವಳಿಗಳು; ಕಾನೂನು ರಕ್ಷಣೆ; ಒಂದು ತೊಟ್ಟಿಯ ಕಥೆ; ಮಹಾಕಾವ್ಯಜೀವನ; ಪೌರಪ್ರಜ್ಞೆ; ಪ್ರಾಮಾಣಿಕತೆ; ಸರದಿ; ಮನೆ–ಮರ; ರಸ್ತೆ ಸ್ವಾತಂತ್ರ್ಯ; ನೆಲದ ಉಪ್ಪು; ಹೆಂಡತಿಗೆ ಜುಲ್ಮಾನೆ; ಎರಡು ಜಗತ್ತು; ಕಚೇರಿ ಕರ್ತವ್ಯ; ಕರ್ತವ್ಯ ಪ್ರೀತಿ; ಬಿದ್ದ ಮರ ಚಿಗಿತದ್ದು!; ನಿಜವಾದ ಅಧ್ಯಾಪಕರು; ಒಂದು ಮರದ ಕೊಲೆ; ಶೋಷಣೆಯ ಒಂದು ಮುಖ; ರಾಷ್ಟ್ರೀಯ ಚಾರಿತ್ರ್ಯ; ಪ್ರಜಾಪ್ರಭುತ್ವದ ಅಲಗು; ಸ್ವಾತಂತ್ರ್ಯದ ಪಯಿರು; ದೇಶದ ಆಸ್ತಿ ಎಂಬ ಮೂವತ್ತೈದು ಚಿಂತನಗಳು.

ಅತ್ತೆ ಸುಂಕಸಾಲೆ ನೀಲಮ್ಮ ಮತ್ತು ಮಾವ ಸಂಪಿಗೆಕಾನು ಸುಬ್ಬಯ್ಯಗೌಡರು ಇವರುಗಳಿಗೆ ಅರ್ಪಣೆ. ಕೆ. ಮುರಳೀಧರ ರಾವ್ ಅವರ ಹೊದಿಕೆಚಿತ್ರ.

೨೪

ಸಂಪದ

ಅಪರ್ಣಾ ಪ್ರಕಾಶನ, ೪೯ ಅಕ್ಷಯ ಟಿ.ಕೆ. ಬಡಾವಣೆ, ಸರಸ್ವತೀಪುರಂ, ಮೈಸೂರು ೫೭೦ ೦೦೯; ೧೯೮೧; ಡೆಮ್ಮೆ ದ್ವಾದಶ, xii+೧೮೪; ೧೨.೦೦, ೨೦.೦೦

'ಗ್ರಂಥಲೋಕ'ದಲ್ಲಿ ಪ್ರಕಟವಾದ 'ತಿಂಗಳ ಪುಸ್ತಕ' ಅಂಕಣ ಬರಹದ ಎರಡನೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪುಟ. ಸೆಪ್ಟೆಂಬರ್ ೧೯೭೯ರಿಂದ ಸೆಪ್ಟೆಂಬರ್ ೧೯೮೧ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ.

ಸಾಹಿತ್ಯಾಲೋಕನ; ಕಾಲಕ್ರೀಡೆ; ಅಪರವಯಸ್ಕನ ಅಮೆರಿಕಾ ಯಾತ್ರೆ; ನಂದೇ ನಾನೋದಿದೆ; ಮಂದಾರ ಮಲ್ಲಿಗೆ; ನಗರಾಯಣ; ಚಂದ್ರಕಾಂತಿ; ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು; ಕ್ರಿಯಾಪರ್ವ; ಶ್ರೀನಿವಾಸರ ಶ್ರೀರಾಮ ಪಟ್ಟಾಭಿಷೇಕ; ಮಗುವಿನ ಭಾವ ಜಗತ್ತು; ಹಿರಿಯರು–ಗೆಳೆಯರು; ನಾನೇಕೆ ಬರೆಯುತ್ತೇನೆ?; ಜಿ. ಪಿ. ರಾಜರತ್ನಂ; ಪುಷ್ಕಿನ್ ಕವಿತೆಗಳು; ಸೂರ್ಯ ಇವನೊಬ್ಬನೇ; ಸಾಲಿ ರಾಮಚಂದ್ರರಾಯ; ಅಂತರ; ಕಾವ್ಯ ಮಂಥನ; ಉಂಬರ; ಯಕ್ಷಗಾನ ಮತ್ತು ನಾನು; ಬೆಳುದಿಂಗಳಲ್ಲಿ ಅರಳಿದ ಮೊಲ್ಲೆ ಮತ್ತು ಇತರ ಪ್ರಬಂಧಗಳು; ವಾಗರ್ಥ; ಮಾತಿನಿಂದ ಲೇಖನಿಗೆ; ಯದುಗಿರಿ ಎಂಬ ಕೃತಿಗಳನ್ನು ಕುರಿತ ಇಪ್ಪತ್ತೈದು ವಿಮರ್ಶೆಗಳು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ಅರ್ಪಣೆ. ಚಿತ್ರಗಳು ಅರ್ಕೇಶ್ ಅವರದು, ರಕ್ಷಾಪುಟ ವಿನ್ಯಾಸ ಚಂದ್ರನಾಥರದು.

೨೫

ಸಂಪರ್ಕ

ಮಿತ್ರ ಪ್ರಕಾಶನ, ೨೪ ಕುಮಾರಕೃಪಾ, ಕುವೆಂಪುನಗರ, ಮೈಸೂರು ೫೭೦ ೦೦೯; ೧೯೮೨; ಕಿರೀಟ ಅಷ್ಟದಳ, ೨೮೮; ೧೮.೦೦

'ಪ್ರಜಾಮತ' ವಾರಪತ್ರಿಕೆಯಲ್ಲಿ ಪ್ರಕಟವಾದ ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣ ಲೇಖನಗಳ ಎರಡನೆಯ ಸಂಪುಟ. ಜನವರಿ ೬, ೧೯೮೦ರಿಂದ ಡಿಸೆಂಬರ್ ೨೮, ೧೯೮೦ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ.

ಹೋಯಿತು ವರ್ಷ, ಬರಲಿದೆ ಹರ್ಷ; ಸಾಹಿತ್ಯ ಅಕಾದೆಮಿ ಬಹುಮಾನ; ಕೇಂದ್ರ ಸೇವಾ ಆಯೋಗ ಪರೀಕ್ಷಾ ಮಾಧ್ಯಮ; ಜಾನಪದ ಜಗತ್ತು; ಗದೆ ಮತ್ತು ಲೇಖಣಿಗಳ ಅಯ್ಯರ್; ಜಾನ್ಸನ್ ಆರಯ್ಯ; ಕೃಷಿಕ ಕ.ನ.; ಬೆಕ್ಕಿನ ಕೊರಳಿಗೆ ಘಂಟೆ; ಕಾಡ ಬೆಳುದಿಂಗಳು; ಬೆಳಗಾವಿ ಸಮ್ಮೇಳನ; ಸಮ್ಮೇಳನದ ಸ್ವಾರಸ್ಯಗಳು; ಅಧ್ಯಕ್ಷರೂ ಅಧ್ಯಕ್ಷರ ವಿಚಾರವೂ; ವಿಶ್ವಕಥಾಕೋಶ; ಮೊಯ್ಲಿ: ಇತಿಹಾಸದ ಹೆಜ್ಜೆ; ಎನ್. ಪ್ರಹ್ಲಾದ ರಾವ್; ಒಬ್ಬ ಸುಸಂಸ್ಕೃತ; ಮುದ್ದಣನ ಮಲ್ಲಿನಾಥ; ಕುಂತಿಯ ಮಕ್ಕಳು; ಯುಗಚಿಂತಕ ಸಾರ್ತ್ರ್; ಅಸ್ಸಾಮಿನ ಪಾಠ; ಕಸಾಪ ಅಧ್ಯಕ್ಷರಿಗೊಂದು ಉತ್ತರ; 'ವಿಜ್ಞಾನ ಪ್ರಪಂಚ'ದ ವಿಕ್ರಮ; ಮಾಸ್ತಿ: ದೈವಸಮೃದ್ಧಿ; ಡಾ. ಎ. ಎನ್. ನರಸಿಂಹಯ್ಯ; ರಾಷ್ಟ್ರೀಯತೆಯ ಹರಿಕಾರ; ಶಾಪ ಹಿಡಿದ ನಗರಜೀವನ; ಹಳಕಟ್ಟಿ: ಒಂದು ಶತಮಾನ; ಕುಲಪುರೋಹಿತರಿಗೆ ನೂರು; ಕಾಲು ಶತಮಾನದ ಕಲೋದ್ಧಾರಕರು; ಪ್ರೇಮಚಂದ್ ಸ್ಮರಣೆ; ಅಪಾಯದ ಸೂಚನೆ; ಕನ್ನಡ–ಸರ್ಕಾರ–ಜನತೆ; ರಾಮಚಂದ್ರ ಉಚ್ಚಿಲ; ರಾಘವ ಸ್ಮರಣೆ; ಶಿಕ್ಷಣದ ಬೆರಸು-ಮಜ್ಜಿಗೆ; ಶಾಪವಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ; ಪ್ರಜಾಪ್ರಭುತ್ವದ ಆಟ; 'ಶ್ರೀ' ಸ್ಮಾರಕ ಪ್ರತಿಷ್ಠಾನ; ಟಿ.ಪಿ.ಎಂ.: ಒಂದು ಶ್ರದ್ಧಾಂಜಲಿ; ಭಿಲ್ವಾರ ಬಹುಮಾನ; ವಾರದ ವ್ಯಕ್ತಿಗೆ ಅರುವತ್ತು ವರುಷ; 'ಕಾವ್ಯಾಲಯ'ದ ಕರ್ಮಯೋಗಿ; ರಾಘವ: ಹಕ್ಕಿ ಹಾಡು; (ಕರ್) ನಾಟಕ ರಾಜ್ಯೋತ್ಸವ; ರಾಜಾರಾವ್: ಸಂಸ್ಕೃತಿಯ ಒಳಮುಖ; ವಿಶ್ವವ್ಯಾಪೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಂದೀ ನಾಟಕ; ಕನ್ನಡತನಕ್ಕೆ 'ಸುಸ್ವಾಗತ'; ಪ್ರೀತಿಯ ಸ್ವಾಮಿ, ಕ್ಷಮಿಸಿ; ಏಕೆ ಈ ವಿಶ್ವವಿದ್ಯಾನಿಲಯ?; ರಾಯಕರ ಮಾಸ್ತರ; ಚಿತ್ತಾಲ ಸ್ಮಾರಕ; ತಿಂಮನನ್ನು ಸೃಷ್ಟಿಸಿದ ಬ್ರಹ್ಮ ಎಂಬ ಐವತ್ತೆರಡು ಲೇಖನಗಳು. ಕಡೆಯಲ್ಲಿ ಮುಖ್ಯ ವಿಷಯಸೂಚಿ.

ಶಾ. ಬಾಲೂರಾವ್ ಅವರಿಗೆ ಅರ್ಪಣೆ. ಹೊದಿಕೆಯ ಚಿತ್ರ ಕೆ. ಮುರಳೀಧರ ರಾವ್ ಅವರದು. ಬೆನ್ನುಚಿತ್ರ ಎಸ್. ಎಂ. ಅಬ್ರಹಾಂ.

೨೬

ಸಂಪುಟ

ಅಪರ್ಣಾ ಪ್ರಕಾಶನ, ೪೯ ಅಕ್ಷಯ ಟಿ.ಕೆ. ಬಡಾವಣೆ, ಸರಸ್ವತೀಪುರಂ, ಮೈಸೂರು ೫೭೦ ೦೦೯; ೧೯೮೦; ಡೆಮ್ಮೈ ದ್ವಾದಶ, xvi+೧೮೮; ೧೦.೦೦, ೧೫.೦೦

'ಗ್ರಂಥಲೋಕ'ದಲ್ಲಿ ಪ್ರಕಟವಾದ 'ತಿಂಗಳ ಪುಸ್ತಕ' ಅಂಕಣ ಬರಹಗಳ ಮೊದಲನೆಯ ಸಂಪುಟ. ಆಗಸ್ಟ್ ೧೯೭೭ರಿಂದ ಆಗಸ್ಟ್ ೧೯೭೯ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ.

ಒಲವೆ ನಮ್ಮ ಬದುಕು; ಸ್ಮೃತಿಪಟಲದಿಂದ; ಕರ್ನಾಟಕ ಮತ್ತು ಮರಾಠಿ ಸಾಹಿತ್ಯ; ವಿಪರೀತ; ಸಂಕೀರ್ಣ ಸ್ಮೃತಿ ಸಂಪುಟ; ಭುಗಿಲು; ಆಮಲಿನ ವಚನಗಳು; ಮೋಕ್ಷಗುಂಡಂ ವಿಶ್ವೇಶ್ವರಯ್ಯ; ಸಮಾಹಿತ; ಮುಸ್ಸಂಜೆಯ ಕಥಾಪ್ರಸಂಗ; ಟುವಟಾರ; ಚಿತ್ರಗಳು ಪತ್ರಗಳು; ದಿವ್ಯ ಕುರಾನ್; ಕಲಾಪ್ರಪಂಚ; ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ; ಪರ್ಯಟನ; ಬೇಟೆಯ ನೆನಪುಗಳು; ಕಂದನ ಕಾವ್ಯಮಾಲೆ; ೨೬ ದಿನ ೨೫ ರಾತ್ರಿ; ಗದ್ಯಶೈಲಿ; ದಿನಕರನ ಚೌಪದಿ; ಕಾಡು ಬಾ ಅನ್ನುತ್ತದೆ; ಅರಸು ಆಡಳಿತರಂಗ; ಸಾಂಪ್ರತ; ಈ ಭಾರತ ಎಂಬ ಕೃತಿಗಳನ್ನು ಕುರಿತ ಇಪ್ಪತ್ತೈದು ವಿಮರ್ಶೆಗಳು.

ತ. ರಾ. ಸು. ಅವರಿಗೆ ಅರ್ಪಿತ. ಚಿತ್ರಗಳು ಅರ್ಕೇಶ್ ಅವರದು, ಕಲೆ ವೆಂಕಟೇಶ್ ಅವರದು.

೨೭

ಸಂಪ್ರತಿ

ಐಬಿಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು ೫೬೦ ೦೦೯; ೧೯೮೮; ಡೆಮ್ಮೈ ಅಷ್ಟದಳ, xii+೪೫೨; ೭೫.೦೦

'ಪ್ರಜಾವಾಣಿ' ದಿನಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ಸಂಪ್ರತಿ ಅಂಕಣ ಬರಹದ ಮೊದಲನೆಯ ಸಂಪುಟ. ಜನವರಿ ೬, ೧೯೮೫ರಿಂದ ಡಿಸೆಂಬರ್ ೨೮, ೧೯೮೬ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ. ಮಾರ್ಚ್ ೨, ೧೯೮೬ರ ಒಂದು ಅಂಕಣ ಮಾತ್ರ ಪ್ರಕಟವಾಗಿಲ್ಲ. ಪ್ರಶಸ್ತಿಗಳ ಪಾಡು ಲೇಖನದ ಆರಂಭದ ಕೆಲವು ಪ್ಯಾರಾಗಳು, 'ಪ್ರಜಾವಾಣಿ'ಯಲ್ಲಿ ಪ್ರಕಟವಾದಾಗ ಬಿಟ್ಟುಹೋದವುಗಳು ಇಲ್ಲಿ ಅಚ್ಚಾಗಿವೆ.

ಮಾತಿನ ಮಾಲಿನ್ಯ; ಏಕತೆಯ ವೇದಿಕೆ; ಬಹದ್ದೂರಾಯಣ; ಅಕಾದೆಮಿ ಬಹುಮಾನ; ಧರ್ಮದ ಪರದೆ; ಕಣ್ಮರೆಯಾದ ಕವಲಿ; ಲೋಕಸಭೆ—ಲೋಕಭಾಷೆ; ಆಕ್ಸ್‌ಫರ್ಡ್ ಶೈಲಿ; ನಂದದ ನಾರ್ಲ; ಕನ್ನಡಕ್ಕೆ ಫೆಲೋಷಿಪ್; ನಶಿಸುತ್ತಿರುವ ಹಕ್ಕು; 'ಒಡಲಾಳ'ದ ಮಹಾದೇವ; ಪ್ರೇಮ್ ಭಾಟಿಯ; ಪಿಎಚ್.ಡಿ. (ಈಸ್ಟ್ ಜಾರ್ಜಿಯ); ಯುನೆಸ್ಕೊ ಭವಿಷ್ಯ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸುದೇವ ಭೂಪಾಲಂ; ಸ್ಮರಣೀಯ ಸಮಾರಂಭ; ಪ್ರವಾದಿ ಪತ್ರಕರ್ತ; ಯಾವುದು ಮೊದಲು?; ಆಂಗ್ಲರ ಆಡಳಿತ ಭಾಷೆಯಾಗಿ ಕನ್ನಡ; ಬೃಂದಾವನದ ದಾರಿ; ಒಂದು ಅದೃಷ್ಟ; ಶಿಕ್ಷಣ ಪುರಾಣ; ನಮಗೆ ಏನಾಗಿದೆ?; ಯೋಗಿಯೊಬ್ಬನ ಕಥೆ; ಪುಟ್ಟಣ್ಣ: ಒಂದು ಶ್ರದ್ಧಾಂಜಲಿ; ಛಿದ್ರತೆಯ ಬೀಜಗಳು; ಅಂಕಗಳ ಜಿಂಕೆ; ಒಬ್ಬ ಕನ್ನಡ ಪುರಾತನರು; ಏಕತೆಯ ಬೆಸುಗೆ; ನಯವಂಚನೆ; ಬಾಗಲೋಡಿ ದೇವರಾಯ; ಸಿದ್ದಿಗೆ ಮಾನ್ಯತೆ; ಕನ್ನಡ ವಿವಿ ಬೇಕೆ?; ಪರೀಕ್ಷಕರೆ, ಎಚ್ಚರಿಕೆ!; ಪೆಂಗ್ವಿನ್ ಪುಸ್ತಕಗಳು; ಒಂದು ಸಂಜೆ; ಶಾಪ ಹಿಡಿದ ಶಿಕ್ಷಣ; ಕನ್ನಡಿಗರು ಯಾರು?;ಅಯ್ಯೋ, ವಿಶ್ವವಿದ್ಯಾ ಲಯಗಳೇ!; ಒಬ್ಬರಿದ್ದರು, ಕಲ್ಪವೃಕ್ಷದಂತೆ; ಪುಸ್ತಕಗಳ ಭವಿಷ್ಯ; ಆರ್. ಎಸ್. ಎನ್.; 'ಮಹಾಪುರಾಣ'; ವಿಜ್ಞಾನದ ಕರೆ; ಒಬ್ಬ 'ಸೇವಕ'ನ ಕಣ್ಮರೆ; ಸಾಹಿತ್ಯ ತಪಸ್ವಿ; ಪೊಲೀಸರಿಗೆ ಶುಭವಾಗಲಿ; ದೀಪ ಆರಬೇಕೆ?; ನಾವು ನಮ್ಮ ಕನ್ನಡ; 'ದುರ್ಗಾಸ್ತಮಾನ'ಕ್ಕೆ ಪ್ರಶಸ್ತಿ; ಉಪ್ಪಿಲ್ಲ, ಒಗ್ಗರಣೆಯುಂಟು; ಕಾಪಾಡುವ ಕೆಲಸ; ಕಮಲಾಭಿನಂದನ; ನಿತ್ಯ ಸಂಗ್ರಾಮದ ಕಲಾವಿದ; ಹೊಸಹಾದಿ, ಹೊಸ ಹೊರಡುವಿಕೆ; ಸುವರ್ಣಾಮೃತ ವರ್ಷ; ಒಬ್ಬ ಪರಿಪೂರ್ಣತಾವಾದಿ; 'ಜಡಭರತ'ರಿಗೊಂದು ಪ್ರಶಸ್ತಿ; ಕಾಮತ್ತರ ಕರ್ನಾಟಕ; ನವ ಉದ್ಧಾರಕನ ನಿರ್ವಾಣ; ಕಸಾಪ ಹಗರಣ; ಕಲಾಕ್ಷೇತ್ರದ ರುಕ್ಮಿಣಿ; ಕಲಾರಾಧನೆಯ ವಿಜ್ಞಾನಿ; ಬರಲಿವೆ—ಮಾ(ದ)ರಿ ಶಾಲೆಗಳು!; 'ಮಲ್ಲಿಗೆಯ ಮಾಲೆ'; ಲೇಖನಿ ಮತ್ತು ಲಿಂಗ; ಮಠದ ಸ್ವಾಮಿಗಳಿಗೆ ಒಂದು ಕೈಪಿಡಿ; ಡಾ. ಪಿ. ಎಸ್. ಶಂಕರ್; ಕಣ್ಮರೆಯಾದ ಇಬ್ಬರು ಗೆಳೆಯರು; ಜಯಕಾಂತನ್; ಠಾಕೂರ್: ೧೨೫; ಬೆಳಗಾವಿಯಲ್ಲಿ ಬೆಂಕಿ; ನೆನಪು ಸಾಯುವುದಿಲ್ಲ; ಬೆಳಕಿನ ಬದುಕು; ಕಾಲದ ಎದುರು ಓಟ; ಕರ್ನಾಟಕದ ರಾಷ್ಟ್ರಪ್ರಶಸ್ತಿಗಳು; ರೊಟ್ಟಿ ಮತ್ತು ಬೆಣ್ಣೆ; ಅಂಚೆ ಪ್ರಪಂಚ; ಇಂಗ್ಲಿಷಿನಲ್ಲಿ ಕುಮಾರವ್ಯಾಸ; ಪನ್ನಾಲಾಲ್ ಪಟೇಲ್; ಒಂದು ಉದಾತ್ತ ಚೇತನ; ಸಿದ್ಧರಾಮನ ಮನೆಯ ಮಗಳು; ಗಾಂಧಿ ತೋಪಿ ಗಣಪ್ಪನಿಗೆ—೩೫; ಕನ್ನಡಕ್ಕೆ ಸಂದ ಕಬೀರ್ ಸಮ್ಮಾನ; ಯಶ್‌ಪಾಲರ ಕೆಲ ವಿಚಾರಗಳು; ಒಬ್ಬ ನಿಷ್ಠಾವಂತ ಅಧ್ಯಾಪಕ; ಬರೋ ಅವರ ನೆನಪು; ರಾಷ್ಟ್ರೀಯ ಪುಸ್ತಕ ನೀತಿ; ಇಬ್ಬರು ಹಿರಿಯರ ಕಣ್ಮರೆ; ಮತ್ತೆ ಹಿಂದೀ ಹಗರಣ; ವಿನಾಯಕರಶ್ಮಿಗೆ ರಾಜಾಜಿ ಪ್ರಶಸ್ತಿ; ವಿಶುಕುಮಾರ್: ಒಂದು ನೆನಪು; ಕಟ್ಟುವ ಮೊದಲೇ ಕುಸಿಯುವ ಆಟ; ಗೌರಮ್ಮನವರ ಕನ್ನಡ ಗ್ರಂಥಸೂಚಿ; ಮರಾಠೀ ಸಾಹಿತ್ಯ ಸಮ್ಮೇಳನ—೬೦; ವೊಲೆ ಸೊಯಿಂಕ; ಪ್ರಶಸ್ತಿಗಳ ಪಾಡು; ಎಲ್. ಗುಂಡಪ್ಪ—ಒಂದು ಸ್ಮರಣೆ; ಉರ್ದು—ಕನ್ನಡ: ಬಾಂಧವ್ಯದ ಬೆಸುಗೆ; ಸರ್ಕಾರದ ಕೆಲಸ; ನಿರಂಜನ; ಬಲ್ಲಾಳರಿಗೆ ಬಹುಮಾನ ಎಂಬ ನೂರಮೂರು ಲೇಖನಗಳು. ಕಡೆಯಲ್ಲಿ ಮುಖ್ಯ ವಿಷಯಸೂಚಿ.

ಎಂ. ಬಿ. ಸಿಂಗ್ ಮತ್ತು ಜಿ. ಎನ್. ರಂಗನಾಥ ರಾವ್ ಅವರುಗಳಿಗೆ ಅರ್ಪಣೆ. ರಕ್ಷಾಪುಟ ವಿನ್ಯಾಸ ಪ. ಸ. ಕುಮಾರ್ ಅವರದು. ರಕ್ಷಾಪುಟದಲ್ಲಿ ಲೇಖಕರ ಭಾವಚಿತ್ರ (ಪ್ರಜಾವಾಣಿ ಸೌಜನ್ಯ).

೨೮

ಸಂವಹನ

ಮಿತ್ರ ಪ್ರಕಾಶನ, ೨೪ ಕುಮಾರಕೃಪಾ, ಕುವೆಂಪುನಗರ, ಮೈಸೂರು ೫೭೦ ೦೦೯; ೧೯೮೩; ಕಿರೀಟ ಅಷ್ಟದಳ, ೨೮೮; ೧೮.೦೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಪ್ರಜಾಮತ' ವಾರಪತ್ರಿಕೆಯಲ್ಲಿ ಪ್ರಕಟವಾದ ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣ ಲೇಖನಗಳ ನಾಲ್ಕನೆಯ ಸಂಪುಟ. ಜನವರಿ ೩, ೧೯೮೨ರಿಂದ ಡಿಸೆಂಬರ್ ೨೬, ೧೯೮೨ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ.

ರಜೆಯ ರಾಷ್ಟ್ರ; ಭಾರತಿ: ಭಾವೈಕ್ಯದ ಹರಿಕಾರ; ನಮಗೆ ಬೇಕಾಗಿರುವ ನೈತಿಕ ಧೈರ್ಯ; ಸಂಸ್ಕೃತದ ಗತಿ; ಕವಿ ಕಣವಿ ಅವರ 'ಜೀವಧ್ವನಿ'; 'ಪ್ರಪಂಚ'ದ ಪಾಪು; ಲೇಖಕರ ಸಂಘಟನೆ; ಸಿ. ಪಿ. ಕೆ.: ಕೃತಿಶತ; ಉರ್ದು ಮತ್ತು ಗೋಕಾಕ್ ವರದಿ; ಶಾಪ ಹಿಡಿದ ಕನ್ನಡ; ಬುಖಾರೆಸ್ಟ್‌ನಿಂದ ಭಾರತಕ್ಕೆ; ಕೊಂಕಣಿ ಉತ್ಸಾಹ; ನೂರು ತುಂಬಿದ 'ಆನಂದಮಠ'; ಫಿರಾಕ್: ನೋವಿನ ನೆಲೆ; ಕೃಪಲಾನಿ: ಬಿಳಿಯ ಬದುಕು; ಕಲಾವಿದ–ಸಂಘಟಕ; ದಿಲ್ಲಿ ಮಾತು; ಕವಿ ರ. ವಿ. ಪಂಡಿತ್; ಕತ್ತೆಯಾದುದಕೆ ವ್ಯಥೆಯಿಲ್ಲ; ಜಮ್ಮ ಕೊಡಗಿದು ನಮ್ಮದು; ಅಮೃತಾ ಪ್ರೀತಮ್: ಕಪ್ಪು ಗುಲಾಬಿ; ಭಾರತ ಉತ್ಸವ; ಖುಷಿಯ ಕಾಯಕ; ಕೃಷ್ಣಕುಮಾರ ಕಲ್ಲೂರ; ಔಚಿತ್ಯ ವಿಚಾರ; ವಿಧಾನಸೌಧದ ಸಾಹಿತಿ ಸಮ್ಮೇಳನ; ದಲಿತರ ದನಿ; ದೂರದರ್ಶನದ ಗಬ್ಬು; ಭಾಷಾಸೂತ್ರ: ಪರಿಷ್ಕೃತ ಆವೃತ್ತಿ; ಕನ್ನಡ: ನೈತಿಕ ಪ್ರಶ್ನೆ; ಕಸಾಪ: ಅಸಲಿ-ನಕಲಿ; ಕಾಸು ಮತ್ತು ಕಲೆ; ಸಿದ್ಧಿಸಬೇಕಾದ ಸ್ವಾತಂತ್ರ್ಯ; ಶಿಕ್ಷಣದ ದಾರಿ; ಒಂದು 'ವಿನೀತ' ಜೀವನ; ನ್ಯಾಷನಲ್ ಬುಕ್ ಟ್ರಸ್ಟ್; 'ಪ್ರವಾದಿ'ಯ ಸ್ಮರಣೆ; ನಾವು ಹೋಗುತ್ತಿರುವುದು ಎತ್ತ?; ಕನ್ನಡ ಸರಸ್ವತಿಗೆ ಒಂದು ನೆಲೆ; ಕಾಗದದ ಹೂವು; ನಾಮಾಂತರ–ಸೊಳ್ಳೆ: ಸಿಂಹ; ಆನಂದವನ ಭುವನ; 'ಸತೀ ಹಿತೈಷಿಣೀ'; 'ಕರ್ನಾಟಕ' ಯಾಕೆ?; ಕನ್ನಡದಿಂದ ಕೆನಡಾಕ್ಕೆ; ನೆಹರು ನೆನಪು; ಕಣ್ಮರೆಯಾದ 'ಕವಿಭೂಷಣ'; ಎನ್.ಜೆ.ಇ.ಎಫ್. ಮತ್ತು ಕನ್ನಡ; ಚುಟುಕಗಳ ಸಮ್ರಾಟ; ಕೊನೆಯ ಸಂತ; ಗೊರೂರು: ಜೀವನೋತ್ಸಾಹ; 'ನಾವು ಬರತೇವಿನ್ನ...' ಎಂಬ ಐವತ್ತೆರಡು ಲೇಖನಗಳು. ಕಡೆಯಲ್ಲಿ ಮುಖ್ಯ ವಿಷಯಸೂಚಿ.

ನಾಡಿಗ ಕೃಷ್ಣಮೂರ್ತಿ ಅವರಿಗೆ ಅರ್ಪಣೆ. ಹೊದಿಕೆಚಿತ್ರ ಕೆ. ಮುರಳೀಧರ ರಾವ್ ಅವರದು. ಬೆನ್ನುಚಿತ್ರ ಎಸ್. ಎಂ. ಅಬ್ರಹಾಂ ಅವರದು.

೨೯

ಸಮೂಹ

ಮಿತ್ರ ಪ್ರಕಾಶನ, ೨೪ ಕುಮಾರಕೃಪಾ, ಕುವೆಂಪುನಗರ, ಮೈಸೂರು ೫೭೦ ೦೦೯; ೧೯೮೨; ಕಿರೀಟ ಅಷ್ಟದಳ, ೨೯೦; ೧೫.೦೦

'ಪ್ರಜಾಮತ' ವಾರಪತ್ರಿಕೆಯಲ್ಲಿ ಪ್ರಕಟವಾದ ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣ ಲೇಖನಗಳ ಮೊದಲನೆಯ ಸಂಪುಟ. ಜನವರಿ ೭, ೧೯೭೯ರಿಂದ ಡಿಸೆಂಬರ್ ೩೦, ೧೯೭೯ರ ವರೆಗಿನ ಲೇಖನಗಳು ಇಲ್ಲಿ ಒಟ್ಟಾಗಿವೆ.

'ಬೀಸಣಿಗೆ ಗಾಳಿ ಸುಳಿದಾವು'; ಇದು ಪುಸ್ತಕ ಕಾಶಿ!; ಕಲ್ಕತ್ತ ಓ! ಕಲ್ಕತ್ತ!; ಸಸ್ಯಶಾಸ್ತ್ರ ಮತ್ತು ಕಾವ್ಯ; ಕವಿವಾಣಿಗೆ ಕತ್ತರಿ; ಮುಂಬಯಲ್ಲಿ ಮೂಕಜ್ಜಿಗೆ ಪ್ರಶಸ್ತಿ; ಪಾವಟೆ ಪಥ; ಒಂದು 'ಕಂಪನಿ'ಯ ಕಥೆ; ಧರ್ಮಸ್ಥಳದ ಸಾಕ್ಷಿಯಾಗಲಿ; ಬಂಗಾರದ ಹೊಸ್ತಿಲು; ಛಿದ್ರತೆಯ ಬೀಜ; ಒಂದು ಜಗತ್ತು, ಒಂದು ಭಾಷೆ; ಕಣ್ಮರೆಯಾದ ರತ್ನ; ನೇತ್ರಾವತಿಯ ತೀರದಲ್ಲಿ...; ಗೌರವದ ಗರಿ; 'ಜೀವನ ಕಲೆ'ಯ ಆರಾಧಕ; ರಂಗಸಾಧಕನಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಪ್ಪತ್ತೈದು: ಸಾಧನೆಗೆ ಐವತ್ತು; ವಿದ್ವಾಂಸ ರಾಘವನ್; ಎಂದೆಂದಿಗೂ ನೀ ಕನ್ನಡ ವಾಗಿರು; ಉರ್ದು ಅಕಾದೆಮಿ: ದ್ವಿಪ ವ್ಯವಸ್ಥೆ; ಕನ್ನಡ ಲೇಖಕಿಯರಿಗೊಂದು ಸಂಘ; ಕಲ್ಪನಾ ನೆನಪುಗಳು; ಅನುವಾದದ ಅಗತ್ಯ, ಆಳ, ಅಗಲ; 'ಮಾನವ'ವಾದಿ ದ್ವಿವೇದಿ; ಮಣಿಪಾಲದ ಮಾಂತ್ರಿಕ; ತಮಿಳು ಕಾದಂಬರಿಗೆ ನೂರು ವರ್ಷ; ಕನ್ನಡ ಮಾಧ್ಯಮದ ಸಮಸ್ಯೆ; ಜ್ಞಾನಕ್ಕೆ ಬೇಲಿ; 'ಆ ವ್ಯಕ್ತಿಗೆ ನಾವೆಲ್ಲರೂ ಸೇರಿ ತಲೆಬಾಗಿಸುವ'; ಸಂಸ್ಕೃತದ ಸ್ಥಾನ; ಕನ್ನಡದ ಹಕ್ಕಿಗಳಿಗೆ ನಾಲ್ಕು ಸಾವಿರ; 'ವಿನಾಯಕ' ಎಪ್ಪತ್ತು; ಕನ್ನಡ ಎಂ.ಎ.: ಚಿನ್ನದ ಹಬ್ಬ; ಕೋಟೆಯ ಕಲ್ಲುಗಳು; ಹೊಸ ವಿಶ್ವವಿದ್ಯಾನಿಲಯಗಳು; ಮಹಾಕಾವ್ಯದ ದಾರಿ; ಒಂದು ಸಂಸ್ಥೆಯ ಕಥೆ; ವಿಧಾನಸೌಧಕ್ಕೆ ಕನ್ನಡ?; ಕೆ. ಪಿ. ಎಸ್. ಮೆನನ್: ಒಂದು ಮೆಚ್ಚುಗೆ; ಸಂಸಾರ ಮತ್ತು ಸರಕಾರ; ಯಾರೋ ಒಬ್ಬ ಜರ್ಮನ್ ತರುಣ; ಜಿ. ವೆಂಕಟಯ್ಯ: ಒಂದು ಸ್ಮರಣೆ; ರಾಜಮನ್ನಾರ್ ಸ್ಮರಣೆ; ಸಾರ್ಥಕ ರಾಜ್ಯೋತ್ಸವ; ಇಬ್ಬರು ನುಡಿಸೇವಕರು; ತುಳುವಿಗೊಂದು ನಿಘಂಟು; ಅರಸು ಅಭಿನಂದನ; ಅಲ್ಪ ಸಂಖ್ಯಾತರ ಇತಿಮಿತಿ; 'ಸಾಕ್ಷಿ' ಇಲ್ಲ!; ಖುಷ್‌ವಂತ್ ಸಿಂಗ್; ಪತ್ರಿಕೋದ್ಯಮದ ಒಂದು ಪಾಠ; ಪಂಪನಿಂದ ಕೆಂಪನವರೆಗೆ; ಮರೆಯಾದ ಮ. ಶ್ರೀ. ಎಂಬ ಐವತ್ತೆರಡು ಲೇಖನಗಳು. ಕಡೆಯಲ್ಲಿ ಮುಖ್ಯ ವಿಷಯಸೂಚಿ.

ಹ. ವೆಂ. ನಾಗರಾಜ ರಾವ್ ಅವರಿಗೆ ಅರ್ಪಿತ. ಹೊದಿಕೆಚಿತ್ರ ಕೆ. ಮುರಳೀಧರ ರಾವ್ ಅವರದು. ಬೆನ್ನುಚಿತ್ರ ಎಸ್. ಎಂ. ಅಬ್ರಹಾಂ ಅವರದು.

೩೦

ಸಲ್ಲಾಪ

ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ೫೭೦ ೦೦೯; ೧೯೭೨; ಡೆಮ್ಮೈ ಅಷ್ಟದಳ, iv+೫೭೮; ೨೦.೦೦, ೩೦.೦೦

'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ಸೋಮವಾರದ ಸಾಹಿತ್ಯ ಪುಟದಲ್ಲಿ ಪ್ರಕಟವಾದ ಸಾಹಿತ್ಯ ಸಲ್ಲಾಪ ಅಂಕಣ ಲೇಖನಗಳ ಎರಡನೆಯ ಸಂಪುಟ. ಅಕ್ಟೋಬರ್ ೬, ೧೯೬೯ ರಿಂದ ಫೆಬ್ರುವರಿ ೭, ೧೯೭೨ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ. ಫೆಬ್ರುವರಿ ೭, ೧೯೭೨ರ ಕಡೆಯ ಲೇಖನ ಪತ್ರಿಕೆಯಲ್ಲಿ ಪ್ರಕಟವಾಗದೆ ಇಲ್ಲಿ ಮಾತ್ರ ಅಚ್ಚಾಗಿದೆ.

ಗಾಂಧೀ ಸ್ತವನ; ವಿ. ಸೀ.; ಬೇರಾಜ್ಯ ಭಾಷೆಗಳು; ಕವಿಗಳ ಕೈಪಿಡಿ; ಕನ್ನಡಕ್ಕೊಂದು ಗರಿ; ಕಾರಂತ ಮೇಳ; ಒಂದು ವೈಯಕ್ತಿಕ ದರ್ಶನ; ನಮಗೊಂದು ವಿಶ್ವಕೋಶ; ನಾನಕ್‌ವಾಣಿ; ಒಂದು ದೊಡ್ಡ ಜೀವ; ಕಚೇರಿ ಕನ್ನಡ; ಹೊಸ ಹಾದಿ: ಭಟ್ಟರ ಗಾದೆ; ಉರ್ದು ಬೇಡಿಕೆ; ನಿರೀಕ್ಷೆಯ ನಾಟಕ; ಹೇಳದೆ ಕಲಿಸಿದ ಗುರು; ವಿಚಾರಶೀಲ: ಡಿ. ವಿ. ಜಿ.; ಕಾಸರಗೋಡಿನ ರೈ; ಸ್ಮರಣೀಯ ಘಟಿಕೋತ್ಸವ; ಆತ್ಮಸಾಕ್ಷಿಯ ಧ್ವನಿ; ಅಯ್ಯಂಗಾರ್ 'ಆರ್. ಸಿ.'; ಸದ್ಗುಣದ ಪೂಜೆ; ಶುಭದ ಸಂಕೇತ; ಒಂದು ದಾಖಲೆ; ನಮ್ಮ ಶಾಲೆಗಳಲ್ಲಿ ಕನ್ನಡ; ಸುಬೋಧ ಸೇವಾವ್ರತ; ಗೃಹ ಸರಸ್ವತಿ; ಸಂಸ್ಕೃತಿ ಯಾತ್ರೆ; 'ಆನಂದ ಕಂದ'; 'ಲೋಕಾಭಿ ರಾಮ'; ಅಪಾಯಕ್ಕೆ ಆಹ್ವಾನ; ತರಾಸು: ಅರ್ಧ ಹಾದಿ; ಲೆನಿನ್ ಸಾಹಿತ್ಯ ಸಮೀಕ್ಷೆ; ಲೇಖಕರ ಮೇಳ; ನಮಗೊಂದು ಲಿಪಿ; ವಿಜ್ಞಾನದ ಕನ್ನಡ; ಎರಡು ಖಂಡಗಳ ಲೇಖಕರು; ಭಾರತ ಮಿತ್ರ; ವಿಶ್ವ ಸಮೀಕ್ಷಕ; ದೆಹಲಿಯಲ್ಲಿ ಮೈಸೂರು; ವರ್ಣ ಚಿತ್ರಶಾಲೆ; 'ಕನ್ನಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾವ್ಯ ಸಂಚಯ'; ಎಂ.ಎ. (ಭಾರತೀಯ ಸಾಹಿತ್ಯ); ಸರಸ್ವತಿಯ ತೇರು; ಅನುವಾದ ಸೇತು; ನಾಡಿನ ಹೊರಗೆ ಕನ್ನಡ ಪೀಠಗಳು; ಒಂದು ದೊಡ್ಡ ಕೆಲಸ; 'ಕನ್ನಡ' ಎಂಬ ಕೂಗು; ಒಂದು ರಾಷ್ಟ್ರೀಯ ಸಂಕಲನ; ಕವಿಗಳು ಬೇಕಾಗಿದ್ದಾರೆ!; ಡೋಗ್ರಿಗೆ ಮನ್ನಣೆ; ಇರಾವತಿ ಕರ್ವೆ: ಒಂದು ಸ್ಮರಣೆ; ನಾಲ್ಕು ವಾರಗಳಲ್ಲಿ ಕನ್ನಡ; ವಿ. ಸೀ. ಅಭಿನಂದನ; ಕಿರಿಯರ ವಿಶ್ವಕೋಶ; ಸರ್ಕಾರಿ ಕನ್ನಡ; ಒಂದು ಅಪೂರ್ವ ಗ್ರಂಥ; ನವಕಾವ್ಯ ಸಂಚಯ; ಕನ್ನಡ ಮತ್ತು ರಾಜಕಾರಣಿ; ಮಾಳವಾಡ ಮಾಸ್ತರ; ಸವಿನೆನಪು; ವಿಶ್ವವಿದ್ಯಾನಿಲಯ ಪತ್ರಿಕೆಗಳು; ತಿರುಮಲೆ ತಾತ; ಸಾಹಿತ್ಯವಾಹಿನಿ; ತಿರುಳುಗನ್ನಡ ತಿರುಕ; ಚಲಿಸುವ ಗಡಿಗಳು; ಸಮ್ಮೇಳನದ ಮೆಲಕು; ವೀರಕೇಸರಿ; ಅಪರಾಧಿ ಬಸು; ನಮ್ಮ ನಗರಗಳ ಕಥೆ; ಸಂಸ್ಕೃತಿ ಶೋಧಕ; ಕೊಲ್ಲಾಪುರದಿಂದ ಮೈಸೂರಿಗೆ; ೧೯೬೮-೬೯ರ ಕನ್ನಡ ಸಾಹಿತ್ಯ; ಕುಲಪತಿಯ ಸ್ಮರಣೆ; ರಷ್ಯಾದಲ್ಲಿ ನಿರಂಜನ; ಪುಸ್ತಕ ಉದ್ಯಮ; ರಾಷ್ಟ್ರೀಯ ಪುಸ್ತಕ ಮೇಳ; ಪಾಂಡುರಂಗ ದೇಸಾಯಿ; ಕನ್ನಡ ಯಾರಿಗೆ ಬೇಕಾಗಿದೆ?; ಒಬ್ಬ ಜೆಂಟ್ಲ್‌ಮನ್; ವಿಮರ್ಶೆಯ ದಾರಿ; ಕನ್ನಡ ಗ್ರಂಥಸೂಚಿ; ಕನ್ನಡ ಮತ್ತು ಕೃಷಿವಿಜ್ಞಾನ; ಆಮಾರ್ ಸೋನಾರ್ ಬಾಂಗ್ಲಾ; ಹಿರಿಯಣ್ಣ; ಶಬ್ದವಿಹಾರಿ; ಮುಗಿಯದ ಸಮಸ್ಯೆ; ವಿನಾಶದ ಬುತ್ತಿ; ದ್ರಾವಿಡ ಭಾಷಾ ವಿಜ್ಞಾನ ಸಂಘ; ಎರಡು ತುಳು ಪತ್ರಿಕೆಗಳು; ದುಬೆ ಅವರೊಡನೆ ಒಂದು ತಾಸು; ಮಾಸದ ನೆನಪು; ಕನ್ನಡದ ದಾರಿ; ಅಣ್ಣನ ನೆನಪು; ಹಾಡಿನಿಂದ ನಾಡು ಕಟ್ಟಿದವರು; ಕಲ್ಪವೃಕ್ಷದ ಕವಿ; ವಿದೇಶದಲ್ಲಿ ಕನ್ನಡ; ಪತ್ರಲೇಖನ ಸಾಹಿತ್ಯ; ಕಥಾಭಾರತಿ; ವಿಜ್ಞಾನ ಮತ್ತು ಭಾಷೆ; ಹೊಸ ಜನಾಂಗದ ಕಾವ್ಯ; ನರೇಂದ್ರದೇವ್ ನೆನಪು; ಎಲ್ಲಿದೆ ಪಂಪನ ಸಮಾಧಿ?; ತಾರಾಶಂಕರ ಬಾಬು; ಶಿಕ್ಷಕ ಸಾಹಿತಿ; ಶ್ರೀ ಜ. ಚ. ನಿ.; ನಮ್ಮ ಪುಸ್ತಕಗಳು; ಅಕಾದೆಮಿ ಅಧ್ಯಕ್ಷ–ಶ್ರೀರಂಗ; ಇಟ್ಟ ಹೆಸರು, ಕೊಟ್ಟ ಮಂತ್ರ; ಪರಂಪರೆಗೆ ದಾರಿ; ನಾಗಮಂಗಲದಲ್ಲಿ ಮೂರು ದಿನ; ಕೇರಳದ ಮಾದರಿ?; ಗಾರ್ಕಿಯ ಕಥೆಗಳು; ಅಸ್ಸಾಮಿನ ಅಮರಸಿಂಹ; ಪುಸ್ತಕ ವಿಮರ್ಶೆಯ ಜಂಗಲಿ; ಮಾನವಶಾಸ್ತ್ರಜ್ಞೆ ಮೀಡ್; ಬದುಕಿನತ್ತ ಬಾಂಗ್ಲಾ; ಕೃತಜ್ಞತೆಯ ಕೊಡ; ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ; ಸಂಖ್ಯಾ ವಿಶಿಷ್ಟ ಪದಕೋಶ; ಡಾಕ್ಟರ್ ಮಹಾಶಯರು; 'ಪರಂಪರೆ'; ಏಕತೆಯ ಸೋಗು; 'ದಿಗಂಬರ' ಕಾವ್ಯ ಎಂಬ ನೂರ ಇಪ್ಪತ್ತಮೂರು ಲೇಖನಗಳು.

ಕನ್ನಡ ಅಧ್ಯಯನ ಸಂಸ್ಥೆಯ ಸಹೋದ್ಯೋಗಿಗಳಿಗೆ ಅರ್ಪಣೆ. ಬ್ಲರ್ಬ್‌ನಲ್ಲಿರುವ ಲೇಖಕರ ಭಾವಚಿತ್ರ ಸುಂದರರಾಜ್ ಅವರದು.

೩೧

ಸಾಂಪ್ರತ

ಮಿತ್ರ ಪ್ರಕಾಶನ, ೨೪ ಕುಮಾರಕೃಪಾ, ಕುವೆಂಪುನಗರ, ಮೈಸೂರು ೫೭೦ ೦೦೯; ೧೯೮೩; ಕಿರೀಟ ಅಷ್ಟದಳ, ೨೮೮; ೧೮.೦೦

'ಪ್ರಜಾಮತ' ವಾರಪತ್ರಿಕೆಯಲ್ಲಿ ಪ್ರಕಟವಾದ ಡಾ. ಹಾ. ಮಾ. ನಾಯಕ ಬರೆಯುತ್ತಾರೆ ಅಂಕಣ ಲೇಖನಗಳ ಮೂರನೆಯ ಸಂಪುಟ. ಜನವರಿ ೪, ೧೯೮೧ರಿಂದ ಡಿಸೆಂಬರ್ ೨೭, ೧೯೮೧ರವರೆಗಿನ ಲೇಖನಗಳು ಇಲ್ಲಿ ಒಟ್ಟಾಗಿವೆ.

ಹೀರೋ ಹನುಮಂತಯ್ಯ; ಅವನತಿಯ ಚಿತ್ರಗಳು; ತಂಬಿ ಕರೆದರೇ ಓ ಎನ್ನುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಸು!; ಬಾಳಪ್ಪ ಹುಕ್ಕೇರಿ; ಕನ್ನಡದ ದೀಪ; ಇಬ್ಬರು ಹಿರಿಯರಿಗೆ ಗೌರವ; 'ಪರ್ವತವಾಣಿ'ಗೆ ಪ್ರಶಸ್ತಿ; 'ವಿಶ್ವ' ಕನ್ನಡ ಸಮ್ಮೇಳನ; ರಾಷ್ಟ್ರಹಿತ: ಕೆಲ ವಿಚಾರಗಳು; ಬೇಂದ್ರೆ: ನಮ್ಮ ಭಾಗ್ಯ; ಸಾಹಿತ್ಯ–ಸಮ್ಮೇಳನ–ರಾಜಕೀಯ; ಒಂದು ಹೃದಯ, ಹಲವು ನಾಲಗೆ; ಇತಿಹಾಸಕಾರ ಎರಿಕ್ ಸ್ಟೋಕ್ಸ್; ಚಿಕ್ಕಮಗಳೂರಿನ ಕುರ್ಚಿ ಸಮ್ಮೇಳನ; ಸಮ್ಮೇಳನ: ಕೆಲವು ಓರೆ ನೋಟಗಳು; ಮಾಂತ್ರಿಕ ಮನಸೂರ್; ನಾಡಿಗ ಕೃಷ್ಣಮೂರ್ತಿ; ಜನದ ಪ್ರೀತಿ; ಪ್ರಾಮಾಣಿಕತೆಯ ಪ್ರಶ್ನೆ; ಸ್ನೇಹವಲಯ; ಕೃತಿಚೌರ್ಯದ ಒಂದು ಪ್ರಸಂಗ; ಸಂಸ್ಕೃತ–ಸಂಸ್ಕೃತಿ–ವಿಜ್ಞಾನಿ; ಭಾಷಾ ರಾಜಕೀಯ; ಕವಿಗೆ ಕಂಠ; ಜಪಾನಿನಲ್ಲಿ ಚಂಡೆ ಮದ್ದಲೆ; ಭಾಷಾ ವಿಜ್ಞಾನಿ ಗುಂಡೂರಾವ್; ಸರಸ್ವತಿಯ ಹೆಜ್ಜೆ; ಕಲಾಮಂದಿರದ ಕನಸುಗಾರ; ಪುಸ್ತಕ ಪುರಾಣ; ಪ. ಸು. ಭಟ್ಟ; ಅಂಧರು ಮತ್ತು ಹಿಂದಿ; ಕರ್ನಾಟಕ ನವೋದಯ; ಕಸಾಪ ಚುನಾವಣಾ ನಾಟಕ; ಮುಂಬಯಿ: 'ತಾಯಿನುಡಿ'; ನಮ್ಮ ಸಾಹಿತ್ಯ: ಐವತ್ತು ವರ್ಷಗಳ ಹಿಂದೆ; ಶುಭಾಶಯಗಳು; ಭಾರತ ಭಕ್ತ: ಕಾಲೇಲ್ಕರ್; ಗತವೈಭವದ ಪುನರುತ್ಥಾನ; ಕಣ್ಮರೆಯಾದ ಇಬ್ಬರು ದೊಡ್ಡವರು; ಚಿತ್ರಮಯ ಕರ್ನಾಟಕ; ವೀರನ ಮರಣ; ಕನ್ನಡದ ಕಂಠ; ಸರ್ವಜ್ಞನಿಗೆ ನೂರಾಯಿತು; ನಾವು ಬಯಸಿದ ಕರ್ನಾಟಕ; ರಾಗದ ಬೆನ್ನೇರಿ...; ಬೇಂದ್ರೆ ಬೆಳಕು; ಮಿಂಚಿನ ಬಳ್ಳಿ; ಜಾನಪದ ಆಚಾರ್ಯ; ಜನರಿಗೆ ವಿಜ್ಞಾನ; ದೇವತೆಗಳ ಸೃಷ್ಟಿಕರ್ತ; ಎಸ್. ಕೆ. ಪೊಟ್ಟೆಕಾಟ್; ಕಾಫಿ ಕಣಿವೆಯಲ್ಲಿ ಕನ್ನಡ ಎಂಬ ಐವತ್ತೆರಡು ಲೇಖನಗಳು. ಕಡೆಯಲ್ಲಿ ಮುಖ್ಯ ವಿಷಯಸೂಚಿ.

ನಿರಂಜನರಿಗೆ ಅರ್ಪಿತ. ಹೊದಿಕೆಯ ಚಿತ್ರ ಕೆ. ಮುರಳೀಧರ ರಾವ್ ಅವರದು. ಬೆನ್ನುಚಿತ್ರ ಎಸ್. ಎಂ. ಅಬ್ರಹಾಂ.

೩೨

ಸಾಹಿತ್ಯ ಸಲ್ಲಾಪ

ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ೫೭೦ ೦೦೯; ೧೯೭೦; ಡೆಮ್ಮೆ ಅಷ್ಟದಳ, iv+೩೯೬; ೧೨.೫೦, ೨೦.೦೦

'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ಸೋಮವಾರದ ಸಾಹಿತ್ಯ ಪುಟದಲ್ಲಿ ಪ್ರಕಟವಾದ ಸಾಹಿತ್ಯ ಸಲ್ಲಾಪ ಅಂಕಣ ಲೇಖನಗಳ ಮೊದಲನೆಯ ಸಂಪುಟ. ನವೆಂಬರ್ ೬, ೧೯೬೭ ರಿಂದ ಸೆಪ್ಟೆಂಬರ್ ೨೯, ೧೯೬೯ರವರೆಗಿನ ಲೇಖನಗಳು ಇಲ್ಲಿ ಸೇರಿವೆ.

ಸರ್ಕಾರದ ಸನ್ಮಾನ; ಪಾಠಕರ ಪಾಠ; ಜಾನಪದ ಅಧ್ಯಯನ; 'ಪುನರುತ್ಥಾನ'; ರಂಗಯ್ಯ–ಎಪ್ಪತ್ತು; ಶ್ರೀಮಲೆಯ ಸಾಹಿತ್ಯಭಕ್ತ; ಕಾದಂಬರಿ–ಬೆಳ್ಳಿತೆರೆ; ಸಂಸ್ಕೃತಿ ಸಂಪನ್ನ; 'ಜೀವನ ಧರ್ಮ ಯೋಗ'; ಒಂದು ನೆನಪು; ಹವ್ಯಾಸಿಗಳ ಕಲೆ; ಸಾಹಿತ್ಯ ಲಾಲನೆ; ವಿಶ್ವ ತಮಿಳು ಸಮ್ಮೇಳನ; ಕಡಲು–ಬೆಳದಿಂಗಳು; ಕನ್ನಡದ ಸೇನಾನಿ; ಬುದ್ಧಿ ಜೀವಿಗಳ ಜವಾಬ್ದಾರಿ; ರಾಜ್ಯಾಂಗ–ರಾಜಸ್ಥಾನಿ; 'ನಾವು ನೆಹರೂಗಳು'; ರಾಮಾಯಣದ ಭಾರ; ಬಸವ ಪ್ರಭೆ; ಪುಣ್ಯಸ್ಮರಣೆ; ಕ್ರಾಂತಿಯ ಕಹಳೆ; ಐವತ್ತರ ಅಡಿಗರು; ಕನಸುಗಾರರ ಕೆಲಸ; ವಿವಾದದ ಕೊನೆ; ಜಿ. ಹನುಮಂತರಾವ್; ನಮ್ಮ ಸಂಸ್ಕೃತಿಯ ಸಮೀಕ್ಷೆ; ಅಚ್ಚ ಗನ್ನಡಿಗ–ಅನಕೃ; ಶಾಸಕ ಸಾಹಿತಿ; ಕನ್ನಡದ ಪುಣ್ಯ; ಬಂಗಾರದ ಬೆಳೆ; ಅಪಾಯದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

पुस्तकालय
पुस्तकालय

ಘಂಟೆ; ಅಂತರ್ ಭಾರತಿ; ಆ ಮುಖ–ಈ ಮುಖ; [illegible]; ಅಭಿಮಾನಿ ಗಳುತ್ಕಗ್ರರ್; 'ಕವಿರಾಜಮಾರ್ಗಂ'; ಪ್ರಾಧ್ಯಾಪಕ ಕವಿ; 'ಗಂಗೋತ್ರಿ'; [illegible] ವೇ; ಸ್ವಾತಂತ್ರ್ಯದ ಹೊಣೆ; ಗಾದೆಗಳ ಸಾಹಿತ್ಯ; 'ಸಂಕ್ರಮಣ ಸಾಹಸ'; ಚಿನ್ನದ ಹಬ್ಬ; ಜಾಗೃತಿಯ ಜಾಗಟೆ; ಶಾಸ್ತ್ರಿಗಳ ಸೇವೆ; ಸಂಸ್ಕೃತಿಯ ಸೇತುವೆ; ಹರಿಹರ ಸೇವೆ; ಬೇಜಬರುವಾ; ಸಾಹಿತ್ಯ ಮಿತ್ರ; ನೂರರ ನೆನಪು; ಶೀಲದ ಸೆರಗು; ಪುಸ್ತಕ ಬೇಕೆ? ಪುಸ್ತಕ!; ಗುಲಾಬಿ ದಳಗಳು; ಇಮ್ಮಡಿ ಸಂತೋಷ; ಅಲಿಖಿತ ದಾಖಲೆ; ಸಿಂಕ್ಲೇರ್ ಸ್ಮರಣೆ; ರತ್ನಂಗಾಯ್ತು ರುವತ್ತು; ಕೊಡಗಿನ ಕವಿ; ಜ್ಞಾನಪೀಠ; ಸ್ಟೈನ್‌ಬೆಕ್; ಗಳಗನಾಥ ಗಾಥಾ; ಭಾವೈಕ್ಯದ ಹಾಡು; ಉತ್ಸಾಹದ ಕಥೆ; ಕಬ್ಬಿಗರ ಬಲ್ಲಹ; ಬತ್ತದ ತೊರೆ; ಗಾಲಿಬ್ ಗುಚ್ಛ; ನಮ್ಮ ಸಾಹಿತ್ಯ: ೧೯೬೭; ಪ್ರಶಸ್ತಿಯ ಬೊಟ್ಟು; ಸಾರ್ಥಕ ಐವತ್ತು; ಪ್ರಕಾಶಕರು: ಮೈಸೂರು ಸರಕಾರ; 'ವಿಜ್ಞಾನ ಕರ್ಣಾಟಕ'; ಪಾಶ್ಚಾತ್ಯರ ಕೊಡುಗೆ; ಋಷಿಕಾರ್ಯ; ವಂದೂರು ತಿಮ್ಮಕ್ಕ; ವಿಶ್ವನಾಗರಿಕ; ಕನ್ನಡ ನಾಡೊಂದೇ; 'ಭಾವ'–ಸ್ವಭಾವ; ಬೇಕಾಗಿದೆ– 'ಬಹುಮಾನ'; ಕಾವ್ಯಮೀಮಾಂಸೆಯ ಕಸಿ; ಇಬ್ಬರು ಹಿರಿಯರು; ಕನ್ನಡಕ್ಕೊಂದು ಪರಿಷತ್ತು; ಅಗ್ನಿವೀಣಾ ವಾದಕ; ಒಂದು ಪುಸ್ತಕದ ಕಥೆ; ಒಂದು ಐತಿಹ್ಯ; ಕೆನರೀಸ್ ಪೇಪರ್ ಕರೆಸ್ಪಾಂಡೆಂಟ್; ನಾಳಿನ ಲೇಖಕರು; ಕನ್ನಡಕ್ಕೊಂದು ನೆಲೆ; ಸಿದ್ಧವಾಗಿದೆ–'ಜ್ಞಾನ ಗಂಗೋತ್ರಿ'; ಹಲವು ನಾಲಗೆ, ಒಂದು ಹೃದಯ; ಬೆಳ್ಳಿ ಶಾರದೆ; ಉಡುಗೊರೆಯ ಭಾರ; ಕನಸು ಮತ್ತು ಪಯಣ; ಲೋಕಸಭೆಯಲ್ಲಿ ಬಂಕಿಮಚಂದ್ರ; ಕಾವ್ಯಾರಾಧಕ; ಪದ್ಮಾತೀರದ ಪ್ರತಿಭಾವಂತ; ಲೇಖಕರ ಸ್ವಾತಂತ್ರ್ಯ; ಜನಸೇವಕ–ಕವಿ; "ನಾವು ಅಪರಿಚಿತರಲ್ಲ"; ಮಾಸ್ತಿ ನರಸಿಂಗ ರಾವ್ ಎಂಬ ನೂರು ಲೇಖನಗಳು.

ಕೆ. ಎಸ್. ರಾಮಕೃಷ್ಣಮೂರ್ತಿ ಅವರಿಗೆ ಅರ್ಪಣೆ. ಬ್ಲರ್ಬ್‌ನಲ್ಲಿ ಲೇಖಕರ ಭಾವಚಿತ್ರ.

8310

೩೩

ಸೂಲಂಗಿ

ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು ೫೭೦ ೦೦೧; ಮೂ.ಮು. ೧೯೮೫; ಡೆಮ್ಮೈ ದ್ವಾದಶ, ೧೨೦; ೧೫.೦೦

ಬೆಂಗಳೂರು ಆಕಾಶವಾಣಿಯ 'ಚಿಂತನ' ಹಾಗೂ ಮೈಸೂರು ಆಕಾಶವಾಣಿಯ 'ಸುಭಾಷಿತ' ಕಾರ್ಯಕ್ರಮಗಳಲ್ಲಿ ಪ್ರಸಾರವಾದ ಕಿರು ಪ್ರಬಂಧಗಳು.

ಸರ್ವಭಾಷಾ ಸರಸ್ವತಿ; ದೂರ; ಅಧಿಕಾರ; ಸ್ವಾತಂತ್ರ್ಯ; ಸೌಜನ್ಯ; ಕೃತಜ್ಞತೆ; ವಿದ್ಯೆ; ಮಹತ್ವಾಕಾಂಕ್ಷೆ; ರಾಕ್ಷಸರು; ಔಚಿತ್ಯ; ಸುಖ; ಹೊಗಳಿಕೆ; ಕರ್ತವ್ಯ; ಆತ್ಮವಿಶ್ವಾಸ; ಹಕ್ಕು–ಹೊಣೆ; ಸಂಸ್ಕೃತಿ; ಪ್ರಶ್ನೆ; ಇಂದಿನ ಮನುಷ್ಯ; ಕಾಲುಹಾದಿಹೋಕರು; ಸರಸ್ವತಿ; ಸ್ನೇಹ; ಪುಸ್ತಕಗಳು; ರುಚಿ; ಹಸಿವು; ಕೀರ್ತಿ; ಪ್ರೀತಿ; ಸ್ಥಿತಿಪ್ರಜ್ಞಾ; ಓದುಗಾರಿಕೆ; ಭ್ರಷ್ಟಾಚಾರ; ಕಾಡು ಎಂಬ ಮೂವತ್ತು ಚಿಂತನಗಳು.

ಆ. ನೇ. ಉಪಾಧ್ಯೆ ಅವರಿಗೆ ಅರ್ಪಿತ. ರಕ್ಷಾಪತ್ರದ ಚಿತ್ರ ಮುರಳೀಧರ ರಾವ್ ಅವರದು. ಬೆನ್ನುಚಿತ್ರ ಅರ್ಕೇಶರದು. ಮೊದಲ ಮುದ್ರಣ: 'ಗೋಧೂಳಿ', ಮೈಸೂರು; ೧೯೭೮. ಎರಡನೆಯ ಮುದ್ರಣ: ಗೀತಾ ಬುಕ್ ಹೌಸ್, ಮೈಸೂರು; ೧೯೭೯.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩೪

ಸ್ಪಂದನ

ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ೫೭೦ ೦೦೯; ೧೯೮೩; ಡೆಮ್ಮೈ ದ್ವಾದಶ, ೧೦೦; ೧೦.೦೦

'ಇಂಚರ' ಮಾಸಪತ್ರಿಕೆಯಲ್ಲಿ ಪ್ರಕಟವಾದ ವರ್ತಮಾನ ಅಂಕಣ ಲೇಖನಗಳ ಸಂಪುಟ. ಡಿಸೆಂಬರ್ ೧೯೮೧ರಿಂದ ಮೇ ೧೯೮೩ರವರೆಗಿನ ಲೇಖನಗಳು ಇಲ್ಲಿ ಸಂಕಲನಗೊಂಡಿವೆ.

ತಾಯ್ನುಡಿಯಲ್ಲಿ ಶಿಕ್ಷಣ; ರಾಜ್ಯಗಳ ಸ್ವಾಯತ್ತತೆ; ಶಿಕ್ಷಣದ ಅವನತಿ; ಪ್ರಜಾಪ್ರಭುತ್ವದ ಹೆಣ; ಹೊಸ ಇತಿಹಾಸ; ಸೃಜನಶೀಲತೆ ಮತ್ತು ಸರ್ಕಾರ; ಶಾಲೆಗಳಲ್ಲಿ ಭಾಷೆಗಳ ಕಲಿಕೆ; ಅಭಿವ್ಯಕ್ತಿಗೆ ಕತ್ತರಿ; ನಗರ ಸಮಸ್ಯೆ; ಪತ್ರಿಕಾ ಸ್ವಾತಂತ್ರ್ಯ; ತಪ್ಪು ಹೆಜ್ಜೆ; ರಾಜ್ಯೋತ್ಸವದ ನಿರೀಕ್ಷೆ; ಅವನತಿಯ ಕಡೆಗೆ; ನಮ್ಮ ಓಟು ಯಾರಿಗೆ?; ಕಲಿಯಬೇಕಾದ ಪಾಠ; ಸರಳತೆ ಮತ್ತು ಮಂತ್ರಿಗಳು; ಅಸ್ಸಾಂ ಬವಣೆ; 'ಇಂಚರ'ದ ಕೊನೆ ಎಂಬ ಹದಿನೆಂಟು ಲೇಖನಗಳು. ಕಡೆಯಲ್ಲಿ ಮುಖ್ಯ ವಿಷಯಸೂಚಿ.

ಜಿ. ಕೆ. ಅನಂತರಾಮ್ ಅವರಿಗೆ ಅರ್ಪಣೆ.

ಅನುವಾದ

ಹಾಮಾನಾ ಅವರ ಮೂರು ಅನುವಾದ ಕೃತಿಗಳಲ್ಲಿ ಎರಡು (೩೫, ೩೭) ಮುಕ್ತ ಛಂದಸ್ಸಿನ ಕವನ ಸಂಕಲನಗಳು. ಒಂದು (೩೬) ಗದ್ಯ ಬರಹ, ಸಂಕ್ಷಿಪ್ತ ಜೀವನ ಚರಿತ್ರೆ. ಕವನ ಸಂಗ್ರಹಗಳಲ್ಲಿ ಮೊದಲನೆಯದು (೩೫) ಮೈಥಿಲಿ ಮೂಲ ನೋಡಿ ಇಂಗ್ಲಿಷ್ ಅನುವಾದಗಳ ಸಹಾಯದಿಂದ ಸಿದ್ಧಪಡಿಸಿದ್ದು. ಎರಡನೆಯದು (೩೭) ಇಂಗ್ಲಿಷ್ ಮೂಲವನ್ನು ಆಧರಿಸಿ ಹಿಂದಿ, ಪಂಜಾಬಿ ರೂಪಗಳ ಸಹಾಯ ಪಡೆದು ರಚಿಸಿದ್ದು. ಗದ್ಯ ಬರಹ (೩೬) ನೇರವಾಗಿ ಇಂಗ್ಲಿಷ್‌ನಿಂದ ಬಂದಿದೆ.

೩೫

ಪ್ರಣಯ ಪದಾವಳಿ

ತ.ವೆಂ. ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು ೫೭೦ ೦೦೨; ೧೯೮೪; ಡೆಮ್ಮೈ ದ್ವಾದಶ, ೮೦; ೩೫.೦೦

ಮೈಥಿಲಿ ಮೂಲವನ್ನು ನೋಡಿ ಸುಭದ್ರ ಝಾ, ದೆಬೆನ್ ಭಟ್ಟಾಚಾರ್ಯ, ಠಾಕೂರ್ ಹಾಗೂ ಅರವಿಂದರ ಇಂಗ್ಲಿಷ್ ಅನುವಾದಗಳಿಂದ ಸಿದ್ಧಪಡಿಸಿದ ವಿದ್ಯಾಪತಿಯ ಹಾಡುಗಳು.

ಚಂದ್ರಮಾಲೆ; ಸ್ನಾನಚಿತ್ರ; ದುರ್ಲಭ; ಉಭಯ ಸಂಕಟ; ಏಕೆ?; ಎಚ್ಚರಿಕೆ; ಗುಟ್ಟು; ಹಣೆಬರಹ; ಬೆರಣಿಯ ಬೆಂಕಿ; ಕಪಟಿ; ಬಯಕೆ; ಸೂಚನೆ; ನಷ್ಟ; ಮುಗಿದ ಊಟ; ನಾಚಿಕೆ; ದುರದೃಷ್ಟ; ಪ್ರಣಯ ಭೂಮಿ; ವಿಷಮಧು; ಅನಂತ; ಬಯಕೆ; ಜ್ವಾಲೆ; ಸೆರೆ; ಕನಸು; ನಿರಾಸೆ; ಚಂದ್ರಮುಖಿ; ಮೈ ವಸ್ತ್ರ; ಸಾಕ್ಷಿ; ದರ್ಶನ; ಪಶ್ಚಾತ್ತಾಪ; ಪರಿಹಾರ; ಪ್ರೇಮಸಂಕಟ; ವಿಪರೀತ; ಅವರ್ಣನೀಯೆ; ಮಳೆಯ ರಾತ್ರಿ; ಪ್ರಣಯ ಋತು; ರೂಪ; ಲೀಲೆ; ಬಾಯಾರಿಕೆ; ನಿರೀಕ್ಷೆ; ಕುಂಟಣಿ; ರುಚಿ; ಹರಯಭಾರ; ಸೂರೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪತ್ತು; ಫಲ; ನುಡಿಜೇನು; ಪಯಣ; ವ್ಯರ್ಥ; ರತಿಸುಖ; ದಾನ; ತಿರುಗ ಮುರುಗ; ಮಿತಿ; ಧೈರ್ಯ; ಔಷಧ; ಭ್ರಮರಾನುಭವ; ನೆಲಕಮಲ; ಪ್ರಥಮ ಪ್ರಣಯ; ವೃದ್ಧಿ; ಅವಸರ; ಹರಿದ ಬೇರು; ಪುಲಕಪೂಜೆ ಎಂಬ ಅರುವತ್ತೊಂದು ಹಾಡುಗಳು. ಕಡೆಯಲ್ಲಿ ಮೂಲದ ಮೊದಲ ಸಾಲು.

—ಗೆ ಅರ್ಪಣೆ. ಹಾಮಾನಾ ಅವರ ಸ್ವಂತ ರಚನೆ. ಹಾಡು ಪುಟಗಳಲ್ಲಿ ಚಂದ್ರನಾಥರ ಚಿತ್ರಗಳು. ರಕ್ಷಾಕವಚದ ಮಡಿಕೆಗಳಲ್ಲಿ ಲೇಖಕರ ಭಾವಚಿತ್ರ ಆರ್ಕೇಶರಿಂದ. ವಿದ್ಯಾಪತಿಯ ರೇಖಾಚಿತ್ರ.

೩೬

ಶಾಂತಿಸ್ವರೂಪ್ ಭಟ್ನಾಗರ್

ಕೆ. ವಿ. ಶ್ರೀನಾಥ್, ಆಹಾರ ಸಂಶೋಧನಾ ಕೇಂದ್ರ, ಮೈಸೂರು ೫೭೦ ೦೧೩; ೧೯೫೪; ಕಿರೀಟ ಅಷ್ಟದಳ, vi+೩೦; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಕೆ. ವಿ. ಶ್ರೀನಾಥ್ ಅವರ ಅಪ್ರಕಟಿತ ಇಂಗ್ಲಿಷ್ ಮೂಲದಿಂದ ಸಿದ್ಧಪಡಿಸಿದ ಅನುವಾದ.

ಶಾಂತಿಸ್ವರೂಪ್ ಭಟ್ನಾಗರರ ಸಂಕ್ಷಿಪ್ತ ಜೀವನ ಚರಿತ್ರೆ. ಮೂಲ ಲೇಖಕರ ಅರಿಕೆ. ರಕ್ಷಾಕವಚದಲ್ಲಿ ಶಾಂತಿಸ್ವರೂಪ್ ಭಟ್ನಾಗರರ ಭಾವಚಿತ್ರ.

೩೭

ಸುನೇರಿ

ಐಬಿಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು ೫೬೦ ೦೦೯; ೧೯೮೬; ಡೆಮ್ಮೈ ದ್ವಾದಶ, xxiv+೫೨; ೨೫.೦೦.

ಇಂಗ್ಲಿಷ್ ಅನುವಾದಗಳನ್ನು ಮುಖ್ಯವಾಗಿ ಆಧರಿಸಿ ಸಿದ್ಧಪಡಿಸಿದ ಅಮೃತಾ ಪ್ರೀತಮ್ ಅವರ ಕವನಗಳು. ಮೂಲ ಪಂಜಾಬಿಯನ್ನು ಓದಿಸಿ ಕೇಳಿ ಹಿಂದೀ ಅನುವಾದಗಳ ಸಹಾಯವನ್ನೂ ಪಡೆಯಲಾಗಿದೆ.

ಅಮೃತಾ ಪ್ರೀತಮ್; ಸ್ವದರ್ಶನ; ಬೀದಿನಾಯಿ; ಮಾತು; ಕನಸಿನ ರೊಟ್ಟಿ; ಮಧ್ಯರಾತ್ರಿಯಲ್ಲಿ; ನಂಬಿಕೆ; ಶಾಖ; ಬೆಂಕಿ ಕಥೆ; ರಾಜಕೀಯ; ರಾಜೀನಾಮೆ; ? ; ದಾಖಲೆ; ಹೊಸ ವರುಷದ ಶುಭಾಶಯ; ಸಾರ್ವಜನಿಕ ಭಾಷಣ; ಮನುಷ್ಯ; ಒಂದು ದೃಷ್ಟಿಕೋನ; ಜೀವನ; ಒಂದು ಕಾಗದ; ಅಧಿಕಾರ; ಹೆನ್ರಿ ಮಿಲ್ಲರ್; ಮ್ಯಾರಿಲಿನ್ ಮನ್ರೊ; ಸೋಭಾಸಿಂಹ; ಮಾರ್ಟಿನ್ ಲೂಥರ್ ಕಿಂಗ್; ದೈವದೂಷಣೆ; ನೀನು ಬರಲಿಲ್ಲ; ಮೌನದ ಸಂಚು; ಸ್ತಬ್ಧ ಚಿತ್ರ; ಅಳಲು; ಗಂಟು; ನಾಗಪಂಚಮಿ; ಇಂದು; ಆಸೆ; ಒಂದು ಭೇಟಿ; ಪ್ರಾರ್ಥನೆ; ಸಾಲುಗಳು; ವಿಳಾಸ ಎಂಬ ಮೂವತ್ತೇಳು ಕವಿತೆಗಳು.

—ಗೆ ಅರ್ಪಣೆ, ಠಾಕೂರರ ಪದ್ಯ. ಅಮೃತಾ ಪ್ರೀತಮ್ ಮತ್ತು ಹಾಮಾನಾ ಅವರ ಭಾವಚಿತ್ರಗಳು ರಕ್ಷಾಕವಚದ ಒಳಬದಿಗಳಲ್ಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪಾದಿತ

ಹಾಮಾನಾ ಅವರ ಸಂಪಾದಿತ ಕೃತಿಗಳ ಸಂಖ್ಯೆ ನಲವತ್ತೊಂಬತ್ತು. ಅವರು ಒಬ್ಬರೇ ಸಂಪಾದಿಸಿರುವ ಕೃತಿಗಳ ಸಂಖ್ಯೆ ಮೂವತ್ತೈದು (೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨). ಇತರರೊಡನೆ ಸಂಪಾದಿತವಾಗಿರುವ ಗ್ರಂಥಗಳ ಸಂಖ್ಯೆ ಹದಿನಾಲ್ಕು (೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೫, ೮೬). ಈ ವಿಭಾಗದ ಕೃತಿಗಳನ್ನು ಸ್ವಸಂಪಾದಿತ ಹಾಗೂ ಇತರರೊಡನೆ ಸಂಪಾದಿತ ಎಂದು ಬೇರೆಬೇರೆಯಾಗಿಸಿದ್ದರೂ ವಿಭಾಗದ ಮೊದಲಿನ ಟಿಪ್ಪಣಿಯ ವಿವರಗಳಲ್ಲಿ ಅವುಗಳನ್ನು ಒಟ್ಟಾಗಿಯೇ ಪರಿಗಣಿಸಿದೆ.

ಈ ನಲವತ್ತೊಂಬತ್ತು ಕೃತಿಗಳಲ್ಲಿ ಒಬ್ಬ ವ್ಯಕ್ತಿಯ ಬದುಕು, ಸಾಧನೆ, ಪ್ರಭಾವಗಳನ್ನು ಕುರಿತವು ಹತ್ತೊಂಬತ್ತು (೩೯, ೪೭, ೪೮, ೪೯, ೫೧, ೫೫, ೫೮, ೬೦, ೬೧, ೬೨, ೬೩, ೬೫, ೬೭, ೭೦, ೭೧, ೭೩, ೭೭, ೮೩, ೮೫). ಒಬ್ಬ ಲೇಖಕನ ಸಾಹಿತ್ಯವನ್ನು ಸಂಕಲಿರಿಸಿರುವಂಥವುಗಳು ಒಂಬತ್ತು (೪೦, ೪೧, ೫೨, ೫೩, ೫೪, ೫೭, ೬೮, ೬೯, ೭೨). ಈ ಒಂಬತ್ತು ಕೃತಿಗಳು ನಾಲ್ಕು ಜನ ಲೇಖಕರಿಗೆ ಸಂಬಂಧಿಸಿವೆ: ಡಿ.ವಿ.ಜಿ. (೫೨, ೫೩, ೭೨), ಬಿ.ಎಂ.ಶ್ರೀ. (೬೮, ೬೯), ಕುವೆಂಪು (೪೦, ೫೪) ಮತ್ತು ಡಿ. ದೇವರಾಜ ಅರಸು (೪೧, ೫೭). ಈ ನಾಲ್ವರಲ್ಲಿ ಗರಿಷ್ಠ ಸಂಖ್ಯೆ ಡಿ.ವಿ.ಜಿ.ಯವರದು. ಮಿಕ್ಕ ಮೂವರೂ ಎರಡನೆಯ ಸ್ಥಾನದಲ್ಲಿ ಸಮಾನ ಸಂಖ್ಯೆಯ ನಮೂದುಗಳನ್ನು ಪಡೆದಿದ್ದಾರೆ. ಡಿ.ವಿ.ಜಿ. ಕೃತಿಶ್ರೇಣಿಯ ಹನ್ನೊಂದು ಸಂಪುಟಗಳಲ್ಲಿ ಎರಡು ಮಾತ್ರ ಪ್ರಕಟವಾಗಿದ್ದು, ಮಿಕ್ಕ ಒಂಬತ್ತು ಸಂಪುಟಗಳೂ ಪ್ರಕಟಗೊಂಡಾಗ ಡಿ.ವಿ.ಜಿ. ಹಾಗೂ ಇತರರಿಗೆ ಸಂಬಂಧಿಸಿದಂತೆ ಹಾಮಾನಾ ಸಂಪಾದಿತ ಕೃತಿ ಸಂಖ್ಯಾ ಅಂತರ ಇನ್ನೂ ಹೆಚ್ಚಾಗುತ್ತದೆ.

ಕಾವ್ಯಕ್ಷೇತ್ರಕ್ಕೆ ಸಂಬಂಧಿಸಿದ ಹನ್ನೆರಡು (೪೦, ೪೨, ೪೩, ೪೪, ೪೫, ೪೬, ೭೮, ೭೯, ೮೦, ೮೧, ೮೨, ೮೪) ಸಂಕಲನಗಳಲ್ಲಿ ನಡುಗನ್ನಡಕ್ಕೆ ಸಂಬಂಧಿಸಿದ ಏಕೈಕ ನಮೂದು ಒಬ್ಬ ಕವಿಯ ಒಂದೇ ಒಂದು ಕಾವ್ಯದ ಸಂಪಾದನೆ (೮೧). ಒಬ್ಬನೇ ಕವಿಯ ಬಿಡಿ ಕವನಗಳ ಸಂಕಲನ, ಆಧುನಿಕ ಕನ್ನಡದ್ದು ಒಂದು (೪೦). ಹೊಸಗನ್ನಡದ ಬೇರೆಬೇರೆ ಕವಿಗಳ ಕವನ ಸಂಕಲನಗಳ ಸಂಖ್ಯೆ ಏಳು (೪೨, ೪೩, ೪೪, ೪೫, ೪೬, ೮೨, ೮೪). ಪ್ರತಿ ಭಾರತೀಯ ಭಾಷೆಯಿಂದ ಆಯ್ದ ಐದೈದು ಕವನಗಳನ್ನು ಹೊಂದಿದ್ದು, ಹಿಂದಿಗೆ ಅನುವಾದಿಸಲ್ಪಟ್ಟು ಪ್ರಕಟಗೊಂಡಿರುವ ಕವನ ಸಂಕಲನಗಳು ಮೂರು (೭೮, ೭೯, ೮೦).

ಮಿಕ್ಕವುಗಳಲ್ಲಿ ನಾಟಕ ಸಂಕಲನ ಒಂದು (೮೬). ಒಂದು ನಿರ್ದಿಷ್ಟ ಪ್ರದೇಶದ ಬರಹಗಾರರ ಕಥಾಸಂಕಲನ ಒಂದು (೫೬). ನಿಯತಕಾಲಿಕೆಯೊಂದರ ಚಿನ್ನದ ಹಬ್ಬದ ಸಂದರ್ಭಕ್ಕೆ ಸಂಬಂಧಿತವಾದುವು ನಾಲ್ಕು (೫೦, ೭೪, ೭೫, ೭೬). ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬದ ಸಂದರ್ಭದ್ದು ಒಂದು (೫೯). ಕನ್ನಡ ಅಧ್ಯಯನ ಸಂಸ್ಥೆ ನಡೆಸಿದ ಕಾರ್ಯ ಶಿಬಿರಗಳ ಕಲಾಪಗಳು ಒಟ್ಟಾಗಿರುವವು ಎರಡು (೬೪, ೬೬). ಹಾಮಾನಾ ಅವರ ಕೌಟುಂಬಿಕ ವಲಯಕ್ಕೆ ಸಂಬಂಧಿಸಿದ್ದು ಒಂದು (೩೮).

ಪಠ್ಯ ವಿಭಾಗದ ಹದಿಮೂರು ಕೃತಿಗಳೂ, ಸೂಚಿ, ಕೋಶ, ಪರಾಮರ್ಶನ ವಿಭಾಗದ ಹದಿನಾರು ಕೃತಿಗಳೂ ಸಂಪಾದಿತ ಕೃತಿಗಳೇ ಹೌದು. ಆದರೆ ಭಿನ್ನ ಉದ್ದೇಶ ಹಾಗೂ ಸಂಖ್ಯೆಯ ಹೆಚ್ಚಳಗಳಿಂದ ಇವುಗಳನ್ನು ಬೇರೆಯೇ ಪ್ರಕಾರಗಳಾಗಿ ಪರಿಗಣಿಸಲಾಗಿದೆ.

ಹಾಮಾನಾ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾಗ ಅವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದ ಕೃತಿಗಳನ್ನು—ಹಾಮಾನಾ ಅವರ ಕೊಡುಗೆ ಔಪಚಾರಿಕವಾಗಿದ್ದಲ್ಲಿ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಲ್ಲಿ ಪರಿಗಣಿಸಿಲ್ಲ. ಹಾಮಾನಾ ಅವರ ಪಾತ್ರ ಎಲ್ಲ ರೀತಿಯಿಂದಲೂ ಸಕ್ರಿಯವಾಗಿರುವ ಸಂಪಾದಿತ ಕೃತಿಗಳನ್ನು ಮಾತ್ರ ಇಲ್ಲಿ ಗಮನಿಸಿದೆ.

(ಅ) ಸ್ವಸಂಪಾದಿತ

೩೮

ಅಪ್ಪಯ್ಯ

ಗೋಧೂಳಿ, ಜಯಲಕ್ಷ್ಮೀಪುರಂ, ಮೈಸೂರು ೫೭೦ ೦೧೨; ೧೯೮೪; ಡೆಮ್ಮೈ ದ್ವಾದಶ, ೧೦೪; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಲೇಖಕರ ತಂದೆಯವರಾದ ಹಾರೋಗದ್ದೆ ಶ್ರೀನಿವಾಸನಾಯಕರು ನಿಧನರಾದಾಗ ರೂಪುಗೊಂಡ ಶ್ರದ್ಧಾಂಜಲಿ. ಅಪ್ಪಯ್ಯ; ಸ್ಮರಣೆ; ಸಾಂತ್ವನ; ಸ್ವಂತ ಎಂಬ ನಾಲ್ಕು ಭಾಗಗಳು.

ಮೊದಲ ಭಾಗದಲ್ಲಿ ಅಪ್ಪಯ್ಯ (ಹಾ. ಮಾ. ನಾಯಕ); ಬದುಕಿನ ಸ್ಫೂರ್ತಿ (ಎಚ್. ಎಸ್. ಈಶ್ವರ); ನೆನಪಿನ ಕಲ್ಪವೃಕ್ಷ (ಎಚ್. ಎಸ್. ಶ್ರೀದೇವಿ); ಅಪರೂಪದ ವ್ಯಕ್ತಿ (ಕಡಿದಾಳು ಶಾಮಣ್ಣ); ಅಂದಿನ ದಿನಗಳು (ಎಚ್. ಎಂ. ಕವಿತ); ನಕ್ಷತ್ರ (ಶಿಶಿರ) ಎಂಬ ಆರು ಲೇಖನಗಳು ಕುಟುಂಬದ ಸದಸ್ಯರು ಬರೆದವು. ಕಡೆಯದು ಒಂದು ಕಲ್ಪನೆ.

ಎರಡನೆಯ ಭಾಗದಲ್ಲಿ ನಿತ್ಯ ಮತ್ತು ಅಮೃತ (ಕುವೆಂಪು); ಆಪ್ತಮಿತ್ರ (ಎ. ಆರ್. ಬದರಿ ನಾರಾಯಣ್); ತುಂಬಲಾಗದ ಅರಕೆ (ಗೊರೂರು ರಾಮಸ್ವಾಮಿ ಅಯ್ಯಂಗಾರ್); ಪ್ರಾತಿನಿಧಿಕ ಮನುಷ್ಯ (ಡಿ. ವಿ. ಅರಸು); ಜನ್ಮ ಜನ್ಮಾಂತರದ ನಂಟು (ಚದುರಂಗ); ಸುಸಂಸ್ಕೃತ ಜೀವ (ತ.ರಾ.ಸು.); ಸಜ್ಜನಿಕೆಯ ಪ್ರತೀಕ (ಜಿ. ಎಸ್. ಸುಬ್ರಹ್ಮಣ್ಯಂ); ಮಾಸದ ಚಿತ್ರ (ಜಿ. ಶಂ. ಪರಮಶಿವಯ್ಯ); ತೀರದ ಋಣಭಾರ (ನಾಗಾನಂದ); ಕೃತಜ್ಞತೆ (ಅ. ನ. ಕೃಷ್ಣರಾಯ) ಎಂಬ ಹತ್ತು ಲೇಖನಗಳು. ಕಡೆಯದು ಒಂದು ಪತ್ರದ ಭಾಗ.

ಮೂರನೆಯ ಭಾಗದಲ್ಲಿ ಹಾರೋಗದ್ದೆ ಶ್ರೀನಿವಾಸನಾಯಕರ ಮರಣ ಸಂದರ್ಭದಲ್ಲಿ ಬೇರೆ ಬೇರೆಯವರು ಬರೆದ ಸಹಾನುಭೂತಿಯುತ ಪತ್ರಗಳ ಭಾಗಗಳು.

ನಾಲ್ಕನೆಯ ಭಾಗದಲ್ಲಿ ನಾನು ಗಾಂಧೀಜಿಯವರನ್ನು ನೋಡಿದ್ದೆ (ಹಾರೋಗದ್ದೆ ಶ್ರೀನಿವಾಸನಾಯಕ) ಎಂಬ ಲೇಖನ.

ಅಪ್ಪಯ್ಯನ ನಂದಾ ನೆನಪಿಗೆ ಅರ್ಪಿತ. ಮುಖಪುಟದಲ್ಲಿ ಹಾರೋಗದ್ದೆ ಶ್ರೀನಿವಾಸ ನಾಯಕರ ಹಾಗೂ ಅವರ ಪತ್ನಿ ರುಕ್ಮಿಣಿಯಮ್ಮ ಅವರ ಭಾವಚಿತ್ರ. ಅದರ ಹಿಂಭಾಗದಲ್ಲಿ ಒಂದು ಕೌಟುಂಬಿಕ ಭಾವಚಿತ್ರ. ಹೊದಿಕೆಯ ಎರಡೂ ಕಡೆಗಳಲ್ಲಿ ಹಾರೋಗದ್ದೆ ಶ್ರೀನಿವಾಸನಾಯಕರ ಭಾವಚಿತ್ರಗಳು.

೩೯

ಆಲೂರ ವೆಂಕಟರಾಯರು

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬; ೧೯೮೩; ಡೆಮ್ಮೈ ಅಷ್ಟದಳ, viii+೮೪; ೪.೦೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಲೂರ ವೆಂಕಟರಾಯರ ಜನ್ಮಶತಾಬ್ದಿ ಸಂದರ್ಭದಲ್ಲಿ ಆಗಸ್ಟ್ ೨, ೧೯೮೦ರಂದು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನ.

ಆಲೂರ ವೆಂಕಟರಾಯರ ಜೀವನ, ವ್ಯಕ್ತಿತ್ವ ಹಾಗೂ ಸಾರ್ವಜನಿಕ ಸೇವೆ (ವರದರಾಜ ಹುಯಿಲಗೋಳ); ಕನ್ನಡ–ಕರ್ನಾಟಕ: ಆಲೂರರ ವಿಚಾರಗಳು (ಎಂ. ಚಿದಾನಂದಮೂರ್ತಿ); ಭಗವದ್ಗೀತೆಯನ್ನು ಕುರಿತು ಆಲೂರರ ಸಾಹಿತ್ಯ (ಕೆ. ಕೃಷ್ಣಮೂರ್ತಿ); ದ್ವೈತ ಸಾಹಿತ್ಯ ವಿವೇಚನೆ (ಜಿ. ವರದರಾಜ ರಾವ್); ಪತ್ರಿಕೋದ್ಯಮಿ ಆಲೂರು ವೆಂಕಟರಾಯರು (ಕೆ. ಎಸ್. ದೇಶಪಾಂಡೆ) ಎಂಬ ಐದು ಪ್ರಬಂಧಗಳು. ಕಡೆಯಲ್ಲಿ ಆಲೂರು ವೆಂಕಟರಾಯರ ಪ್ರಕಟಿತ ಕೃತಿಗಳ ಪಟ್ಟಿ.

೪೦

ಕನ್ನಡ ಡಿಂಡಿಮ

ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ೫೭೦ ೦೦೯; ಮೂ.ಮು. ೧೯೭೭; ಕಿರೀಟ ಅಷ್ಟದಳ, ೬೪; ೨.೫೦

ಕನ್ನಡನಾಡು ನುಡಿಗಳಿಗೆ ಸಂಬಂಧಿಸಿದಂತೆ ಕುವೆಂಪು ಅವರು ರಚಿಸಿರುವ ಕವನಗಳ ಸಂಕಲನ. ಕನ್ನಡ ದೀಕ್ಷೆ ಎಂಬ ಪ್ರಸ್ತಾವನೆಯಲ್ಲಿ ಕುವೆಂಪು ಅವರ ವಿವಿಧ ಗದ್ಯ ಬರಹಗಳಿಂದ ಆಯ್ದ ಕನ್ನಡವನ್ನು ಕುರಿತ ವಿಚಾರಧಾರೆ. ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ ವರ್ಷದಲ್ಲಿ ಅವರ ಅರುವತ್ತನಾಲ್ಕನೆಯ ಹುಟ್ಟುಹಬ್ಬದಂದು ಪ್ರಕಟಿತ.

ಕನ್ನಡ ಡಿಂಡಿಮ; ಮೆಟ್ಟುವ ನೆಲ ಕರ್ಣಾಟಕ; ಕರ್ನಾಟಕ ಮಂತ್ರದೀಕ್ಷೆ; ಕನ್ನಡ; ಅಖಂಡ ಕರ್ಣಾಟಕ; ಐಕ್ಯೆಕ ಕರ್ನಾಟಕ; ಹೆಸರಿಟ್ಟಂದು; ಜಯ ಹೇ ಕರ್ನಾಟಕ ಮಾತೆ!; ಓ ನನ್ನ ಕನ್ನಡವೆ!; ಅಳುಕದೀ ಕನ್ನಡಂ; ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ!; ಕನ್ನಡಮ್ಮನ ಹರಕೆ; ಸಾಕು ಈ ಬಲಾತ್ಕಾರ; ಪ್ರಾರ್ಥಿಸಿ, ಓ ಮಕ್ಕಳಿರಾ!; ಕಂದ ಕನ್ನಡನಿವನು ಕೈಬಿಡದಿರಮ್ಮಾ; ಕರ್ಣಾಟಕ ರಾಜ್ಯೋದಯ ಶ್ರೀಗೀತೆ; ರಾಜ್ಯಪಾಲರಿಗೆ ಅಭಿನಂದನೆ; ಬಲಾತ್ಕಾರದ ಭಾಷಾ ತ್ರಿಶೂಲ!; ಮೂರು ಪುಡಿ ಕವನಗಳು; ಶಿಲಾಭೇರಿ; ಹಂಪೆಯಲ್ಲಿ; ಭರತಭೂಮಿ ನನ್ನ ತಾಯಿ; ಭಾರತ ಜನನಿಗೆ; ಸಂಸ್ಕೃತಮಾತೆ; ಭಾವೈಕ್ಯತೆ; ಪ್ರಾರ್ಥನೆ ಎಂಬ ಇಪ್ಪತ್ತಾರು ಕವಿತೆಗಳು. ಕುವೆಂಪು ಜೀವನದ ಕೆಲವು ಮುಖ್ಯ ವರ್ಷಗಳು; ಕುವೆಂಪು ಅವರ ಕೃತಿಗಳು ಎಂಬ ಎರಡು ಅನುಬಂಧಗಳು.

೪೧

ಕರ್ನಾಟಕಕ್ಕೆ ಶುಭವಾಗಲಿ

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬; ೧೯೭೬; ಡೆಮ್ಮೆ ಅಷ್ಟದಳ, xvi+೨೭೬; ೧೬.೦೦, ೨೦.೦೦

ಕರ್ನಾಟಕದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಆಯ್ದ ಭಾಷಣಗಳ ಮೊದಲ ಸಂಪುಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೂರದ ದಾರಿ; ಅಧಿಕೃತ ನಾಮಕರಣ; ಸನ್ಮಾನದ ಪ್ರಚೋದನೆ; ಸಮೃದ್ಧ ಕರ್ನಾಟಕ; ನಾವು ಕಟ್ಟಬೇಕಾದ ಕರ್ನಾಟಕ; ಅರ್ಹರಿಗೇ ಪ್ರಶಸ್ತಿ; ಧನುರ್ಧಾರಿ; ನಮಗೆ ಬೇಕಾದ ಸಾಹಿತ್ಯ; ಪ್ರಗತಿಯ ಹೆಜ್ಜೆ; ಕನ್ನಡ ಅಧ್ಯಯನ ಸಂಸ್ಥೆಗಳ ಹೊಣೆ; ರಂಗಭೂಮಿಯ ಬೆಳವಣಿಗೆ; ಭಾಷಾ ಸಾಮರಸ್ಯ; ಭಾಷೆಗಳ ಸ್ಥಾನ; ವಿಶ್ವವಿದ್ಯಾನಿಲಯಗಳಲ್ಲಿ ಶಿಸ್ತು; ಹೊಂದಾಣಿಕೆಯ ಬದುಕು; ನಮ್ಮ ಚಲನಚಿತ್ರಗಳ ಬೆಳವಣಿಗೆ; ವಿಶ್ವಶಾಂತಿ; ಸಂಗೀತ ಮತ್ತು ಜೀವನ; ಪತ್ರಿಕೋದ್ಯಮದ ಸಮಸ್ಯೆಗಳು; ಅರವಿಂದರ ಸಂದೇಶ; ಜಯದೇವಿ ತಾಯಿ; ತಾಯಿಬೇರು; ಭಾಷಾ ಅಲ್ಪಸಂಖ್ಯಾತರ ಸಮಸ್ಯೆಗಳು; ಹೊರನಾಡಿನ ಕನ್ನಡಿಗರ ಹೊಣೆ; ಹೊಸಕಾಲದ ಧರ್ಮ; ಸನಾತನ ಧರ್ಮ–ಸಮಾಜವಾದ; ಶ್ರೀ ಶಿವಕುಮಾರ ಸ್ವಾಮಿಗಳು; ಚಿತ್ರರಂಗದ ಸಮಸ್ಯೆಗಳು; ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕ; ವಿದ್ಯಾರ್ಥಿಗಳು ಮತ್ತು ನಮ್ಮ ಸಂಸ್ಕೃತಿ; ಮೃಗಾಲಯಗಳ ಮಹತ್ವ; ನಮ್ಮ ನಮ್ಮ ಜವಾಬ್ದಾರಿ; ವಿದ್ಯಾರ್ಥಿಗಳು ಮತ್ತು ಸಮಾಜಸೇವೆ; ನಗರಸಭೆಯ ಕರ್ತವ್ಯ; ಕೊಡಗಿಗೊಂದು ಕ್ರೀಡಾಂಗಣ; ಹೆಣ್ಣುಮಕ್ಕಳ ಶಿಕ್ಷಣ; ಸಾಮಾಜಿಕ–ಆರ್ಥಿಕ ನ್ಯಾಯ; ವಸ್ತು ಪ್ರದರ್ಶನಗಳು; ಗ್ರಾಹಕರು ಮತ್ತು ಮಧ್ಯವರ್ತಿಗಳು; ತೋಟಗಾರಿಕೆ; ಪರಿಶಿಷ್ಟ ವರ್ಗದ ಹೆಣ್ಣುಮಕ್ಕಳ ಶಿಕ್ಷಣ; ವಿದ್ಯಾರ್ಥಿ ಪರಿಷತ್ತು: ಹೊಣೆ ಮತ್ತು ಕರ್ತವ್ಯ; ಸಾಕ್ಷ್ಯ ಚಿತ್ರಗಳು ಮತ್ತು ವಾರ್ತಾ ಚಿತ್ರಗಳು; ಶಿಕ್ಷಣ: ಹೊಣೆಗಳು–ಸಮಸ್ಯೆಗಳು; ಪದವೀಧರರ ಜವಾಬ್ದಾರಿ; ಧರ್ಮ ಪ್ರಸಾರ; ಕರಾವಳಿಯ ಅಭಿವೃದ್ಧಿ; ಮಲೆನಾಡಿನ ಅಭಿವೃದ್ಧಿ; ನಮ್ಮ ಅರಣ್ಯ ಸಂಪತ್ತು; ಭೂಮಿಯ ಒಡೆತನ ಎಂಬ ಐವತ್ತು ಭಾಷಣಗಳು.

ದ. ರಾ. ಬೇಂದ್ರೆಯವರ ಮುನ್ನುಡಿ ನಾಲ್ಕು ಅಕ್ಕಿ-ಕಾಳು. ಅನುಬಂಧದಲ್ಲಿ ಭಾಷಣಗಳ ಸಂದರ್ಭಸೂಚಿ. ರಕ್ಷಾಪತ್ರದ ಕಲೆ ಮುರಳೀಧರ ರಾವ್ ಅವರದು.

೪೨

ಕಾವ್ಯಕಾರಂಜಿ

ದಸರಾ ಮಹೋತ್ಸವ ಸಮಿತಿ, ಮೈಸೂರು; ೧೯೮೨; ಕಿರೀಟ ಅಷ್ಟದಳ, xvi+೧೦೪; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

೧೯೮೨ರ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆದ ಕವಿಸಮ್ಮೇಳನದಲ್ಲಿ ಓದಿದ ಕವಿತೆಗಳ ಸಂಕಲನ.

ನಿಂತುಹೋಗಿದೆ, ವಿ(ನಿ)ಧಾನಸೌಧದ ಮೇಲಿನ ಸಿಂಹಗಳು (ರಸಿಕರಂಗ); ಕಾರ್ತೀಕ, ಭಾಜಪೇಯ–ವಾಜಪೇಯ (ಅಲ್ಲಮಪ್ರಭು ಬೆಟ್ಟದೂರು); ಹೊತ್ತು ಮುಳುಗುವ ಮುನ್ನ, ಧ್ವನಿವರ್ಧಕ (ಜಿ. ಎಸ್. ಅವಧಾನಿ); ಪಾಲ್ಗಡಲಿನ ತಡಿಗೆ (ಕಯ್ಯಾರ ಕಿಞ್ಞಣ್ಣ ರೈ); ವೇಷಾಂತರ (ಗೋಪಾಲಕೃಷ್ಣ ಅಡಿಗ); ಕಸದೊಳಗಿನ ಕನಸು, ಅಸ್ತಿತ್ವ (ಚಂದ್ರಶೇಖರ ತಾಳ್ಯ); ಜೀವ ಪೀಠದ ಪಾಠ, ಕೊನೆ, ಆದಿ ಬಸವಿ (ವೀಚಿ); ಪಂಜರದ ಗಿಳಿ, ಗಾಂಧೀವೃತ್ತ, ಫಸಲಿಗೆ ಕುತ್ತು (ಪ್ರಭುಸ್ವಾಮಿ ಮಠ); ನಾನು, ಅಪರಾಧೀ ಭಾವಗಳು (ಡಿ. ಕೆ. ಭಾಗ್ಯ); ಶೈಲಿ, ಆಕಳಿಕೆ (ನಾ. ಮೊಗಸಾಲೆ); ಸಾರ, ಹುಟ್ಟಿ ಬರುತ್ತಿದ್ದೇನೆ, ದೌರ್ಬಲ್ಯ, ನಾ ಬಿಟ್ಟು ಬಂದ ಶ್ರುತಿ–ಸ್ಮೃತಿ (ಪಿ. ಎಸ್. ರಾಮಾನುಜಂ); ದಸರಾ–೧೯೮೨ (ಶಂಕರ ಮೊಖಾಶಿ ಪುಣೇಕರ); ಉದುರುವ ಎಲೆಗಳು, ಅದಲು ಬದಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಶ್ರೀನಿವಾಸ ವಿ. ಸುತ್ರಾವೆ); ಪೋ ಚುಯಿಗೆ, ನೆರಳು (ಬಿ. ಎ. ಸನದಿ); ಮುಂದೆ ದಾರಿ ಯಾವುದು? ನಗ್ನತೆ ಮತ್ತು ಹಸಿವು, ನಮ್ಮೂರ ಜಾತ್ರೆ (ಸರಸ್ವತಿ ಪೂಜಾರ); ಹಗಲಾಗ ಚಿಕ್ಕಿ ಕಾಣುದುಲ್ಲ, ಮಾನಗೇಡಿ ಮಂದಿಯೆಲ್ಲ, ದೇವರನ್ನಾವಿದ್ದಿದ್ದsರ (ಸಿದ್ದಲಿಂಗ ದೇಸಾಯಿ); ಬೇಕಾಗಿದ್ದಾರೆ, ಬೇರು (ಜಿ. ಎಸ್. ಸಿದ್ದಲಿಂಗಯ್ಯ); ನನ್ನ ನಿನ್ನ ನಡುವೆ, ಒಂದು ಹಸುವಿನ ಕತೆ, ಸಂಗ್ರಾಮ (ಸುಕನ್ಯಾ ಮಾರುತಿ); ಮಧ್ಯ ತರಗತಿ ಮನಿಷೀ, ಕುಶಲಪ್ರಶ್ನ (ಟಿ. ಬಿ. ಎಂ. ಅಯ್ಯವಾರು); ನಾವಾತ್ ಕಾಯ್ ಆಹೇ? ಆದರ್ಶ್ (ಚಂದ್ರಶೇಖರ ಕಪಾಳಿ); ಯುದ್ಧವುಂ ಶಾಂತಿಯುಂ, ವಿಷಾದ ಸತ್ಯಂ, ಜೀವಿತತ್ತಿ ನೆನ್ಪ್ ತಾಳಂ (ಎಸ್. ಕೇಶವನ್ ಪೋಟ್ಟಿ); ಬಿಖರ್ ಗಯೀ ಬಿಂದಿಯಾ, ಆಧುನಿಕೇ (ಮಾಲತಿ ಟಂಡನ್); ಸೆಲ್ಲಿ, ತಳ್ಳೊ (ರೆ.ಫಾ. ವೈಟಸ್ ಪ್ರಭುದಾಸ್); ಗಜಲ್, ಇಸ್ ಷಹರ್ ಪೆ ಸಾಯ್ ಯೆ ಹುಮಾ ಹೈ (ಹೈದರ್ ಕರ್ಮಡಿ) ಎಂಬ ಇಪ್ಪತ್ನಾಲ್ಕು ಜನ ಕವಿಗಳ ಐವತ್ಮೂರು ಕವಿತೆಗಳು. ಕನ್ನಡೇತರ (ತೆಲುಗು, ಮರಾಠಿ, ಮಲಯಾಳಂ, ಹಿಂದಿ, ಕೊಂಕಣಿ ಮತ್ತು ಉರ್ದು) ಭಾಷೆಗಳ ಕವಿತೆಗಳು ಪ್ರತಿಲಿಪೀಕರಣದಲ್ಲಿ ಮತ್ತು ಕನ್ನಡ ಅನುವಾದಗಳೊಡನೆ.

ಕಾವ್ಯಕಾರಂಜಿಯ ಕವಿಗಳ ವಿವರಗಳು, ಎಚ್. ಶಿವರಾಮು ಅವರ ಸ್ವಾಗತ, ರಂ. ಶ್ರೀ ಮುಗಳಿ ಅವರ ಅಧ್ಯಕ್ಷ ಭಾಷಣ. ರಕ್ಷಾಪತ್ರದ ಮೇಲೆ ಕಾರಂಜಿಯ ವರ್ಣಚಿತ್ರ (ಅರ್ಕೇಶ್ವರಾಚಾರ್).

೪೩

ಕಾವ್ಯದೀಪ

ದಸರಾ ಮಹೋತ್ಸವ ಸಮಿತಿ; ಮೈಸೂರು; ೧೯೮೩; ಕಿರೀಟ ಅಷ್ಟದಳ, xvi+೯೬; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

೧೯೮೩ರ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆದ ಕವಿಸಮ್ಮೇಳನದಲ್ಲಿ ಓದಿದ ಕವಿತೆಗಳ ಸಂಕಲನ.

ನಾಡಿನ ಪಾಡು (ಪು.ತಿ.ನ.); ಹೇಳಬಲ್ಲೆಯಾ ಗೆಳತಿ? (ಇಂದೂಧರ ಹೊನ್ನಾಪುರ); ಗೊನೆ ಬಿಟ್ಟ ಬಾಳೆ, ಬೀಡಿ ಹುಡುಗಿಯರು (ಜಿ. ಎಸ್. ಉಬರಡ್ಕ); ಅವಿನಾ ಭಾವ, ಸನ್ಮಾನ (ಗುಡಿಬಂಡೆ ಪೂರ್ಣಿಮಾ); ದಾರಿ—ಹಾಡು, ಮೌನ (ಕೆ. ಎಸ್. ನರಸಿಂಹ ಸ್ವಾಮಿ); ಮದುವೆಗೆ ಒಗ್ಗದವಳು, ನಾಟಿಗೊಂಡ ದೇಹ, ನಗರದೊಡಲಿನ ಹಳ್ಳಿಗಳು ('ಸುಜನಾ'); ನೆನಪು, ಹುಡುಗ ಬೇಕಾಗಿದ್ದಾನೆ, ಪು.ತಿ.ನ. (ಕ. ವೆಂ. ರಾಜಗೋಪಾಲ); ಮಾತು—೧, ಮಾತು—೨, ಮಾತು—೩ (ರಾಮಚಂದ್ರ ಶರ್ಮ); ಪಲ್ಲವಿ, ಲಕ್ಷ್ಮಣರೇಖೆ ದಾಟಿದವರು (ವಿಜಯಶ್ರೀ ಸಬರದ); ಚಾಮುಂಡೆವ್ವಗೊಂದ ಮಾತು (ಶಶಿಕಲಾ ವಸ್ತ್ರದ); ಕತ್ತಲೆ ನಡುವಿನ ಬೆಳಕು (ಶ್ಯಾಮಸುಂದರ ಬಿದರಕುಂದಿ); ಗಾಂಧಾರಿ ಹೆಜ್ಜೆ, ಸಾವು (ಕೆ. ನ. ಶಿವತೀರ್ಥನ್); ಅನ್ನಶಾಂತಿ, ರಾಕ್ಷಸರು (ಸುಮತೀಂದ್ರ ನಾಡಿಗ); ಶ್ರೀಸಾಮಾನ್ಯನ ಹಾಡು, ಅಲ್ಲೋಲ ಕಲ್ಲೋಲ (ಸುಂದರ ನಾಡಕರ್ಣಿ); ಈ ಊರು, ಗೊಮ್ಮಟೇಶ (ಸೋಮಶೇಖರ ಇಮ್ರಾಪೂರ); ಮುಕ್ತಿದಃ ಶ್ರೀರಾಮಃ, ವಿವೇಕಃ, ಪರಿಸ್ಥಿತಿಃ (ಗುರುಪಾದ ಹೆಗಡೆ); ನೇನು ನಾ ಈ ಮೈಸೂರು (ಬಾಡಾಲ ರಾಮಯ್ಯ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಮಲ್, ಕರ್ನಾಟಕ್ (ವೆಂಕಟೇಶ ವಳಸಂಗಕರ್); ಸಮಾಧಾನ್, ಇಂತಜಾರ್ (ಸಿದ್ಧಲಿಂಗ ಪಟ್ಟಣಶೆಟ್ಟಿ); ಸುಂದರ್ ಕಿತ್ಲಿ "ಕೊಂಕ್ಣಿ ಪ್ರಕೃತ್!" ನಂದನ್ ಕಿತ್ಲಿ "ಕೊಂಕ್ಣಿ ಸಂಸ್ಕೃತ್" (ಫಾದರ್ ಅಂತೋಣಿ ಡಿಸೋಜಾ); ಆಯೆ ಬತ್ತೆ ಉಂಬ್ಯೆ ಬತ್ತೆ (ಪಾ.ವೆಂ. ಆಚಾರ್ಯ); ಹರ್ ಫೆ ಅವ್ವಲ್, ಹಮ್‌ಲೋಗ್, ಗಜಲ್ (ಹಮೀದ್ ಅಲ್ಮಾಸ್) ಎಂಬ ಇಪ್ಪತ್ತೆರಡು ಜನ ಕವಿಗಳ ನಲವತ್ತೆರಡು ಕವಿತೆಗಳು. ಕನ್ನಡೇತರ (ಸಂಸ್ಕೃತ, ತೆಲುಗು, ಮರಾಠಿ, ಹಿಂದಿ, ಕೊಂಕಣಿ, ತುಳು ಮತ್ತು ಉರ್ದು) ಭಾಷೆಗಳ ಕವಿತೆಗಳು ಪ್ರತಿಲಿಪೀಕರಣದಲ್ಲಿ ಮತ್ತು ಕನ್ನಡ ಅನುವಾದಗಳೊಂದಿಗೆ.

ಕಾವ್ಯದೀಪದ ಕವಿಗಳ ವಿವರಗಳು. ಎಚ್. ಶಿವರಾಮು ಅವರ ಸ್ವಾಗತ. ಪು. ತಿ. ನರಸಿಂಹಾಚಾರ್ ಅವರ ಅಧ್ಯಕ್ಷ ಭಾಷಣ. ರಕ್ಷಾಪುಟದಲ್ಲಿ ಮೈಸೂರು ಅರಮನೆಯ ದೀಪಾಲಂಕಾರದ ವರ್ಣಚಿತ್ರ (ಬಿ. ಕೇಸರ ಸಿಂಗ್).

೪೪

ಕಾವ್ಯನವರಾತ್ರಿ

ದಸರಾ ಮಹೋತ್ಸವ ಸಮಿತಿ, ಮೈಸೂರು; ೧೯೮೦; ಕಿರೀಟ ಅಷ್ಟದಳ, xvi+೬೪; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

೧೯೮೦ರ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆದ ಕವಿಸಮ್ಮೇಳನದಲ್ಲಿ ಓದಿದ ಕವಿತೆಗಳ ಸಂಕಲನ.

ಹಲ್ಲಿಗಳು, ಸಾಧನೆ (ಚೆನ್ನವೀರ ಕಣವಿ); ಸ್ವಗತ, ಎಚ್ಚರ (ಬಿ. ಆರ್. ಲಕ್ಷ್ಮಣ ರಾವ್); ಜ್ಞಾನೋದಯ, ಪ್ರಸ್ತುತ (ಎಂ. ಎನ್. ಜೈಪ್ರಕಾಶ್); ಅನಾಮಿಕ ಆಂಗ್ಲರು (ಕೆ. ಎಸ್. ನಿಸಾರ್ ಅಹಮ್ಮದ್); ಕೊಡುಗೆ, ಹುಡುಗಿಯ ಕಥೆ (ಸು. ರಂ. ಎಕ್ಕುಂಡಿ); ಸಾಹೇಬರು (ಎಚ್. ಎಮ್. ಚನ್ನಯ್ಯ); ವಿಶ್ವಾಸ, ಆಲ ನೆಟ್ಟವ್ನಿಗೆ (ಎಸ್. ಉಷಾ); ಮುಳುಗುತ್ತಲಿದೆ ನನ್ನೂರು, ರಂಡೀ ಹುಣ್ಣಿವಿ ಹಾಡು (ಆನಂದ ಝುಂಜರವಾಡ); ಲೆಖ್ಯಾ, ರೇಖಾ, ಹ್ಯಾಗಿದ್ದೀರಿ (ಅರವಿಂದ ನಾಡಕರ್ಣಿ); ನಿಟ್ಟುಸಿರು ಬೇಡ ಗೆಳತಿ, ಕೇಳಿ ಎಲುಬುಗಳೇ!, ದೃಷ್ಟಿ, ಬಿತ್ತರ (ಬಿ. ಟಿ. ಲಲಿತಾನಾಯಕ್); ದ್ರೌಪದಿ ಸ್ವಗತ, ನಾವು—ದಂತಕಥೆ (ಎಂ. ಸರಸ್ವತಿ ಗೌಡ); ಮೈಸೂರು (ವೇಣುಗೋಪಾಲ ಸೊರಬ); ಇವನ ಕತೆ ಹೀಗೇ..., ಒಂದು ಅಪ್ಪಟ ಚಿತ್ರ (ಸುಬ್ರಾಯ ಚೊಕ್ಕಾಡಿ); ನಮಗೆ ಸ್ವಾತಂತ್ರ್ಯವೇ ಇಲ್ಲ (ಚಂದ್ರಶೇಖರ ಕಂಬಾರ); ಕೋಗಿಲೆಯ ಕಳವಳ, ಇಲ್ಲಿ ಹೆಜ್ಜೆಗೊಂದು ದ್ವೀಪ (ಎಂ. ಅಕಬರ ಅಲಿ); ಪರಂಪರೆ, ಪತಿದೇವರಿಗೊಂದು ಬಹಿರಂಗ ಪತ್ರ (ಡಿ. ವಿಜಯ); ರೈಲು, ಸೂರ್ಯೋದಯ (ಜಿ. ಗೋವಿಂದಯ್ಯ); ಅಪಮೌಲ್ಯಮಸ್ತು (ಸಿ. ಜಿ. ಪುರುಷೋತ್ತಮ); ಮಂದಾರ ಹಾರಂ, ಅಗ್ನಿವರ್ಷಂ (ಟಿ. ವಿ. ಸುಬ್ಬಾರಾವ್); ಪರ್ಕಿ ದೆವಾಂಕ್, ಚಲ್ತಾಂ ಚಲ್ತಾಂ, ದೆವಾಚೆಂ ಗೊರುಂ (ಎಡ್ವರ್ಡ್ ನೊರೋನ); ಘಜ್ಹಲ್ (ಸಾಬಿರ್ ಶಹಾಬಾದಿ); ಘಜ್ಹಲ್ (ಮಜರುಸ್ಸಮದ್) ಎಂಬ ಇಪ್ಪತ್ತೆರಡು ಜನ ಕವಿಗಳ ನಲವತ್ತೊಂದು ಕವಿತೆಗಳು. ಕನ್ನಡೇತರ (ಸಂಸ್ಕೃತ, ತೆಲುಗು, ಕೊಂಕಣಿ ಮತ್ತು ಉರ್ದು) ಭಾಷೆಗಳ ಕವಿತೆಗಳು ಪ್ರತಿಲಿಪೀಕರಣದಲ್ಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾವ್ಯನವರಾತ್ರಿಯ ಕವಿಗಳ ವಿವರಗಳು. ಚೆನ್ನವೀರ ಕಣವಿ ಅವರ ಅಧ್ಯಕ್ಷ ಭಾಷಣ. ರಕ್ಷಾಪುಟದಲ್ಲಿ ಅರಮನೆಯ ದೀಪಾಲಂಕಾರದ ವರ್ಣಚಿತ್ರ.

೪೫

ಕಾವ್ಯಮೇಳ

ದಸರಾ ಮಹೋತ್ಸವ ಸಮಿತಿ, ಮೈಸೂರು; ೧೯೮೪; ಕಿರೀಟ ಅಷ್ಟದಳ, xvi+೧೦೮; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

೧೯೮೪ರ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆದ ಕವಿಸಮ್ಮೇಳನದಲ್ಲಿ ಓದಿದ ಕವಿತೆಗಳ ಸಂಕಲನ.

ನಮ್ಮಪ್ಪನ ಈ ಮಂಚ, ಕಸದ ಬುಟ್ಟಿ ('ರಾಘವ'); ತಾಯಿ ಮಗನ ಸಂವಾದ (ಗವಿಸಿದ್ದ ಎನ್. ಬಳ್ಳಾರಿ); ಜನ ಬೇಕು ಜನಕ್ಕೆ, ಬೆತ್ತಲೆ ಪುರಾಣ (ಜಯಸುದರ್ಶನ); ಮಾತ್ರೆ, ವರಿಸು, ಅ.೨ರ ಪ್ರತಿಜ್ಞೆ, ಕಾರಣ (ಎಚ್. ಡುಂಡಿರಾಜ್); ಅವಳು ಅಂದಿದ್ದು, ದಿಗ್ಬಂಧನ (ದೇಶಕುಲಕರ್ಣಿ); ಹೊಸಹಾಡು, ಬರತಾಳೋ ಮಾರಿ, ಬದುಕು—ಒಂಥರಾ (ಧರಣೇಂದ್ರ ಕುರಕುರಿ); ನಾನು, ಆಬು ಬೆಟ್ಟದಲ್ಲಿ ಓಂಕಾರ ನಿನಾದ (ಪಂಚಾಕ್ಷರಿ ಹಿರೇಮಠ); ಹೆಪ್ಪುಗಟ್ಟಲಿ ನನ್ನ ಬಿಸಿನೆತ್ತರು, ಹಾಡು—ಹಕ್ಕಿಯ ಹಂಸಗೀತೆ, ನನ್ನ ನಿಲುವೊಂದು ಭ್ರಮೆಯೆ? (ರಾಮದಾಸ್); ರಸ್ತೆಗಳು, ವಿಜಯೋತ್ಸವ (ವಿಜಯಾ ಸುಬ್ಬರಾಜ್); ಪ್ರಜಾರಾಜ್ಯದ ಹಾಡು, ನಮಗೂ ಬದುಕಲು ಬಿಡಿ (ವಿಷ್ಣು ನಾಯ್ಕ); ಕಪ್ಪು ಹಕ್ಕಿಯ ಹಾಡು, ನಾವು ಮತ್ತು ನೀನು (ವೇಣುಗೋಪಾಲ ಕಾಸರಗೋಡು); ಭರತಮಾತೆಗೆ, ಭಾರತಾಂಬೆಯ ಸ್ವಗತ ಲಹರಿ (ಶ್ರೀಕೃಷ್ಣ ಆಲನಹಳ್ಳಿ); ಗಾಲಿ ಉಳ್ಳತ್ರೈತಿ, ಇರಬೇಕೇನೋ ಬ್ಯಾನಿ, ಕ್ರಾಂತಿ (ಶ್ರೀರಾಮ ಇಟ್ಟಣ್ಣವರ); ಕಪ್ಪೆಗಳಿಗೆ ನಿಯತ್ತು ಇರುವುದಿಲ್ಲ, ಗಾಂಧೀಜಿಗೆ ಎರಡು ಸಾಲುಗಳು (ಸರಜೂ ಕಾಟಕರ್); ಕಂದನ ಕವಿತೆ, ದಸರಾ ಗೊಂಬೆಗಳು (ಸೌಜನ್ಯ ರಮೇಶ್); ಮನೆಮಾತು, ಕವಿತೆ (ಹೇಮಾ); ಸಂಸ್ಕೃತ, ಕನ್ನಡ ಸೌಂದರ್ಯ, ಚಾಮುಂಡಾಥಪ್ರದೀಪಿಕಾ (ಬಿ. ಎಚ್. ಶ್ರೀಧರ); ಅನ್ನೈ ನೀ ವರವೇಂಡುಂ (ಸ. ವಿಮಲ); ತಸ್ಮಾತ್ ಜಾಗ್ರತ್ತ! (ಕಲಚುವೀಡು ಮುರಳೀಧರ್); ಕಳ್ನಾ ಮಾಕಾ ಹಾಸ್ಕಾಕಿ ರಡಕಾ, ದುರ್ಗಾಸ್ತವನ (ಬಿ. ವಿ. ಬಾಳಿಗಾ); ಸಮಾಧಾನ, ಪದ್ರಾಡ್ ಪುಣ್ಣಮೆಗ್ ದುಂಬು (ಅಮೃತ ಸೋಮೇಶ್ವರ); ಬತಾವೋ ಬತಾವೋ ಷರಾಫತ್ ಕಂಹಾ ಹೈ, ಗಜಲ್, ಉರ್ದು ಕೀ ಫರಿಯಾದ್ ಬ ಜಬಾನೇ ಉರ್ದು (ಮೊಹಮ್ಮದ್ ಅಲಿ ಷರೀಫ್ ಜೋಹರ್); ಗಜಲ್, ಗಜಲ್ (ರಜಾಕ್ ಅಫ್ಸರ್) ಎಂಬ ಇಪ್ಪತ್ತಮೂರು ಜನ ಕವಿಗಳ ನಲವತ್ತೊಂಬತ್ತು ಕವಿತೆಗಳು. ಕನ್ನಡೇತರ (ಸಂಸ್ಕೃತ, ತಮಿಳು, ತೆಲುಗು, ಕೊಂಕಣಿ, ತುಳು ಮತ್ತು ಉರ್ದು) ಭಾಷೆಗಳ ಕವಿತೆಗಳು ಪ್ರತಿಲಿಪೀಕರಣದಲ್ಲಿ ಮತ್ತು ಕನ್ನಡ ಅನುವಾದಗಳೊಂದಿಗೆ.

ಕಾವ್ಯಮೇಳದ ಕವಿಗಳ ವಿವರಗಳು. ಕೆ. ಎಚ್. ಗೋಪಾಲಕೃಷ್ಣೇಗೌಡರ ಸ್ವಾಗತ. ಎಂ. ವಿ. ಸೀತಾರಾಮಯ್ಯನವರ ಅಧ್ಯಕ್ಷ ಭಾಷಣ. ರಕ್ಷಾಪುಟದಲ್ಲಿ ದಸರೆಯ ಮೇಳಕ್ಕೆ ಸಂಬಂಧಿಸಿದ ವರ್ಣಚಿತ್ರ (ಅರ್ಕೇಶ್ವರಾಚಾರ್).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪೬

ಕಾವ್ಯೋತ್ಸವ

ದಸರಾ ಮಹೋತ್ಸವ ಸಮಿತಿ, ಮೈಸೂರು; ೧೯೮೧; ಕಿರೀಟ ಅಷ್ಟದಳ, xvi+೯೬; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕೆ ಮಾತ್ರ.

೧೯೮೧ರ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆದ ಕವಿಸಮ್ಮೇಳನದಲ್ಲಿ ಓದಿದ ಕವಿತೆಗಳ ಸಂಕಲನ.

ದೊರೆಯಬಲ್ಲ ದಾರಿ (ವಿನಾಯಕ); ಉತ್ತರಗಳು (ಅಬ್ದುಲ್ ಮಜೀದ್ ಖಾನ್); ಸವಾಲು, ನೆಲ, ಏಕೆ (ಸಿ.ಪಿ.ಕೆ.); ಬೊಬೀ, ಶಸ್ತ್ರಸಂಧಾನ (ಜಯಂತ್ ಕಾಯ್ಕಿಣಿ); ರಾಜಮಾರ್ಗ ಒಳಮಾರ್ಗ, ನಂತರ ಬಂದೆವು ನಾವು... (ಕೆ. ವಿ. ತಿರುಮಲೇಶ್); ಒಂದು ದಂಗೆಯ ನಂತರದ ಬೀದಿಯಿಂದ (ದೇಶಪಾಂಡೆ ಸುಬ್ಬರಾಯ); ಅಲೆತ, ನಿನಗೆ ಹೊಳದಾದೊ (ದೇವೇಂದ್ರಕುಮಾರ ಹಕಾರಿ); ಬಂದಿದೆ ಜಾಗೃತಿಗೆ ಸಮಯ (ದೊಡ್ಡರಂಗೇಗೌಡ); ಹಂಗು, ಕುಶಲ (ಪು.ತಿ.ನ.); ದುರಗೋಪಾಖ್ಯಾನ, ಈ ದೇಶ ನಿಮ್ಮದು, ಕುಶಲಪ್ರಶ್ನೆ (ಪರಮೇಶ); ಸಾಂಗತ್ಯದಲ್ಲಿ ಹಿತೋಕ್ತಿ, ಬಿಟ್ಟುಬಿಡಿ ನೀವಿದನು, ಒಂದು ವಚನ, ದಿನಾವಸಾನ, ತ್ರಿಪದಿಯಲ್ಲಿ ಹಿತೋಕ್ತಿ (ಎಸ್. ವಿ. ಪರಮೇಶ್ವರ ಭಟ್ಟ); ಮದುವೆಗೆ ಹೋದದ್ದು, ಹಸಿವಿನ ಪದ್ಯ, ಬೆಂಗಳೂರು (ವಿ. ಆರ್. ಪ್ರತಿಭಾ); ಗೊಮ್ಮಟ ಮೊಮ್ಮಗ, ಒಂದು ಪಕ್ಷಿಯ ಪುರಾಣ (ಎಚ್. ಎಸ್. ಭೀಮನಗೌಡರ); ಒಂದು ಪ್ರಶ್ನೆ, ಏಕಾಕಿ (ಮಾಲತಿ ಪಟ್ಟಣಶೆಟ್ಟಿ); ಕೆಲ ವಸ್ತುಗಳಿಗೆ, ಹಸಿವು (ರಮಜಾನ ದರ್ಗಾ); ಸವಾರಿ (ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ); ಆ ಹುಡುಗಿ, ಬೇಸರವಾದಾಗ, ಹಾರಿ ಹೋದವು, ಆಕಾಶ–ಮರ–ಕೊಳ (ಎಚ್. ಎಸ್. ವೆಂಕಟೇಶಮೂರ್ತಿ); ನನ್ನಯ್ಯ (ಕೆ. ಎನ್. ಶಿವಪ್ಪ); ಸಮತಾವಾದ, ಉತ್ತರಾಧಿಕಾರಿ (ಜಿ. ಎಸ್. ಶಿವರುದ್ರಪ್ಪ); ದೃಷ್ಟಿದೋಷ, ನೆನಪು (ಶೈಲಜಾ ಉಡಚಣ); ಸಹವಾಸ, ನಾಣ್ಯ, ಕವಿತೆಗಳು (ಶ್ರೀಕೃಷ್ಣ ಚೆನ್ನಂಗೋಡ್); ಅಜ್ಞಾನಸ್ತ್ರೈವ ಧಾವಂತಿಯಸ್ಮಾತ್ ತ್ರಸ್ಯಂತಿ ದೇವತಾಃ (ಕೆ. ಕೃಷ್ಣಮೂರ್ತಿ); ತೆಲುಗು ಕನ್ನಡಾಲ ಮಧುರ ಬಾಂಧವ್ಯಂ, ವಿಚಿಕಿತ್ಸ (ಆರ್. ವಿ. ಎಸ್. ಸುಂದರಂ); ತುಂ ವೀರ್ ಭಾರತಾಚೊ, ಪರತ್ ಆಯ್ಲ್ಯಾ ದೀಪಾವಳಿ, ಫುಲ್ ಏಕ್ ಫುಲ್ಲೆಂ (ಲೀಯೊ ಡಿಸೋಜ); ಕರ್ನಾಟಕ, ಇನ್ಕ್ ಸಾರಿ, ನೇತಾ, ತೀಪಾಯಿ, ಗಜಲ್ (ಮುದ್ದಣ್ಣ ಮನ್ಜರ್) ಎಂಬ ಇಪ್ಪತ್ತೈದು ಜನ ಕವಿಗಳ ಐವತ್ತಾರು ಕವಿತೆಗಳು. ಕನ್ನಡೇತರ (ಸಂಸ್ಕೃತ, ತೆಲುಗು, ಕೊಂಕಣಿ ಮತ್ತು ಉರ್ದು) ಭಾಷೆಗಳ ಕವಿತೆಗಳು ಪ್ರತಿಲಿಪೀಕರಣದಲ್ಲಿ ಮತ್ತು ಕನ್ನಡ ಅನುವಾದಗಳೊಡನೆ.

ಕಾವ್ಯೋತ್ಸವದ ಕವಿಗಳ ವಿವರಗಳು. ಎಚ್. ಶಿವರಾಮು ಅವರ ಸ್ವಾಗತ. ವಿ. ಕೃ. ಗೋಕಾಕರ ಅಧ್ಯಕ್ಷ ಭಾಷಣ. ರಕ್ಷಾಪುಟದಲ್ಲಿ ಜಗನ್ಮೋಹನ ಅರಮನೆಯ ವರ್ಣಚಿತ್ರ (ಅರ್ಕೇಶ್ವರಾಚಾರ್).

೪೭

ಗಳಗನಾಥ

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೯೭೦; ಡೆಮ್ಮಿ ಅಷ್ಟದಳ, ೮+೮೭; ೨.೫೦, ೪.೫೦

ಗಳಗನಾಥರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಜನವರಿ ೬, ೧೯೬೯ರಂದು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ.

ಭಾಷಣ ೧ (ಕೆ. ಎಸ್. ದೇಶಪಾಂಡೆ); ಭಾಷಣ ೨ (ಕೃಷ್ಣಮೂರ್ತಿ ಕಿತ್ತೂರ); ಭಾಷಣ ೩ (ವಿ. ಎಂ. ಇನಾಂದಾರ್) ಎಂಬ ಮೂರು ಪ್ರಬಂಧಗಳು. ಶ್ರೀರಂಗರ ಅಧ್ಯಕ್ಷ ಭಾಷಣ. ಅನುಬಂಧದಲ್ಲಿ ಗಳಗನಾಥರ ಕೃತಿಪಟ್ಟಿ. ರಕ್ಷಾಪುಟದಲ್ಲಿ ಗಳಗನಾಥರ ಭಾವಚಿತ್ರ.

೪೮

ಗೊರೂರು ಗೌರವಗ್ರಂಥ

ಗೊರೂರು ಗೆಳೆಯರ ಬಳಗ, ಮೈಸೂರು; ೧೯೭೩; ಡೆಮ್ಮಿ ಅಷ್ಟದಳ, x+೫೪೦; ೨೫.೦೦, ೩೫.೦೦

ಗೊರೂರು ರಾಮಸ್ವಾಮಿ ಅಯ್ಯಂಗಾರರ ಬದುಕು ಸಾಧನೆಗಳನ್ನು ನಿರೂಪಿಸುವ ಕೃತಿ. ಗೊರೂರರ ಎಪ್ಪತ್ತನೆಯ ಜನ್ಮದಿನದಂದು (ಜುಲೈ ೪, ೧೯೦೪) ಅವರ ಅಭಿಮಾನಿಗಳು ಅರ್ಪಿಸಿದ ಗ್ರಂಥ. ಜೀವನ–ಸಾಹಿತ್ಯ, ಶತಂ ಜೀವ ಶರದೋ ವರ್ಧಮಾನಃ ಮತ್ತು ಅನುಬಂಧಗಳು ಎಂಬ ಮೂರು ಭಾಗಗಳು.

ಮೊದಲ ಭಾಗದಲ್ಲಿ ಹಿನ್ನೋಟ (ಗೊರೂರು ರಾಮಸ್ವಾಮಿ ಅಯ್ಯಂಗಾರ್); ಹಳ್ಳಿಯ ಚಿತ್ರಗಳು (ಎಂ. ವಿ. ಸೀತಾರಾಮಯ್ಯ); ನಮ್ಮ ಊರಿನ ರಸಿಕರು (ದೇ. ಜವರೇಗೌಡ); ಬೈಲಹಳ್ಳಿ ಸರ್ವೆ (ಪ್ರಭುಶಂಕರ); ಪುನರ್ಜನ್ಮ (ನಂ. ತಪಸ್ವೀಕುಮಾರ್); ಮೆರೆವಣಿಗೆ (ಎನ್. ಬೋರಲಿಂಗಯ್ಯ); ಹೇಮಾವತಿ (ಪ. ವಿ. ಚಂದ್ರಶೇಖರ); ಊರ್ವಶಿ (ಎಚ್. ಎಂ. ಶಂಕರನಾರಾಯಣ ರಾವ್); ಮಲೆನಾಡವರು (ಎಚ್. ಜಿ. ಸೂರ್ಯನಾರಾಯಣ ರಾವ್); ರಾಜನರ್ತಕಿ (ಬಿ. ನಂ. ಚಂದ್ರಯ್ಯ); ಭಗವಾನ್ ಕೌಟಿಲ್ಯ (ಮ. ಸು. ಕೃಷ್ಣಮೂರ್ತಿ); ಕ್ರೌಂಚವಧ (ಎಸ್. ಪಿ. ಪಾಟೀಲ); ಸಣ್ಣಕಥೆಗಳು (ಎಲ್. ಎಸ್. ಶೇಷಗಿರಿ ರಾವ್); ಅನುವಾದಿತ ಕಥೆಗಳು (ಬಿ. ಎಸ್. ರುಕ್ಕಮ್ಮ); ಪ್ರಬಂಧಗಳು (ಎಂ. ಸಿ. ವಸಂತಕುಮಾರ್); ಪ್ರಬಂಧಗಳು (ಎನ್. ಪ್ರಹ್ಲಾದ್ ರಾವ್); ಜೀವನ ಚಿತ್ರಗಳು (ಜಿ. ವರದರಾಜ ರಾವ್); 'ಸಾಹಿತ್ಯ ರಶ್ಮಿ' (ಸಿ.ಪಿ.ಕೆ.); ಸಾಹಿತ್ಯದ ಜೀವಾಳ (ಎಚ್. ಎಂ. ಚನ್ನಯ್ಯ); ಭಾರತ ಭಾಗ್ಯವಿಧಾತ (ಎಚ್. ತಿಪ್ಪೇರುದ್ರಸ್ವಾಮಿ); ಮಹಾತ್ಮಾ ಗಾಂಧಿಯವರ ದಕ್ಷಿಣ ಯಾತ್ರೆ (ಕೆ. ವೆಂಕಟರಾಮಪ್ಪ); ಆತ್ಮಕಥೆ ಅಥವಾ ಸತ್ಯಾನ್ವೇಷಣೆ (ಪ್ರಧಾನ್ ಗುರುದತ್ತ); ಭಾಷಣಗಳು ಮತ್ತು ಹೇಳಿಕೆಗಳು–ಭಾಗ ೧ (ಎಸ್. ಲಕ್ಷ್ಮೀನಾರಾಯಣ); ಸತ್ಯ–ಅಹಿಂಸೆ (ಟಿ. ವಿ. ವೆಂಕಟಾಚಲ ಶಾಸ್ತ್ರೀ); ಸ್ವಾತಂತ್ರ್ಯವೇ ಧರ್ಮ (ಶಂಸ ಐತಾಳ); ಮಹಾದೇವ ದೇಸಾಯಿಯವರ ಕೃತಿಗಳು (ರಾಗೌ); ಮದ್ಯಪಾನದಿಂದ ವಿಮೋಚನೆ (ಹ. ಕ. ರಾಜೇಗೌಡ); ಪೂರ್ಣ ಸ್ವದೇಶಿ ಮತ್ತು ಭಕ್ತಿಯೋಗ (ಎಂ. ರಾಮಕೃಷ್ಣ); ಶರೀರ ಸಾಧನಯೋಗ ಅಥವಾ ಸೌಖ್ಯದ ಗುಟ್ಟು (ಉ. ಕಾ. ಸುಬ್ಬರಾಯಾಚಾರ್); ಮಕ್ಕಳ ಪೋಷಣೆ (ಅನುಪಮಾ ನಿರಂಜನ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಗದ್ಗುರುಗಳ ದಿವ್ಯಬೋಧೆ (ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್); ತಾಯ್ನುಡಿಯಲ್ಲಿ ಶಿಕ್ಷಣ (ಹಾ. ಮಾ. ನಾಯಕ); ಜಾನಪದ ಕೃತಿಗಳು (ಜೀ. ಶಂ. ಪರಮಶಿವಯ್ಯ); ಗೊರೂರರ ಕೃತಿಗಳಲ್ಲಿ ಹಾಸ್ಯ (ಎಚ್. ಕೆ. ರಾಮಚಂದ್ರ ಮೂರ್ತಿ); ಗೊರೂರರ ಕೃತಿಗಳಲ್ಲಿ ಗ್ರಾಮಜೀವನ (ಸುಧಾಕರ); ಗೊರೂರರ ಕೃತಿಗಳಲ್ಲಿ ಜೀವನದರ್ಶನ (ಮಿರ್ಜಿ ಅಣ್ಣಾರಾಯ) ಎಂಬ ಮೂವತ್ತಾರು ಲೇಖನಗಳು.

ಎರಡನೆಯ ಭಾಗದಲ್ಲಿ ಅಮರರು (ಕುವೆಂಪು); ಸರಸಿ—ಸ್ನೇಹಪ್ರಿಯ (ಡಿ.ವಿ.ಜಿ.); ಸಹಜತ್ವ (ಎಸ್. ವಿ. ರಂಗಣ್ಣ); ಜಾನಪದ ತಜ್ಞ (ಶಂಬಾ ಜೋಷಿ); ಮೈತ್ರಿಯ ವಜ್ರೋತ್ಸವ (ಪು.ತಿ.ನ.); ಮಾನವ ವ್ಯಕ್ತಿ (ವಿ. ಸೀತಾರಾಮಯ್ಯ); ಎಪ್ಪತ್ತರ ಹೊಂಗೂಸು (ಶಿವರಾಮ ಕಾರಂತ); ವಿನೋದಿ (ವಿ. ಕೃ. ಗೋಕಾಕ್); ಚೈತನ್ಯದಾಯಕ ನೆನಪು (ಶ್ರೀರಂಗ); ಹೇಮಾವತಿ ಕರುಣಿಸಿದ ಚೇತನ (ದೇಜಗೌ); ಸಜೀವ ಹಳ್ಳಿಯ ಚಿತ್ರಕಾರ (ರಾವ ಬಹದ್ದೂರ); ರಸಿಕ ಯೋಗಿ (ಕೃಷ್ಣಮೂರ್ತಿ ಪುರಾಣಿಕ); ಹಾಸ್ಯ ಯೋಗಿ (ಸಿಂಪಿ ಲಿಂಗಣ್ಣ); ನನ್ನ ಗೊರೂರಿನ ನೆನಪು (ಎಸ್. ಎಲ್. ಭೈರಪ್ಪ); ರಸಿಕ ಶಿರೋಮಣಿ (ಬಿ. ಶಿವಮೂರ್ತಿ ಶಾಸ್ತ್ರಿ); ನಾವು ಭಾಗ್ಯಶಾಲಿಗಳು (ಸಿದ್ದಯ್ಯ ಪುರಾಣಿಕ); ಒಂದು ಸವಿನೆನಪು (ಕೆ. ಎಸ್. ನರಸಿಂಹಸ್ವಾಮಿ); ಸಾಹಿತ್ಯ ಗೊಮ್ಮಟ (ನಿರಂಜನ); ಗೌರವ ಪೂರ್ವಕ ವಂದನೆ (ಚೆನ್ನವೀರ ಕಣವಿ); ಗೊರೂರರ ವಿಶಿಷ್ಟತೆ (ಎಸ್. ವಿ. ಪರಮೇಶ್ವರ ಭಟ್ಟ); ನಮ್ಮ ಪುಣ್ಯ (ಜಿ. ನಾರಾಯಣ); ಬದುಕನ್ನು ಓದಿದವರು (ಹಾ. ಮಾ. ನಾಯಕ); ಪೂಜನೀಯ ವ್ಯಕ್ತಿತ್ವ (ಪ್ರಧಾನ್ ಗುರುದತ್ತ); ಹಿರಿಯ ಸಾಹಿತ್ಯ ನಿರ್ಮಾತ (ರಂ. ಶ್ರೀ. ಮುಗಳಿ); ತುಂಬು ಜೀವನ (ಸಿದ್ದವನಹಳ್ಳಿ ನಿಜಲಿಂಗಪ್ಪ); ಸಂಸ್ಕೃತಿ ಸಂಪನ್ನ (ವೀರೇಂದ್ರ ಪಾಟೀಲ್); ಅಪ್ಪಟ ಗಾಂಧೀವಾದಿ (ಕಡಿದಾಳ್ ಮಂಜಪ್ಪ); ಶುಭಾಶಯಗಳು (ಬಿ. ಡಿ. ಜತ್ತಿ) ಎಂಬ ಇಪ್ಪತ್ತೆಂಟು ಬರಹಗಳು.

ಮೂರನೆಯ ಭಾಗದಲ್ಲಿ ಗೊರೂರರ ಜೀವನದ ಕೆಲವು ಮುಖ್ಯ ವರ್ಷಗಳು, ಗೊರೂರರ ಗ್ರಂಥಗಳು, ಗೊರೂರು ಗೌರವ ಗ್ರಂಥದ ಲೇಖನದಾರರು.

ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಅರ್ಪಣೆ, ಹೊದಿಕೆಯ ಚಿತ್ರ ಕೆ. ಆರ್. ಸುಂದರರಾಜ್ ಅವರದು, ಮುಖಚಿತ್ರ ಕೆ. ಜಿ. ಸೋಮಶೇಖರ್ ಅವರದು.

೪೯

ಗೋವಿಂದ ಪೈ

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬; ೧೯೮೩; ಡೆಮ್ಮೆ ಅಷ್ಟದಳ, viii+೨೦೬; ೧೩.೦೦

ಗೋವಿಂದ ಪೈ ಅವರ ಶತಮಾನೋತ್ಸವದ ವರ್ಷದಲ್ಲಿ ಅವರ ಪುಣ್ಯತಿಥಿಯಂದು (ಸೆಪ್ಟೆಂಬರ್ ೬, ೧೯೮೩) ಪ್ರಕಟವಾದದ್ದು. ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕ ವರ್ಗದವರು ಬರೆದ ಲೇಖನಗಳ ಸಂಕಲನ.

ಕವಿ ಗೋವಿಂದ ಪೈ ಅವರಿಗೆ (ಜಿ. ವಿ. ಆರ್.) ಎಂಬ ಕವನ. ಜೀವನ ಮತ್ತು ವ್ಯಕ್ತಿತ್ವ (ಪ್ರಭುಶಂಕರ); ಭಾವಗೀತೆಗಳು (ಸಿ. ಪಿ. ಕೃಷ್ಣಕುಮಾರ್); ವೈಶಾಖಿ (ಶಂಕರ ಮೊಕಾಶಿ ಪುಣೇಕರ); ಗೊಲ್ಗೊಥಾ (ಎಡ್ವರ್ಡ್ ನೊರೋನ); ನಾಟಕಗಳು (ಎಚ್. ಎಂ. ಚನ್ನಯ್ಯ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾರ್ಯಾರ ನೆನೆಯಲಿ?; ಬೆಳಕು; ಹೊಸ ವರುಷದ ಆಶಯ; ಓದಿನ ಸುಖ; ಮನುಷ್ಯನ ವಿಧಿ; ಸುಳ್ಳುಗಾರ ಮನುಷ್ಯ; ಸೃಷ್ಟಿ; ಅಕ್ಷರದ ಮಹತ್ತ್ವ; ಮನುಷ್ಯನ ಕರುಣೆ; ಮನುಷ್ಯನ ಕ್ರೌರ್ಯ; ನಾಯಿಬಾಳು; ಒಂದು ಪ್ರಸಂಗ; ಮನುಷ್ಯನ ಬೆಲೆ; ಖರ್ಚಾಗದ ಹಣ; ಅಪಸಂಸ್ಕೃತಿ; ಕಾಣದಾಗುತ್ತಿರುವ ಕೆರೆಗಳು; ಒಂದು ಮರದ ಬೆಲೆ; ದೇಶವನ್ನು ಪ್ರೀತಿಸುವುದು; ದೇಶಚಿಂತನ; ರಾಷ್ಟ್ರಧರ್ಮ; ಏಕತೆಯ ಸಂಕೇತ; ನನ್ನ ಕಲ್ಪನೆಯ ಸ್ವಾತಂತ್ರ್ಯ; ಇಂದಿನ ಶಿಕ್ಷಣ ಪದ್ಧತಿ; ಬದುಕಿನಲ್ಲಿ ಕಾಮ; ಮೂರು ವಿಚಾರ; ಹೂವು–ಹೆಣ್ಣು ಎಂಬ ಇಪ್ಪತ್ತಾರು ಕಿರುಪ್ರಬಂಧಗಳು.

ಕೆ. ಎಸ್. ನರಸಿಂಹಸ್ವಾಮಿ ಅವರಿಗೆ ಅರ್ಪಣೆ. ಕೆ. ಮುರಳೀಧರ ರಾವ್ ಅವರ ಹೊರಹೊದಿಕೆ.

ಅಂಕಣ, ಆಕಾಶವಾಣಿ ಚಿಂತನ ವಿಭಾಗದ ಕೃತಿ.

೧೨೮

ಸಂಬಲ

ತ. ವೆಂ. ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು ೫೭೦ ೦೦೨; ೧೯೮೦; ಡೆಮ್ಮೈ ದ್ವಾದಶ, ೧೪೨; ೨೦.೦೦

'ಸಂಕೇತ' ಪಕ್ಷ ಪತ್ರಿಕೆಯಲ್ಲಿ ಪ್ರಕಟವಾದ 'ಪುಸ್ತಕ ಪ್ರಸಂಗ' ಅಂಕಣಬರಹಗಳ ಸಂಕಲನ. ಆಗಸ್ಟ್ ೩೧, ೧೯೭೮ರಿಂದ ನವೆಂಬರ್ ೧೧, ೧೯೮೦ರ ವರೆಗಿನ ಲೇಖನಗಳು ಇಲ್ಲಿ ಸೇರಿವೆ.

ಪುಸ್ತಕ ಸಂಸ್ಕೃತಿಯತ್ತ; ವಿಮರ್ಶೆಯ ನಿಲುವುಗಳು; ಒಂದು ನವೀನ ಪುರಾಣ; ಎಚ್ಚರಿಕೆಯ ಘಂಟೆ; ಬಾಸೆಲ್ ಮಿಶನ್: ಒಂದೂವರೆ ಶತಮಾನ; ಮುತ್ತು ಬಂದಿದೆ ಕೇರಿಗೆ; ಎರಡು ಚಿರಕೃತಿಗಳ ಮರುಮುದ್ರಣ; ಮುಗಿಯದ ದಾರಿ; ಐವತ್ತು ತುಂಬಿದ 'ನಾದಲೀಲೆ'; ಕವಿಯೊಬ್ಬರ 'ಸಾಹಿತ್ಯ ದೃಷ್ಟಿ'; ಮಹಾಕಾವ್ಯಕ್ಕೆ ಬಂದ ಬುದ್ಧ; ಸಂಜೆಗಣ್ಣು–ಸ್ಪಷ್ಟ ನೋಟ; ಒಬ್ಬ ಪ್ರಗತಿಶೀಲ ಕವಿ; ಕನ್ನಡ ಲೇಖಕಿಯರು: ಯಾರು ಯಾರು?;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೆಲುಗಾಳಿಯ ಮಾತುಗಳು; ಒಂದು ಸಾರ್ಥಕ ಬದುಕಿನ ಸ್ಮರಣೆ; ಮನುಷ್ಯ ಜಾತಿ ತಾನೊಂದೆ; ಬಸವಣ್ಣ ಮತ್ತು ಲಿಂಗಾಯಿತ ಧರ್ಮ; ಮೌನದ ಮಹಾಸನ್ನಿಧಿಯಲ್ಲಿ; ಕಾಸರಗೋಡಿನ ಕಥೆ ಮತ್ತು ವ್ಯಥೆ; ಒಬ್ಬ ಕಲಾವಿದನ ಪ್ರಪಂಚ; 'ಶ್ರೀರಂಗ'ರ ರಂಗ ವಿಚಾರಗಳು; ಸೊಗಸಾದ ಪ್ರಬಂಧಗಳು; ವನಸಾಹಿತ್ಯಕ್ಕೆ ಕೊಡುಗೆ; ತೆರೆದ ಕಣ್ಣು ಉದಾರ ಮನೋಭಾವ ಎಂಬ ಇಪ್ಪತ್ತೈದು ಲೇಖನಗಳು.

ಐ. ಕೆ. ಜಾಗೀರದಾರ್ ಅವರಿಗೆ ಅರ್ಪಣೆ. ಹೊದಿಕೆಯಲ್ಲಿನ ಹಾಮಾನಾ ಅವರ ಭಾವಚಿತ್ರ ಮೈಸೂರು ನಾಗರಾಜ ಶರ್ಮ ಅವರದು.

ಅಂಕಣ, ಆಕಾಶವಾಣಿ ಚಿಂತನ ವಿಭಾಗದ ಕೃತಿ.

೧೨೯

ಸಿವುಡು

ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪; ೧೯೯೧; ಕಿರೀಟ ಅಷ್ಟದಳ, ೧೫೨; ೧೮.೦೦

ಜಾನಪದದ ದಾರಿ; ನಮ್ಮ ಜನಪದ ಸಾಹಿತ್ಯ: ಒಂದು ಸ್ಥೂಲ ನೋಟ; ಸಂಗೀತ: ಕೆಲ ವಿಚಾರಗಳು; ಗಮಕದ ಗತಿ; ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿಮಿತಿಗಳು; ವಿದ್ಯುನ್ಮಾನ ಮಾಧ್ಯಮಗಳ ಸ್ವಾಯತ್ತತೆ; ಮೈಸೂರು: ಅಂದು—ಇಂದು; ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ: ನೆನಪುಗಳು; ಐವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ; ಕರ್ನಾಟಕ ಸಾಹಿತ್ಯ ಅಕಾಡೆಮಿ: ಕೆಲವು ವಿಚಾರಗಳು; ತರಬೇತಿ, ಪ್ರತಿಭೆ, ಪ್ರಭಾವ—ಇತ್ಯಾದಿ; ಜ್ಞಾನಪೀಠದ ಬಾಗಿಲಿಗೆ ಕನ್ನಡದ ತೋರಣ; ಠಾಕೂರರು ಮತ್ತು ಕರ್ನಾಟಕ; ಅಧ್ಯಾಪಕ: ಇಪ್ಪತ್ತೊಂದನೆಯ ಶತಮಾನದಲ್ಲಿ; ರಾಜ್ಯ ಬೇಕೆ? ಪಕ್ಷ ಸಾಕೆ? ಎಂಬ ಹದಿನೈದು ಲೇಖನಗಳು.

ಜೆ. ಆರ್. ಲಕ್ಷ್ಮಣರಾಯರಿಗೆ ಅರ್ಪಿತ. ರಕ್ಷಾಪುಟದ ಚಿತ್ರ ಕೆ. ಮುರಳೀಧರ ರಾವ್ ಅವರದು. ಬೆನ್ನುಪುಟದಲ್ಲಿನ ಹಾಮಾನಾ ಅವರ ಭಾವಚಿತ್ರ ಎಸ್. ಎಂ. ಜಂಬುಕೇಶ್ವರ ಅವರದು.

ವಿಚಾರ, ವಿಮರ್ಶೆ ವಿಭಾಗದ ಕೃತಿ.

೧೩೦

ಹಾಮಾನಾ ಹೇಳುತ್ತಾರೆ

ಹಾಮಾನಾ ಸ್ನೇಹಿತರು ಮತ್ತು ಅಭಿಮಾನಿಗಳು, ಬಿ-೨, ವಿದ್ಯಾಗಿರಿ, ಧಾರವಾಡ ೫೮೦ ೦೦೪; ೧೯೯೧; ಡೆಮ್ಮೆ ದ್ವಾದಶ, ೩೦; ಬೆಲೆ ಇಟ್ಟಿಲ್ಲ, ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಹಾಮಾನಾ ಅವರಿಗೆ ಅರವತ್ತು ವರ್ಷಗಳಾದಾಗ ಫೆಬ್ರುವರಿ ೧೦, ೧೯೯೧ರಂದು ಧಾರವಾಡದ ಅರವತ್ತು ಸ್ನೇಹಿತರು ಮತ್ತು ಅಭಿಮಾನಿಗಳು ಅರ್ಪಿಸಿದ ಕಿರುಕೃತಿ. ಹಾಮಾನಾ ಅವರ ಪುಸ್ತಕಗಳಿಂದ ಆಯ್ದ ಚಿಂತನೆಯ ಭಾಗಗಳು. ಹೊರಹೊದಿಕೆಯಲ್ಲಿ ಹಾಮಾನಾ ಅವರ ರೇಖಾಚಿತ್ರ.

ಹಾಮಾನಾ ಕುರಿತು ವಿಭಾಗದ ಕೃತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೆಪ್ಟೆಂಬರ್ 8, 1986

ಪ್ರೀತಿಯ ಸುಚಿತಾ,

ಅನಿರೀಕ್ಷಿತವಾಗಿ ನೀವು ನೆನ್ನೆ ಅಷ್ಟು ದೂರದಿಂದ ಬಂದಿರಿ. 'ಸೀತೆಯ ಭವಿಷ್ಯ' ಪುಸ್ತಕದ ಮೊದಲ ಪ್ರತಿಯನ್ನು ನನಗೆ ಕೊಡುವ ಕಾರಣದಿಂದಲೇ ಎಷ್ಟು ಶ್ರಮ ವಹಿಸಿದಿರಿ ಎಂಬುದನ್ನು ತಿಳಿದು ನನಗೆ ನಿಜಕ್ಕೂ ಮುಜುಗರವೆನಿಸಿತು. ಖಂಡಿತ. ಜೊತೆಗೆ ನೀವು ಗಣಪತಿ ಹಬ್ಬವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುವ ಹಾಗೆ ಮಾಡಿದಿರಿ. ಕ್ಷಮಿಸಿ. ನೀವು ಬಂದಾಗ ನಿಮಗೆ ಬರಿಯ ನೀರನ್ನು ಕೊಟ್ಟು ಕಳುಹಿಸುವಂತಾಯಿತೆಂದು ಸಂಕೋಚವೂ ಆಯಿತು. ನಾನು ಅಸಹಾಯಕನಾಗಿದ್ದೆ. ನಿಮ್ಮೊಡನೆ ಒಂದು ಘಂಟೆಯ ಹೊತ್ತು ಕಳೆದದ್ದು ನನಗೆ ತುಂಬ ಸಮಾಧಾನವಾಯಿತು.

ಊರಿಗೆ ಸುಖವಾಗಿ ಸೇರಿದಿರಿ ಎಂದು ತಿಳಿಯುತ್ತೇನೆ. ನಿಮ್ಮ ಅಣ್ಣನವರಿಗೆ ನನ್ನ ನಮಸ್ಕಾರಗಳು. ಅವರ ವಿಶ್ವಾಸದ ನಡೆವಳಿಕೆ ನನಗೆ ಇಷ್ಟವಾಯಿತು. ನಿಮ್ಮ ಯಜಮಾನರು ರೀಡರ್ ಆದುದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಹೇಳಿ.

ನಾನು ಹದಿನಾರರಂದು ಬೆಳಗ್ಗೆ ಮೈಸೂರಿನಿಂದ ಹೊರಟು ಸುಮಾರು 11 ರವೇಳೆಗೆ ಬೆಂಗಳೂರಿಗೆ ಬರುತ್ತೇನೆ. ಮಧ್ಯಾಹ್ನ 3ಕ್ಕೆ ಒಂದು ಮೀಟಿಂಗ್ ಇದೆ. ನಡುವಿನ ವೇಳೆ ನಾನು ಹೋಟೆಲಿನಲ್ಲೇ ಇರುತ್ತೇನೆ. ಮದುವೆಮನೆ ಗಡಿಬಿಡಿಯಲ್ಲಿ ಬಿಡುವಾದರೆ ಬನ್ನಿ. ಟೆಲಿಫೋನ್ ಮಾಡಿ ಬನ್ನಿ.

ಶುಭ ಚಿಂತನೆಗಳೊಡನೆ,

ವಿಶ್ವಾಸದ
ಹಾಮಾನಾ

ಹಾಮಾನಾ ಅವರ ಕನ್ನಡ ಹಸ್ತಾಕ್ಷರ: ಗುಲ್ಬರ್ಗದಿಂದ ಬರೆದ ಪತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rāmāyaṇas in Kannaḍa

Hā. Mā. Nāyak

Rāmāyaṇa is one of the world epics. As far as our Country is concerned, it is the earliest epic (Ādi Kāvya). There are millions who appreciate it as poetry, and adore it as mythology. For the common man in our Country, Rāmāyaṇa is a historical event; and he has neither questions to ask nor does he entertain any doubts about it. Rāmāyaṇa has become the Source of inspiration for thousands of works not only in Sanskrit and other Indian languages but also in many languages of our neighbouring Countries; it has inspired thousands and thousands of poets. We Scarcely have a language in our Country into which Rāmāyaṇa has not been translated. In the case of those languages which have neither a Script nor any Standard literature, it has assumed the form of folk literature. Rāmāyaṇa was So popular and had become the Source for So many works that a great Kannaḍa poet, Kumāravyāsa, has stated that he preferred to narrate the tale of the Mahābhārata for the reason that Ādiśēṣa breathed hard under the weight of the Rāmāyaṇas.

With the number of works based on the Rāmāyaṇa increasing, its content too gradually underwent a change. Gifted poets went on adding newer elements. Religious interests, outlook of life, time and Space have

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಬಂಧಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಮಾನಾ ಅವರ ಜೀವನದ ಕೆಲವು ಮುಖ್ಯ ವರ್ಷಗಳು

೧೯೩೧ ಸೆಪ್ಟೆಂಬರ್ ೧೨ (ಅಧಿಕೃತ ದಾಖಲೆ ಫೆಬ್ರವರಿ ೫): ಜನನ, ಹೊಸಮನೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ; ತಂದೆ: ಎಚ್. ಶ್ರೀನಿವಾಸ ನಾಯಕ; ತಾಯಿ: ಡಿ. ರುಕ್ಮಿಣಿಯಮ್ಮ.

೧೯೫೦ ಪ್ರಥಮ ಪ್ರಕಟಣೆ: ಬಾಳ್ನೋಟಗಳು.

೧೯೫೫ ಮೇ ೧೦: ಮದುವೆ; ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಆನರ್ಸ್ (ಕನ್ನಡ); ಜುಲೈ ೮: ತುಮಕೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ (ಈಗಿನ ಸರ್ಕಾರಿ ವಿಜ್ಞಾನ ಕಾಲೇಜು) ಅಧ್ಯಾಪಕ ವೃತ್ತಿಯ ಆರಂಭ.

೧೯೫೬ ಜುಲೈ ೧೬: ಮಗಳ ಜನನ.

೧೯೫೮ ಕಲ್ಕತ್ತ ವಿಶ್ವವಿದ್ಯಾನಿಲಯದ ಎಂ.ಎ. (ಭಾಷಾಶಾಸ್ತ್ರ): ಪ್ರಥಮ ದರ್ಜೆ, ಪ್ರಥಮ ಸ್ಥಾನ; ಶಿವಮೊಗ್ಗೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ (ಈಗಿನ ಸಹ್ಯಾದ್ರಿ ಕಾಲೇಜು) ಅಧ್ಯಾಪಕರಾಗಿ ನೇಮಕ.

೧೯೫೯ ಸೆಪ್ಟೆಂಬರ್ ೯: ಭಾಷಾಶಾಸ್ತ್ರದಲ್ಲಿ ರೀಡರ್ ಆಗಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನೇಮಕ; ಸೆಪ್ಟೆಂಬರ್ ೧೮: ಮಗನ ಜನನ.

೧೯೬೧ ಮಾನಸಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ವರ್ಗ.

೧೯೬೨ ಅಮೆರಿಕಾಕ್ಕೆ ಪ್ರಯಾಣ, ಫುಲ್‌ಬ್ರೈಟ್ ಪ್ರಯಾಣ ಧನಸಹಾಯ, ಅಮೆರಿಕಾ ಸರ್ಕಾರದ ಗೃಹಖಾತೆಯ ವಿದ್ಯಾರ್ಥಿವೇತನ.

೧೯೬೪ ಆಗಸ್ಟ್: ಅಮೆರಿಕಾದ ಇಂಡಿಯಾನಾ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. (ಭಾಷಾಶಾಸ್ತ್ರ).

೧೯೬೫ ಫೆಬ್ರವರಿ ೧೯: ಮಾನಸಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ಭಾಷಾಶಾಸ್ತ್ರದ ರೀಡರ್ ಆಗಿ ನೇಮಕ.

೧೯೬೬ ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆಯಲ್ಲಿ ಭಾಷಾಶಾಸ್ತ್ರ ವಿಭಾಗದಲ್ಲಿ ಅರೆಕಾಲಿಕ ಅಧ್ಯಾಪಕ (೧೯೬೮ರವರೆಗೆ).

೧೯೬೭ ಬುಖಾರೆಸ್ಟ್‌ನ ಹತ್ತನೆಯ ಅಂತಾರಾಷ್ಟ್ರೀಯ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದು.

೧೯೬೮ ಜುಲೈ ೧: ಪ್ರಾಧ್ಯಾಪಕ ಪದವಿ (ಕನ್ನಡ). ಡಿಸೆಂಬರ್ ೪: ಈ ಹುದ್ದೆಯೊಂದಿಗೆ ಭಾಷಾಶಾಸ್ತ್ರದ ಪ್ರಾಧ್ಯಾಪಕರಾಗಿಯೂ ಪರಿಗಣಿತ.

೧೯೬೯ ನವೆಂಬರ್ ೧: ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ನೇಮಕ; ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕತ್ವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೯೭೦ ರಾಜ್ಯ ಸಾಹಿತ್ಯ ಅಕಾದೆಮಿ ಸದಸ್ಯತ್ವ (೧೯೭೦–೭೯ರ ಅವಧಿಗೆ); ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯತ್ವ.

೧೯೭೧ ಮೈಸೂರು ವಿಶ್ವವಿದ್ಯಾನಿಲಯದ ಕಲಾಮಂಡಲದ ಡೀನ್ ಆಗಿ ಅವಿರೋಧ ಆಯ್ಕೆ (೧೯೭೧–೭೪ರ ಅವಧಿಗೆ); ಬೆಳಗಾಂ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೭೨ ಕಾಸರಗೋಡು ಕನ್ನಡಿಗರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೭೩ ಕೇಂದ್ರ ಸಾಹಿತ್ಯ ಅಕಾದೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯತ್ವ (೧೯೭೩–೭೭ರ ಅವಧಿಗೆ); ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆ.

೧೯೭೪ ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಸೆಂಟರ್ ಆಫ್ ಸೌತ್ ಏಷ್ಯನ್ ಸ್ಟಡೀಸ್ ಡಿಪಾರ್ಟ್‌ಮೆಂಟ್‌ನಿಂದ ಗೌರವ ಸಂದರ್ಶನ ವಿದ್ವಾಂಸ (ಕನ್ನಡ)ರಾಗಿ ನೇಮಕ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೀನಿಯರ್ ಪ್ರಾಧ್ಯಾಪಕರಾಗಿ ನೇಮಕ; ಕರ್ನಾಟಕ ರಾಜ್ಯ ಪದವಿಪೂರ್ವ ಶಿಕ್ಷಣ ಮಂಡಳಿ ಸದಸ್ಯತ್ವ (೧೯೭೪–೭೬ರ ಅವಧಿಗೆ).

೧೯೭೫ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಅವಿರೋಧ ಆಯ್ಕೆ.

೧೯೭೬ ಕಲ್ಕತ್ತೆಯ ಅಖಿಲ ಭಾರತ ಶರಚ್ಚಂದ್ರ ಶತಮಾನೋತ್ಸವ ಸಮಿತಿ ಸದಸ್ಯತ್ವ; ಕಲ್ಕತ್ತೆಯ ಜಾನಪದ ಅಕಾದೆಮಿಯ ಅಂಗವಾದ ಜಾನಪದ ಅಧ್ಯಯನ ಕಾಲೇಜಿನ ಸಲಹಾ ಸಮಿತಿಯ ಸದಸ್ಯತ್ವ.

೧೯೭೭ ಭಾರತೀಯ ಜ್ಞಾನಪೀಠ ಕನ್ನಡ ಸಲಹಾ ಸಮಿತಿಯ ಸದಸ್ಯತ್ವ ಮತ್ತು ಸಂಚಾಲಕತ್ವ (೧೯೭೭–೭೯ರ ಅವಧಿಗೆ); ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಲಾಮಂಡಲಿಗಳ ಸದಸ್ಯರಾಗಿ ನೇಮಕ (೧೯೭೭–೭೯ರ ಅವಧಿಗೆ).

೧೯೭೮ ಕೇಂದ್ರ ಸಾಹಿತ್ಯ ಅಕಾದೆಮಿ ಜನರಲ್ ಕೌನ್ಸಿಲ್‌ನ ಸದಸ್ಯತ್ವ ಹಾಗೂ ಕಾರ್ಯಕಾರಿ ಸಮಿತಿಗೆ ಆಯ್ಕೆ (೧೯೭೮–೮೨ರ ಅವಧಿಗೆ); ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಭಾಷಾ ಶಾಸ್ತ್ರ ಸಮಿತಿಯ ಸದಸ್ಯತ್ವ (೧೯೭೮–೮೦); ನ್ಯಾಷನಲ್ ಬುಕ್ ಟ್ರಸ್ಟಿನ ಕನ್ನಡ ಸಲಹಾ ಸಮಿತಿಯ ಸದಸ್ಯತ್ವ (೧೯೭೮–೮೬). ೧೯೮೨–೮೬ರ ಅವಧಿಯಲ್ಲಿ ಟ್ರಸ್ಟಿಯಾಗಿಯೂ ಸಹ; ಲಿಯೋ ಟಾಲ್‌ಸ್ಟಾಯ್ ಅವರ ನೂರ ಐವತ್ತನೆಯ ಜನ್ಮ ಸಮಾರಂಭಗಳ ರಾಷ್ಟ್ರೀಯ ಹಾಗೂ ರಾಜ್ಯ ಸಮಿತಿಗಳ ಸದಸ್ಯತ್ವ ; ಕರ್ನಾಟಕ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕ (೧೯೭೮–೭೯ರ ಅವಧಿಗೆ); ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯದ ಅಕೆಡಮಿಕ್ ಕೌನ್ಸಿಲ್‌ನ ಸದಸ್ಯತ್ವ.

೧೯೭೯ ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿಯ ಅಧ್ಯಕ್ಷ (೧೯೭೯–೮೪ರ ಅವಧಿಗೆ).

೧೯೮೦ ಕರ್ನಾಟಕ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯತ್ವ ೧೯೮೦ರಿಂದ ಈವರೆಗೆ, ೧೯೮೯-೯೦ರ ಅವಧಿಯಲ್ಲಿ ಉಪಾಧ್ಯಕ್ಷರಾಗಿಯೂ ಸಹ; ಸೋವಿಯತ್ ರಷ್ಯಾಗೆ ಭೇಟಿ.

೧೯೮೧ ವಿಶ್ವ ಕನ್ನಡ ಸಮ್ಮೇಳನ ಸಮಿತಿಗಳ ಸದಸ್ಯತ್ವ; ಜಾನಪದ ಯಕ್ಷಗಾನ ಅಕಾದೆಮಿ ಸದಸ್ಯತ್ವ.

೧೯೮೨ ಬ್ರಿಟಿಷ್ ಮ್ಯೂಸಿಯಂ ಆಹ್ವಾನದ ಮೇರೆಗೆ ಇಂಗ್ಲೆಂಡಿನ ಪ್ರಥಮ ಭಾರತ ಉತ್ಸವಕ್ಕೆ ಭೇಟಿ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂರನೆಯ ಹಿಂದೀ ವಿಶ್ವ ಸಮ್ಮೇಳನ ರಾಷ್ಟ್ರೀಯ ಸಮಿತಿ ಸದಸ್ಯತ್ವ; ಗೋಕಾಕ್ ವರದಿ ಜಾರಿಗೊಳಿಸುವ ಸಮಿತಿ ಸದಸ್ಯತ್ವ; ಧರ್ಮಸ್ಥಳದ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೮೩ ಕೇಂದ್ರ ಸಾಹಿತ್ಯ ಅಕಾದೆಮಿ ಸದಸ್ಯತ್ವ (೧೯೮೩–೮೭); ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ರಾಷ್ಟ್ರೀಯ ಉಪನ್ಯಾಸಕ (೧೯೮೩-೮೪); ಮದರಾಸು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್‌ನ ಸದಸ್ಯತ್ವ (೧೯೮೩–೮೬).

೧೯೮೪ ನವೆಂಬರ್ ೨: ಗುಲ್ಬರ್ಗ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕ; ಭಾರತೀಯ ಜ್ಞಾನಪೀಠ ಆಯ್ಕೆ ಸಮಿತಿ ಸದಸ್ಯತ್ವ (೧೯೮೪–೮೬); ಡಿಸೆಂಬರ್: ಪದವಿಪೂರ್ವ ಶಿಕ್ಷಣ ಮಂಡಲಿಯ ಅಧ್ಯಕ್ಷರಾಗಿ ನೇಮಕ; ಬಿ. ಡಿ. ಗೋಯೆಂಕಾ ಪ್ರಶಸ್ತಿ ತೀರ್ಪುಗಾರ ಮಂಡಲಿಯ ಸದಸ್ಯತ್ವ (೧೯೮೪–೮೭).

೧೯೮೫ ಬೀದರಿನಲ್ಲಿ ನಡೆದ ಐವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೮೬ ಗುಲ್ಬರ್ಗ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಗೆ ರಾಜೀನಾಮೆ.

೧೯೮೭ ರಾಜೀನಾಮೆ ಸ್ವೀಕೃತ; ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಮರುನೇಮಕ, ಹಾಮಾನಾ ಅವರಿಂದ ನಿರಾಕರಣ; ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಮತ್ತು ಭಾಷಾಶಾಸ್ತ್ರದ ಪ್ರಾಧ್ಯಾಪಕರಾಗಿ ಮರುನೇಮಕ; ದಾವಣಗೆರೆಯಲ್ಲಿ ನಡೆದ ಹದಿನಾಲ್ಕನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ; ಐಬಿಎಚ್ ಎಜುಕೇಶನ್ ಟ್ರಸ್ಟ್ ಪ್ರಶಸ್ತಿ ಆಯ್ಕೆ ಸಮಿತಿ ಹಾಗೂ ಗ್ರಂಥಲೋಕ ವರ್ಷದ ಲೇಖಕ ಪ್ರಶಸ್ತಿ ಆಯ್ಕೆ ಸಮಿತಿಗಳ ಅಧ್ಯಕ್ಷರಾಗಿ ನೇಮಕ; ಎಂ. ಪಿ. ಬಿರ್ಲಾ ಸಂಸ್ಥೆ ವಿಶ್ವಕೋಶದ ಕನ್ನಡ ವಿಭಾಗದ ಸಂಯೋಜಕರಾಗಿ ನೇಮಕ.

೧೯೮೮ ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯತ್ವ.

೧೯೯೦ ಕೊಡಗು ಜಿಲ್ಲಾ ಮೂರನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೯೧ ಮಧ್ಯಪ್ರದೇಶದ ತುಲಸೀ ಸಮ್ಮಾನ್ ಪ್ರಶಸ್ತಿಯ ಆಯ್ಕೆ ಸಮಿತಿ ಸದಸ್ಯತ್ವ; ಫೆಬ್ರವರಿ ೫: ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ.

*

ಪತ್ನಿ: ಶ್ರೀಮತಿ ಯಶೋಧರಾ

ಮಕ್ಕಳು: ಡಾ. ಎಚ್. ಎಂ. ಕವಿತಾ ಎಂ.ಬಿ.,ಬಿ.ಎಸ್. (ಅಧ್ಯಾಪಕರು, ಧರ್ಮಸ್ಥಳ ಮಂಜುನಾಥೇಶ್ವರ ದಂತವೈದ್ಯ ಕಾಲೇಜು, ಧಾರವಾಡ); ಶ್ರೀ ಎಚ್. ಎಂ. ರವೀಂದ್ರ ಬಿ.ಎ. (ಸ್ವಂತ ಉದ್ಯಮ, ಶಿವಮೊಗ್ಗ).

*

ಸಂಪರ್ಕ ವಿಳಾಸ: ಡಾ. ಹಾ. ಮಾ. ನಾಯಕ, 'ಗೋಧೂಳಿ', ಐದನೆಯ ಮುಖ್ಯರಸ್ತೆ, ಜಯಲಕ್ಷ್ಮೀಪುರಂ, ಮೈಸೂರು ೫೭೦ ೦೧೨.

ದೂರವಾಣಿ: ೦೮೨೧-೨೨೦೩೩೫.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಮಾನಾ ಹೊತ್ತಗೆಗಳು (ಅಕಾರಾದಿ)

(ಅಂಕಿಗಳು ನಮೂದುಗಳ ಕ್ರಮಾಂಕವನ್ನು ಸೂಚಿಸುತ್ತವೆ.)

ಅಕ್ಕಮಹಾದೇವಿ ೫
ಅಪ್ಪಯ್ಯ ೩೮
ಆಧುನಿಕ ಕನ್ನಡ ಬರಹಗಾರರು ೧೦೦
ಆಲೂರ ವೆಂಕಟರಾಯರು ೩೯
ಎ. ಆರ್. ಕೃ. ಜೀವನ–ಸಾಧನೆ ೭೩
ಕಛೇರಿ ಕೈಪಿಡಿ ೧೦೧
ಕನ್ನಡ ಗ್ರಂಥಸೂಚಿ–೨, ೧೦೨
ಕನ್ನಡ ಗ್ರಂಥಸೂಚಿ–೩, ೧೦೩
ಕನ್ನಡ ಗ್ರಂಥಸೂಚಿ–೪, ೧೦೪
ಕನ್ನಡ ಗ್ರಂಥಸೂಚಿ–೫, ೧೦೫
ಕನ್ನಡ ಗ್ರಂಥಸೂಚಿ–೬, ೧೦೬
ಕನ್ನಡ ಗ್ರಂಥಸೂಚಿ–೭, ೧೦೭
ಕನ್ನಡ ಗ್ರಂಥಸೂಚಿ ೧೯೬೯–೭೧, ೧೦೮
ಕನ್ನಡ ಗ್ರಂಥಸೂಚಿ ೧೯೭೨-೭೩, ೧೦೯
ಕನ್ನಡ ಗ್ರಂಥಸೂಚಿ ೧೯೭೪–೭೬, ೧೧೦
ಕನ್ನಡ ಗ್ರಂಥಸೂಚಿ ೧೯೭೭–೮೦, ೧೧೧
ಕನ್ನಡ ಜಾನಪದ ಗ್ರಂಥಸೂಚಿ ೧೧೨
ಕನ್ನಡ ಡಿಂಡಿಮ ೪೦
ಕನ್ನಡದ ನಾಯಕ ಹಾ. ಮಾ. ನಾಯಕರು ೧೨೪
ಕನ್ನಡ ಭಾರತಿ–೬, ೮೭
ಕನ್ನಡ ರತ್ನಕೋಶ ೧೧೩
ಕನ್ನಡವನ್ನು ಕಟ್ಟುವ ಕೆಲಸ ೮
ಕರ್ನಾಟಕಕ್ಕೆ ಶುಭವಾಗಲಿ ೪೧
ಕಾವ್ಯಕಾರಂಜಿ ೪೨
ಕಾವ್ಯದೀಪ ೪೩
ಕಾವ್ಯನವರಾತ್ರಿ ೪೪
ಕಾವ್ಯಮೇಳ ೪೫
ಕಾವ್ಯವಿಲಾಸ ೮೮
ಕಾವ್ಯ ಸಂಚಯ ೮೯
ಕಾವ್ಯ ಸಂಚಯ–೨, ೯೦
ಕಾವ್ಯ ಸಂಚಯ–೩, ೯೧
ಕಾವ್ಯೋತ್ಸವ ೪೬
ಗದ್ಯಪದ್ಯ ಸಂಗಮ ೯೨
ಗದ್ಯವಿಹಾರ–೧, ೯೩
ಗದ್ಯವಿಹಾರ–೨, ೯೪
ಗದ್ಯವಿಹಾರ–೩, ೯೫
ಗದ್ಯವಿಹಾರ–೪, ೯೬
ಗಳಗನಾಥ ೪೭
ಗುರುದೇವ ರವೀಂದ್ರರು ೬
ಗೊರೂರು ಗೌರವಗ್ರಂಥ ೪೮
ಗೋಕಾಕ ಗ್ರಂಥಾವಳಿ ೧೧೪
ಗೋವಿಂದ ಪೈ ೪೯
ಗ್ರಂಥಲೋಕದ ಸುತ್ತಮುತ್ತ ೨೨
ಚಿನ್ನದ ಗರಿ ೫೦
ಜಾನಪದ ವಿಜ್ಞಾನ ಸ್ವರೂಪಂ ೧೨೧
ಜಾನಪದ ಸ್ವರೂಪ ೯
ಟಾಲ್‌ಸ್ಟಾಯ್ ೫೧
ಡಿ.ವಿ.ಜಿ. ಕೃತಿಶ್ರೇಣಿ–೧, ೫೨
ಡಿ.ವಿ.ಜಿ. ಕೃತಿಶ್ರೇಣಿ–೨, ೫೩
ದಾರ್ಶನಿಕ ಕಾವ್ಯಮೀಮಾಂಸೆ ೫೪
ದೀಪ ಉಜಾಲೆ ಅಮುಚ್ಯಾ ಘರೀ ೧೨೨
ದೇಜಗೌ: ವ್ಯಕ್ತಿ ಮತ್ತು ಸಾಹಿತ್ಯ ೫೫
ನಮ್ಮ ಮನೆಯ ದೀಪ ೧
ನಿಸರ್ಗದುಡಿಯಲ್ಲಿ ೫೬
ಪ್ರಗತಿಪಥ ೫೭
ಪ್ರಣಯ ಪದಾವಳಿ ೩೫
ಪ್ರಬುದ್ಧ ಕರ್ಣಾಟಕ ಚಿನ್ನದ ಸಂಚಿಕೆ (ವಿಜ್ಞಾನ ವಿಭಾಗ ೧) ೭೪
ಪ್ರಬುದ್ಧ ಕರ್ಣಾಟಕ ಚಿನ್ನದ ಸಂಚಿಕೆ (ವಿಜ್ಞಾನ ವಿಭಾಗ ೨) ೭೫
ಪ್ರಬುದ್ಧ ಕರ್ಣಾಟಕ ಚಿನ್ನದ ಸಂಚಿಕೆ (ಸಾಹಿತ್ಯ ಸಂಪುಟ) ೭೬
ಬಸವ ಪರುಷ ೫೮
ಬಾಗಿನ ೭೭
ಬಾಳ್ನೋಟಗಳು ೨
ಬಿಡುಗಡೆ ಬೆಳ್ಳಿ ೫೯
ಬೆಳ್ಳಿ ಕರ್ನಾಟಕ ೧೦
ಭಾರತೀಯ ಕವಿತಾಯೇಂ ೧೯೮೩, ೭೮
ಭಾರತೀಯ ಕವಿತಾಯೇಂ ೧೯೮೪, ೭೯
ಭಾರತೀಯ ಕವಿತಾಯೇಂ ೧೯೮೫, ೮೦
ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ ೬೦
ಭಾಸ್ಕರ ಕವಿಯ ಜೀವಂಧರ ಚರಿತೆಯ ಸಂಗ್ರಹ ೮೧
ಮಹಮ್ಮದ್ ಪೈಗಂಬರ್ ೭
ಮಾಸ್ತಿಯವರ ಪುಸ್ತಕಗಳು ೧೧೫
ಮುದ್ದಣ ೬೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಮ್ಮಡಿ ಕೃಷ್ಣರಾಜ ಒಡೆಯರು ೬೨
ರತ್ನಸಂಪುಟ ೮೨
ರವೀಂದ್ರನಾಥ ಠಾಕೂರ್ ೪
ರೂಪಾರಾಧಕ ೬೩
ವಿಜ್ಞಾನ ಸಾಹಿತ್ಯ ನಿರ್ಮಾಣ ೬೪
ವಿನಾಯಕ ವಾಙ್ಮಯ ೮೩
ವಿಮರ್ಶೆಯ ಮಾರ್ಗ—೧, ೯೭
ಶರತ್‌ಚಂದ್ರ ೬೫
ಶಾಂತಿಸ್ವರೂಪ್ ಭಟ್ನಾಗರ್ ೩೬
ಶಾಸ್ತ್ರ ಸಾಹಿತ್ಯ ನಿರ್ಮಾಣ ೬೬
ಶ್ರೀನಿವಾಸ ಸಾಹಿತ್ಯ ೬೭
ಶ್ರೀವಾಣಿ ೬೮
ಶ್ರೀ ಸಾಹಿತ್ಯ ೬೯
ಸಂಕೀರ್ಣ ೧೧
ಸಂಗತಿ ೨೩
ಸಂಗ್ರಹ ೧೨
ಸಂಚಯ ೧೩
ಸಂದರ್ಭ ೧೪
ಸಂಪದ ೨೪
ಸಂಪರ್ಕ ೨೫
ಸಂಪುಟ ೨೬
ಸಂಪ್ರತಿ ೨೭
ಸಂವಹನ ೨೮
ಸಂವಾದ ೧೫
ಸಪ್ತಕ ೧೬
ಸಮೀಕ್ಷೆ ೧೭
ಸಮೂಹ ೨೯
ಸರ್ವಜ್ಞ ೭೦
ಸಲ್ಲಾಪ ೩೦
ಸಾಂಪ್ರತ ೩೧
ಸಾಹಿತ್ಯ ಸಂಪುಟ ೯೮
ಸಾಹಿತ್ಯ ಸಲ್ಲಾಪ ೩೨
ಸಾಹಿತ್ಯ ಸುಗ್ಗಿ ೯೯
ಸಿಂಗಾರ ೧೮
ಸಿದ್ಧಲಿಂಗ ಶಿವಯೋಗಿ ೭೧
ಸುನೇರಿ ೩೭
ಸುವರ್ಣ ಸಂಪುಟ ೮೪
ಸೂಲಂಗಿ ೩೩
ಸೃಜನ ೧೯
ಸ್ತವನ ೨೦
ಸ್ಪಂದನ ೩೪
ಸ್ಮರಣ ೨೧
ಸ್ವಸ್ತಿ ೮೫
ಹಕ್ಕಿಯ ಪಯಣ ೭೨
ಹಾವು ಮತ್ತು ಹೆಣ್ಣು ೩
ಹೊಸ ಸಂವೇದನೆಯ ನಾಟಕಗಳು ೮೬
Epic in Indian literature ೧೧೬
Gandhiji in Indian literature ೧೧೭
Impact of Marxism on Indian life and literature ೧೧೮
Kannada: Literary and Colloquial—A study of two styles ೧೧೯
Kannada literature: A decade ೧೨೩
South Indian Studies ೧೨೦

ಹಾಮಾನಾ ಹೊತ್ತಗೆಗಳು (ವಿಷಯ ವಿಭಾಗೀಯ)

(ಪ್ರತಿ ವಿಭಾಗದ ನಮೂದುಗಳ ಕ್ರಮಾಂಕವನ್ನು ಸೂಚಿಸುವುದರೊಂದಿಗೆ ಆಯಾ ವಿಭಾಗದ ಒಟ್ಟು ನಮೂದುಗಳ ಸಂಖ್ಯೆಯನ್ನೂ ಕೊಟ್ಟಿದೆ.)

ಕಥೆ, ಚಿತ್ರ, ಪ್ರಬಂಧ ೧—೩; ಮೂರು ನಮೂದುಗಳು.
ಜೀವನ ಚರಿತ್ರೆ ೪; ಏಕೈಕ ನಮೂದು.
ಮಕ್ಕಳ ಸಾಹಿತ್ಯ ೫—೭; ಮೂರು ನಮೂದುಗಳು.
ವಿಚಾರ, ವಿಮರ್ಶೆ ೮—೨೧; ಹದಿನಾಲ್ಕು ನಮೂದುಗಳು.
ಅಂಕಣ, ಆಕಾಶವಾಣಿ ಚಿಂತನ ೨೨—೩೪; ಹದಿಮೂರು ನಮೂದುಗಳು.
ಅನುವಾದ ೩೫—೩೭; ಮೂರು ನಮೂದುಗಳು.
ಸಂಪಾದಿತ ೩೮—೮೬; ನಲವತ್ತೊಂಬತ್ತು ನಮೂದುಗಳು.
ಪಠ್ಯಪುಸ್ತಕಗಳು ೮೭—೯೯; ಹದಿಮೂರು ನಮೂದುಗಳು.
ಸೂಚಿ, ಕೋಶ, ಪರಾಮರ್ಶನ ೧೦೦—೧೧೫; ಹದಿನಾರು ನಮೂದುಗಳು.
ಇಂಗ್ಲಿಷಿನಲ್ಲಿ ೧೧೬—೧೨೦; ಐದು ನಮೂದುಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇರೆ ಭಾಷೆಗೆ ೧೨೧–೧೨೩; ಮೂರು ನಮೂದುಗಳು.
ಹಾಮಾನಾ ಕುರಿತು ೧೨೪; ಏಕೈಕ ನಮೂದು.

ಹಾಮಾನಾ ಹೊತ್ತಗೆಗಳು (ವರ್ಷವಾರು)

(ಆಯಾ ವರ್ಷದ ಮುಂದೆ ಕೊಟ್ಟಿರುವ ಅಂಕಿಗಳು ನಮೂದುಗಳ ಕ್ರಮಾಂಕಗಳನ್ನು ಸೂಚಿಸುತ್ತವೆ. ಹಾಮಾನಾ ಅವರು ನಲವತ್ತರ ದಶಕದಲ್ಲಿ ಒಂದೇ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದು ಅವರ ಮೊತ್ತ ಮೊದಲ ಪ್ರಕಟಣೆ (೨). ಐವತ್ತು ಮತ್ತು ಅರುವತ್ತರ ದಶಕಗಳಲ್ಲಿ ಕ್ರಮವಾಗಿ ಏಳು ಮತ್ತು ಇಪ್ಪತ್ತು ಪುಸ್ತಕಗಳು ಅವರಿಂದ ಹೊರಬಂದಿವೆ. ಎಪ್ಪತ್ತು ಮತ್ತು ಎಂಬತ್ತರ ಎರಡೂ ದಶಕಗಳಲ್ಲಿ ಅವರಿಂದ ಒಂದೇ ಸಂಖ್ಯೆಯ–ಅಂದರೆ ನಲವತ್ತೆಂಟು, ನಲವತ್ತೆಂಟು–ಕೃತಿಗಳು ಬೆಳಕು ಕಂಡಿವೆ. ಎಪ್ಪತ್ತರ ಹಾಗೂ ಎಂಬತ್ತರ ದಶಕಗಳ ಎಲ್ಲ ಇಪ್ಪತ್ತು ವರ್ಷಗಳಲ್ಲೂ ಅವರು ತಮ್ಮ ಗ್ರಂಥಗಳನ್ನು ಹೊರತಂದ ದಾಖಲೆಯನ್ನು ಹೊಂದಿದ್ದಾರೆ. ೧೯೮೩ ಅವರ ಅತಿ ಹೆಚ್ಚು ರಚನೆಗಳು ಹೊರಬಂದ ವರ್ಷ. ಆ ವರ್ಷದಲ್ಲಿ ಅವರ ಹದಿನಾಲ್ಕು ಕೃತಿಗಳು ಕನ್ನಡಿಗರ ಕೈ ಸೇರಿವೆ.)

೧೯೫೦	೨
೧೯೫೧	೫೬
೧೯೫೨	೭
೧೯೫೩	೬೩
೧೯೫೪	೩೬, ೭೭
೧೯೫೬	೧
೧೯೬೦	೪
೧೯೬೧	೬
೧೯೬೨	೮೧
೧೯೬೬	೩, ೧೧
೧೯೬೭	೧೭, ೧೧೯, ೧೨೩
೧೯೬೮	೪೦, ೫೫
೧೯೬೯	೧೩, ೭೪, ೭೫, ೭೬, ೮೩, ೯೩, ೯೯
೧೯೭೦	೩೨, ೪೭, ೬೧, ೬೨
೧೯೭೧	೯, ೬೦, ೬೪, ೭೩, ೮೯, ೧೧೭
೧೯೭೨	೧೫, ೩೦, ೮೮, ೯೨, ೯೪, ೧೧೮
೧೯೭೩	೪೮, ೯೮, ೧೦೧
೧೯೭೪	೫೦, ೬೭, ೭೧, ೧೦೩, ೧೦೮, ೧೧೨
೧೯೭೫	೫, ೫೮, ೫೯, ೬೬, ೧೦೨
೧೯೭೬	೧೨, ೪೧, ೫೭, ೭೦, ೮೬, ೮೭
೧೯೭೭	೯೬, ೧೦೯, ೧೧೩
೧೯೭೮	೧೪, ೩೩, ೬೫, ೯೦
೧೯೭೯	೧೦೪, ೧೦೫, ೧೦೬
೧೯೮೦	೨೦, ೨೬, ೪೪, ೮೪, ೧೧೪, ೧೨೧
೧೯೮೧	೧೦, ೧೮, ೧೯, ೨೧, ೨೪, ೪೬, ೧೧೦
೧೯೮೨	೨೫, ೨೯, ೪೨, ೫೧
೧೯೮೩	೨೮, ೩೧, ೩೪, ೩೯, ೪೩, ೪೯, ೫೪, ೬೯, ೭೨, ೮೫, ೯೧, ೯೫,೧೦೦, ೧೧೫
೧೯೮೪	೨೨, ೩೫, ೩೮, ೪೫, ೬೮, ೯೭, ೧೦೭
೧೯೮೫	೭೮, ೮೨, ೧೧೧, ೧೧೬
೧೯೮೬	೩೭, ೭೯
೧೯೮೭	೮, ೨೩, ೫೨, ೧೨೪
೧೯೮೮	೨೭, ೮೦
೧೯೮೯	೧೬, ೧೨೨
೧೯೯೦	೫೩, ೧೨೦

ಸಹಸಂಪಾದಕರು

(ಸಂಪಾದಿತ; ಪತ್ರ ಹಾಗೂ ಸೂಚಿ, ಕೋಶ, ಪರಾಮರ್ಶನ–ಈ ಮೂರು ವಿಭಾಗಗಳಲ್ಲಿ ಹಾಮಾನಾ ಅವರಿಗೆ ಸಹಸಂಪಾದಕರಿದ್ದಾರೆ. ಸಂಪಾದಿತ ವಿಭಾಗದ ನಲವತ್ತೊಂಬತ್ತು ಕೃತಿಗಳಲ್ಲಿ ಹಾಮಾನಾ ಇತರರೊಡನೆ ಸಂಪಾದಿಸಿರುವುದು ಹದಿನಾಲ್ಕನ್ನು ಮಾತ್ರ. ಪತ್ರ ವಿಭಾಗದ ಎಲ್ಲ ಹದಿಮೂರು ಕೃತಿಗಳಿಗೂ ಅವರಿಗೆ ಸಹಸಂಪಾದಕರಿದ್ದಾರೆ. ಸೂಚಿ, ಕೋಶ, ಪರಾಮರ್ಶನ ವಿಭಾಗದ ಹದಿನಾರು ಕೃತಿಗಳಲ್ಲಿ ಹದಿಮೂರು ಕೃತಿಗಳನ್ನು ಅವರು ಬೇರೆಯವರೊಡನೆ ಸಂಪಾದಿಸಿದ್ದಾರೆ. ಇಂಗ್ಲಿಷಿನಲ್ಲಿರುವ ನಾಲ್ಕು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪಾದಿತ ಕೃತಿಗಳಲ್ಲಿ ಒಂದು ಕೃತಿಗೆ ಸಹಸಂಪಾದಕರಿದ್ದಾರೆ. ಸಹಸಂಪಾದಕತ್ವದ ಹಾಮಾನಾ ಕೃತಿಗಳ ಒಟ್ಟು ಸಂಖ್ಯೆ ನಲವತ್ತೊಂದು. ಅಂಕಿಗಳು ಈ ಸಹಸಂಪಾದಕರು ಹಾಮಾನಾ ಅವರೊಂದಿಗೆ ಕಾರ್ಯ ನಿರ್ವಹಣೆ ಮಾಡಿರುವ ನಮೂದುಗಳನ್ನು ಸೂಚಿಸುತ್ತವೆ.)

ಅಕಬರ ಅಲಿ ಎಂ. ೯೭
ಅಣ್ಣಾರಾಯ ಮಿರ್ಜಿ ೮೭
ಅನಂತರಾಮಯ್ಯ ಆರ್. ಎಲ್. ೧೦೦, ೧೦೨, ೧೦೩, ೧೦೪, ೧೧೫, ೧೦೬, ೧೦೭, ೧೦೮, ೧೦೯, ೧೧೦, ೧೧೧
ಅನಂತರಾಮು ಆರ್. ೮೭, ೮೮, ೯೨
ಅಪ್ಪಾರಾವ್ ಪಿ. ಎಸ್. ಆರ್. ೭೮
ಎರೇಸೀಮೆ ಸಿ. ಎಂ. ೮೮, ೯೨
ಕೃಷ್ಣಕುಮಾರ್ ಸಿ. ಪಿ. ೮೫, ೯೪, ೯೬, ೧೧೩
ಖೂಬ್‌ಚಂದಾನಿ ಎಲ್. ಎಂ. ೭೮, ೭೯, ೮೦
ಗೋಪಾಲ್ ಬಿ. ಆರ್. ೧೨೦
ಗೋಪೀಚಂದ್ ನಾರಂಗ್ ೭೮
ಚಂದ್ರಶೇಖರ ರಾವ್ ಪ. ವಿ. ೯೦, ೯೫
ಚನ್ನವೀರ ಕಣವಿ ೮೨, ೮೪
ಜಗನ್ನಾಥ್ ಪ್ರಸಾದ್ ದಾಸ್ ೭೮, ೭೯, ೮೦
ಜಯತೀರ್ಥ ರಾಜಪುರೋಹಿತ ೧೧೧
ಜವರೇಗೌಡ ದೇ. ೮೪, ೯೩, ೯೯, ೧೧೧, ೧೦೨, ೧೦೩, ೧೦೮, ೧೦೯
ಜಾರ್ಜ್ ಕೆ. ಎಂ. ೭೮, ೭೯, ೮೦
ತಿಪ್ಪೇರುದ್ರಸ್ವಾಮಿ ಎಚ್. ೭೩, ೭೪, ೭೫, ೭೬, ೯೩, ೯೪, ೯೬
ದಿಗೀಶ್ ಮೆಹತಾ ೭೮, ೭೯
ದೇಶಪಾಂಡೆ ಕೆ. ಎಸ್. ೧೦೦, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧.
ನಂಜುಂಡಯ್ಯ ಎಸ್ ೯೧
ನಂಜೇಗೌಡ ಎಚ್. ೮೭, ೯೮
ನರಸಿಂಹಾಚಾರ್ ಪು. ತಿ. ೮೨, ೮೪
ನಾಗೇಂದ್ರಪ್ಪ ಕೆ. ೯೭
ನಾರಾಯಣ ಶೆಟ್ಟಿ ಎಸ್. ೯೧
ನಿಸಾರ್ ಅಹಮದ್ ಕೆ. ಎಸ್. ೮೨
ನೀಲಮಣಿ ಫೂಕನ್ ೭೮, ೭೯, ೮೦
ಪಂಚಲಿಂಗೇಗೌಡ ಕೆ. ಸಿ. ೮೧
ಪಂಚಾಕ್ಷರಿ ಎಸ್. ೯೫, ೯೬
ಪರಮಶಿವಯ್ಯ ಜೀ. ಶಂ. ೧೧೩
ಪರಮೇಶ್ವರ ಭಟ್ಟ ಎಸ್. ವಿ. ೯೩, ೯೪
ಪಾಂಡುರಂಗ ರಾವ್ ಆಈ ೭೯, ೮೦
ಪಾಟೀಲ ಪಿ. ಕೆ. ೧೦೦, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧.
ಪಿಂಕೇಶ್ ಸರ್ಕಾರ್ ೭೯
ಪ್ರಣವೇಂದು ದಾಸಗುಪ್ತ ೭೮
ಪ್ರಧಾನ್ ಗುರುದತ್ತ ೧೧೧, ೧೧೩
ಪ್ರಭುಶಂಕರ ೮೨, ೮೪, ೯೩, ೯೪, ೧೦೦, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧
ಫೂಲ್‌ಚಂದ್ 'ಮಾನವ್' ೮೦
ಬಸವರಾಜು ಎಲ್. ೮೯
ಬಾಲಸ್ವರೂಪ್ ರಾಹಿ ೭೮, ೭೯, ೮೦
ಭರತ್ ಎ. ೧೧೧
ಮಂಡನ ಮಿಶ್ರ ೭೮
ಮಧುರ್ ಶಾಸ್ತ್ರೀ ೭೯, ೮೦
ರಂಗಸ್ವಾಮಿ ಡಿ. ಟಿ. ೯೫
ರಘುವೀರ್ ಚೌಧುರಿ ೮೦
ರಮೇಶ್ ಕುಂತಲ್ ಮೇಘ್ ೭೯
ರಮೇಶ್ ತೆಂಡುಲ್ಕರ್ ೮೦
ರಾಜಗೋಪಾಲಾಚಾರ್ಯ ಎಂ. ೯೦
ರಾಮಣ್ಣ ಎಸ್. ಕೆ. ೮೯
ರಾಮದರ್ಶ ಮಿಶ್ರ ೭೮, ೭೯, ೮೦
ರಾಮಲಿಂಗಂ ಎಳಿಲ ಮುದಲವನ್ ಎಂ. ೭೮, ೭೯, ೮೦
ರುಕ್ಕಮ್ಮ ಬಿ. ಎಸ್. ೯೭
ರೇಣುಕ ಪ್ರಸನ್ನ ಮ. ಗಂ. ೯೧
ಲಕ್ಷ್ಮಣ ರಾವ್ ಜಿ. ಆರ್. ೭೪, ೭೫, ೭೬
ವರದರಾಜ ರಾವ್ ಜಿ. ೮೯, ೯೬
ವೀರಪ್ಪ ಕೆ. ಟಿ. ೮೨, ೧೦೭, ೧೧೧
ವೀರಭದ್ರಪ್ಪ ಬಿ. ವಿ. ೯೧
ವೆಂಕಟಾಚಲ ಶಾಸ್ತ್ರೀ ಟಿ. ವಿ. ೮೫, ೮೯, ೯೦, ೧೧೩
ಶಂಕರನಾರಾಯಣ ರಾವ್ ಎಚ್. ಎಂ. ೧೧೩
ಶಶಿಶೇಖರ ತೋಷಖಾನಿ ೭೮, ೭೯, ೮೦
ಶಾಂತಾ ಜನಾರ್ದನ ಶೇಲ್ಕೆ ೭೮, ೭೯
ಶಾಮರಾಯ ತ. ಸು. ೯೮
ಶಾಸ್ತ್ರಿ ಬಿ. ಎನ್. ೯೫
ಶಿವರುದ್ರಪ್ಪ ಜಿ. ಎಸ್. ೮೨, ೮೮, ೯೨
ಸಿಂಧುವಳ್ಳಿ ಅನಂತಮೂರ್ತಿ ೮೩, ೮೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿದ್ದಲಿಂಗಯ್ಯ ಜಿ. ಎಸ್. ೯೦
ಸಿದ್ದಲಿಂಗಯ್ಯ ಎಚ್. ೯೭
ಸಿದ್ದೇಶ್ ೮೦
ಸುಬ್ಬಣ್ಣ ಕೆ. ವಿ. ೭೭
ಹಕೀಮ್ ಮನ್ಸೂರ್ ೭೯, ೮೦
ಹನುಮಂತರಾಯ ೯೮
ಹರಭಜನ್ ಸಿಂಹ ೭೮
ಹಿರೇಮಠ ಆರ್. ಸಿ. ೮೮, ೯೨, ೯೯

ಅರ್ಪಣೆ ಪಡೆದವರು

(ಅಂಕಿಗಳು ಆಯಾ ವ್ಯಕ್ತಿಗೆ ಅರ್ಪಿತವಾಗಿರುವ ನಮೂದುಗಳ ಕ್ರಮಾಂಕಗಳನ್ನು ಸೂಚಿಸುತ್ತವೆ. ಕಥೆ, ಚಿತ್ರ, ಪ್ರಬಂಧ; ಜೀವನ ಚರಿತ್ರೆ; ವಿಚಾರ, ವಿಮರ್ಶೆ; ಅಂಕಣ, ಆಕಾಶವಾಣಿ ಚಿಂತನ—ಈ ನಾಲ್ಕು ವಿಭಾಗಗಳ ಎಲ್ಲ ಪುಸ್ತಕಗಳೂ ಅರ್ಪಣೆಯ ಅವಕಾಶ ಪಡೆದಿವೆ. ಮಕ್ಕಳ ಸಾಹಿತ್ಯ; ಪಠ್ಯಪುಸ್ತಕಗಳು—ಈ ಎರಡು ವಿಭಾಗಗಳ ಯಾವ ಒಂದು ಪುಸ್ತಕವೂ ಅರ್ಪಿತವಾಗಿಲ್ಲ. ಅನುವಾದ ವಿಭಾಗದ ಎರಡು (೩೫, ೩೭) ಕೃತಿಗಳಲ್ಲಿ ಅರ್ಪಣೆ ಯಾರಿಗೆಂಬುದು ಸ್ಪಷ್ಟಸೂಚಿತವಾಗಿಲ್ಲ. ಸಂಪಾದಿತ; ಸೂಚಿ, ಕೋಶ, ಪರಾಮರ್ಶನ; ಇಂಗ್ಲಿಷ್ ಕೃತಿಗಳು; ಬೇರೆ ಭಾಷೆಗೆ—ಈ ನಾಲ್ಕು ವಿಭಾಗಗಳಲ್ಲಿ ಕೆಲವು ಗ್ರಂಥಗಳು ಮಾತ್ರ ಅರ್ಪಿತವಾಗಿವೆ. ಹಾಮಾನಾ ಅವರನ್ನು ಕುರಿತ ಏಕೈಕ ಕೃತಿಯ ಎರಡನೆಯ ಮುದ್ರಣ ಮಾತ್ರ ಅರ್ಪಿತವಾಗಿದೆ.

ತಮ್ಮ ಗುರುಗಳು, ಹಿರಿಯ ಸಾಹಿತಿಗಳು, ಸ್ನೇಹಿತರು, ಸಹೋದ್ಯೋಗಿಗಳು, ರಾಜಕಾರಣಿಗಳು ಮೊದಲಾದವರಿಗೆ ಹಾಮಾನಾ ತಮ್ಮ ಪುಸ್ತಕಗಳನ್ನು ಅರ್ಪಿಸಿದ್ದಾರೆ. ಸಾಹಿತಿಗಳದು ಸಿಂಹಪಾಲು. ತಂದೆ, ತಾಯಿ, ಪತ್ನಿ, ಮಕ್ಕಳು, ಅತ್ತೆ, ಮಾವ ಹಾಗೂ ಇಬ್ಬರು ಅಜ್ಜಂದಿರು—ಇವರುಗಳು ಹಾಮಾನಾ ಅವರಿಂದ ಕೃತಿಗಳನ್ನು ಅರ್ಪಣೆಯಾಗಿ ಪಡೆದ ಕೌಟುಂಬಿಕ ವ್ಯಕ್ತಿಗಳು. ಇವರುಗಳಿಗೆ ಅರ್ಪಿಸಿರುವ ಕೃತಿಗಳಲ್ಲಿ ಒಂದರಲ್ಲಿ (೧೧೯) ಸಂಬಂಧ ಸೂಚನೆ ಇದೆ, ಹೆಸರು ಹೇಳಿಲ್ಲ. ಇನ್ನೊಂದರಲ್ಲಿ (೧) ಹೆಸರು ತಿಳಿಸಿದೆ, ಸಂಬಂಧವನ್ನು ತಿಳಿಸಿಲ್ಲ. ತಮ್ಮ ತಂದೆಗೆ ಹಾಮಾನಾ ಅವರು ಅರ್ಪಿಸಿರುವ ಒಂದು ಕೃತಿ ಶ್ರದ್ಧಾಂಜಲಿ ರೂಪದ್ದು (೩೮). ತಮ್ಮ ಕೆಲವು ಅಂಕಣಗ್ರಂಥಗಳನ್ನು ಹಾಮಾನಾ ಸಂಬಂಧಪಟ್ಟ ಪತ್ರಿಕೆಯ ಸಂಪಾದಕರಿಗೆ ಅರ್ಪಿಸಿದ್ದಾರೆ (ಉದಾ: ೨೭, ೩೪). ಕೆಲವು ಕೃತಿಗಳು ಇಬ್ಬಿಬ್ಬರಿಗೆ ಒಟ್ಟಿಗೇ ಅರ್ಪಿತವಾಗಿವೆ (ಉದಾ: ೧೯, ೧೧೯). ಕುವೆಂಪು, ಎ. ಆರ್. ಕೃಷ್ಣಶಾಸ್ತ್ರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವಿ. ಕೃ. ಗೋಕಾಕ ಹಾಗೂ ದೇಜಗೌ ಅವರುಗಳಿಗೆ ಎರಡೆರಡು ಪುಸ್ತಕಗಳು ಅರ್ಪಿತವಾಗಿವೆ ಮತ್ತು ಈ ಜೋಡಿ ಪುಸ್ತಕಗಳಲ್ಲಿ ಒಂದಾದರೂ ಸಂಪಾದಿತ ಕೃತಿಯಾಗಿದೆ. ಮೂರನೆಯ ಹಾಗೂ ನಲವತ್ತೊಂದನೆಯ ಸಂಖ್ಯೆಗಳಿಂದ ಸೂಚಿತರಾಗಿರುವವರು ಹಾಮಾನಾ ಅವರ ತಂದೆಯವರು. ಅರ್ಪಣೆಯ ಪುಟದಲ್ಲಿ ಇದ್ದಂತೆ ಮಕ್ಕಳು ಕರೆಯುತ್ತಿದ್ದ ಆತ್ಮೀಯ ಸಂಬೋಧನೆಯನ್ನು ಮೂರನೆಯದರಲ್ಲಿ ಉಳಿಸಿಕೊಂಡಿದೆ.)

ಅನಂತರಾಮ್ ಜಿ. ಕೆ. ೩೪
ಅನಕೃ ೧೮
ಅಪ್ಪಯ್ಯ ೩೮
ಅರಸು ಡಿ. ವಿ. ೧೨
ಉಪಾಧ್ಯೆ ಆ. ನೇ. ೩೩
ಕನ್ನಡ ಅಧ್ಯಯನ ಸಂಸ್ಥೆಯ ಸಹೋದ್ಯೋಗಿಗಳು ೩೦
ಕವಿತಾ ೧೯
ಕುವೆಂಪು ೫೭, ೧೨೪-೨
ಕೃಷ್ಣ ಶಾಸ್ತ್ರಿ ಎ. ಆರ್. ೨೧, ೭೩
ಕೃಷ್ಣಸ್ವಾಮಿ ಅಯ್ಯಂಗಾರ್ ಕೆ. ೨
ಕೇಶವನ್ ಬಿ. ಎಸ್. ೧೧೪
ಗೊರೂರು ರಾಮಸ್ವಾಮಿ ಅಯ್ಯಂಗಾರ್ ೯, ೪೮
ಗೋಕಾಕ ವಿ. ಕೃ. ೧೪, ೮೩
ಜವರೇಗೌಡ ದೇ. ೫೫, ೧೧೨
ತರಾಸು ೨೬
ನರಸಿಂಹಾಚಾರ್ ಪು. ತಿ. ೧೭
ನಾಗರಾಜರಾವ್ ಹ. ವೆಂ. ೨೯
ನಾಡಿಗ ಕೃಷ್ಣಮೂರ್ತಿ ೨೮
ನಾರಾಯಣ ಜಿ. ೧೫
ನಾಲೂರು ಎಂ. ಜಿ. ಚಿನ್ನಪ್ಪಗೌಡ ೧೧೫
ನಾಲೂರು ಎಂ. ಜಿ. ಶಂಕರಪ್ಪಗೌಡ ೧೧೫
ನಿರಂಜನ ೩೧
ಪಂಕಜಮ್ಮ ವೆಂಕಟೇಶ ಅಯ್ಯಂಗಾರ್ ೬೭
ಪರಮೇಶ್ವರ ಭಟ್ಟ ಎಸ್. ವಿ. ೨೦
ಬಾಲೂರಾವ್ ಶಾ. ೨೫
ಬೇಂದ್ರೆ ದ. ರಾ. ೧೦
ಮರಿಯಪ್ಪ ಭಟ್ಟ ಎಂ. ೧೧
ಮಹಾಲಿಂಗಂ ಟಿ. ವಿ. ೧೨೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಸ್ತಿ ವೆಂಕಟೇಶ ಅಯ್ಯಂಗಾರ್ ೨೪
ಮುಗಳಿ ರಂ. ಶ್ರೀ ೩
ಯಶೋಧರಾ ೧
ರಂಗಣ್ಣ ಎಸ್. ವಿ. ೭೭
ರಂಗನಾಥರಾವ್ ಜಿ. ಎಸ್. ೨೭
ರವಿ ೧೯
ರಾಮಕೃಷ್ಣಮೂರ್ತಿ ಕೆ. ಎಸ್. ೩೨
ರಾಮಕೃಷ್ಣ ಹೆಗಡೆ ೮
ರುಕ್ಮಿಣಿಯಮ್ಮ ೧೧೯
ವೆಂಕಟಾಚಲ ಶಾಸ್ತ್ರೀ ಟಿ. ವಿ. ೧೬
ಶಂಕರನಾರಾಯಣ ರಾವ್ ಎಚ್. ಎಂ. ೨೨
ಶಂಕರೇಗೌಡ ಕೆ. ವಿ. ೧೩
ಶಾಮರಾಯ ತ. ಸು. ೮೫
ಶ್ರೀನಿವಾಸನಾಯಕ ೧೧೯
ಸಂಪಿಗೆರಾನು ಸುಬ್ಬಯ್ಯಗೌಡ ೨೩
ಸಿಂಗ್ ಎಂ. ಬಿ. ೨೭
ಸುಂಕಸಾಲೆ ನೀಲಮ್ಮ ೨೩
ಸುಕುಮಾರ ಸೇನ್ ೪
ಸೋಫಿಯಾ ವಾಡಿಯಾ ೧೨೩

ಕಲಾವಿದರು

(ಇಲ್ಲಿನ ಕಲಾವಿದರು ಭಾವಚಿತ್ರ, ರೇಖಾಚಿತ್ರ, ವರ್ಣವಿನ್ಯಾಸ ಇತ್ಯಾದಿಗಳಿಗೆ ಕಾರಣರಾಗಿದ್ದಾರೆ. ಅನೇಕ ಬಾರಿ ಹೆಚ್ಚಿನ ವಿವರಗಳು ಸಿಗುವುದಿಲ್ಲವಾದ್ದರಿಂದ ಈ ಕಲಾವಿದರಿಂದ ರೂಪಿತವಾದ ಕಲೆಯ ವಿವಿಧ ಬಗೆಗಳನ್ನು ಇಲ್ಲಿ ಸೂಚಿಸಲು ಸಾಧ್ಯವಾಗಿಲ್ಲ. ದೊರೆತ ಮಾಹಿತಿಯ ಆಧಾರದಿಂದ ಕಲಾವಿದರ ಒಂದು ಪಟ್ಟಿಯನ್ನು ಸಿದ್ಧಮಾಡಲು ಮಾತ್ರ ಸಾಧ್ಯವಾಗಿದೆ. ಅಂಕೆಗಳು ಈ ಕಲಾವಿದರು ದುಡಿದಿರುವ ನಮೂದುಗಳನ್ನು ಸೂಚಿಸುತ್ತವೆ.)

ಅಬ್ರಹಾಂ ಎಸ್. ಎಂ. ೨೫, ೨೮, ೨೯, ೩೧
ಅರ್ಕೇಶ್ವರಾಚಾರ್/ಅರ್ಕೇಶ್ ೨೪, ೨೬, ೩೩-೧, ೨, ೩; ೪೨, ೪೫, ೪೬, ೪೯, ೫೭, ೬೯, ೧೦೪, ೧೧೫, ೧೨೪-೨
ಅಲೆಕ್ಸಾಂಡರ್ ಜಾನ್ ಗ್ರೀನ್ ಲಾ ೧೨೦
ಅವಧೇಶ್ ಕುಮಾರ್ ೭೮
ಆಚಾರ್ ಬಿ. ಎಸ್. ೬೭, ೮೩
ಆಚಾರ್ಯ ಎಂ. ಟಿ. ವಿ. ೪-೨, ೩
ಕುಮಾರ್ ಪ. ಸ. ೨೭
ಕುಲಕರ್ಣಿ ವಿ. ಆರ್. ೧೨೨
ಕೇಸರ ಸಿಂಗ್ ಬಿ. ೪೩, ೫೨, ೫೩
ಚಂದ್ರನಾಥ್/ಚಂದ್ರನಾಥ ೨೪, ೩೫
ಚಂದ್ರಶೇಖರ ಪಿ. ಎಸ್. ೮
ತಿಪ್ಪೇಸ್ವಾಮಿ ಪಿ. ಆರ್. ೬೨, ೭೭
ಮುರಳೀಧರರಾವ್ ಕೆ./ಮುರಳೀಧರರಾವ್ ೧೬, ೧೮, ೧೯, ೨೦, ೨೧, ೨೫, ೨೮, ೨೯, ೩೧, ೩೩-೧, ೨, ೩; ೪೧, ೭೯, ೮೫
ರಾಘವೇಂದ್ರರಾವ್ ೧೦೭
ರಾವ್ ಎಸ್. ಆರ್. ೫೫
ವೆಂಕಟೇಶ ಕೆ. ಎಲ್./ವೆಂಕಟೇಶ್ ೯-೧, ೨, ೩, ೪, ೫, ೬; ೨೬, ೮೪, ೧೦೦, ೧೦೬, ೧೦೮, ೧೨೦
ಸತ್ಯ ಜಿ. ಕೆ. ೫
ಸತ್ಯನ್ ಟಿ. ಎಸ್. ೬೩, ೭೭
ಸಿಂಹನಾಥನ್ ೩
ಸುಂದರರಾಜ್ ಕೆ. ಆರ್./ಸುಂದರರಾಜ್ ೩೦, ೪೮, ೬೨
ಸೋಮಶೇಖರ್ ಕೆ. ಜಿ. ೪೮
ಸ್ವಾಮಿ ಎಸ್. ಎನ್. ೬೩, ೮೩
ಹರಿಪಾಲ್ ತ್ಯಾಗಿ ೭೯, ೮೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರು

(ಅಂಕಿಗಳು ನಮೂದುಗಳ ಕ್ರಮಾಂಕಗಳನ್ನು ಸೂಚಿಸುತ್ತವೆ. ಅಂಥ ನಮೂದುಗಳು ಒಂದಕ್ಕಿಂತ ಹೆಚ್ಚು ಮುದ್ರಣಗಳನ್ನು ಕಂಡಿದ್ದರೆ, ಕ್ರಮಾಂಕದ ಮುಂದೆ ಮುದ್ರಣದ ಸಂಖ್ಯೆಯನ್ನು ಸೂಚಿಸಿದೆ. ಉದಾಹರಣೆಗೆ ೧–೧ ಎಂದರೆ ೧ನೇ ನಮೂದಿನ ಅಂದರೆ ನಮ್ಮ ಮನೆಯ ದೀಪದ ಮೊದಲ ಮುದ್ರಣ ಎಂದರ್ಥ. ಅದೇ ರೀತಿ ೯–೧, ೨, ೩, ೪, ೫, ೬ ಎಂದರೆ ಒಂಬತ್ತನೇ ನಮೂದಿನ ಅಂದರೆ ಜಾನಪದ ಸ್ವರೂಪದ ಮೊದಲ, ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ ಮತ್ತು ಆರನೆಯ ಮುದ್ರಣಗಳು ಎಂದರ್ಥ. ಪುನರ್ಮುದ್ರಣಗಳಿರುವ ಕ್ರಮಾಂಕಗಳನ್ನು ಅರ್ಧವಿರಾಮ ಚಿಹ್ನೆಯಿಂದಲೂ ಇತರ ಕ್ರಮಾಂಕ ಗಳನ್ನು ಅಲ್ಪವಿರಾಮ ಚಿಹ್ನೆಯಿಂದಲೂ ಪ್ರತ್ಯೇಕಿಸಿದೆ. ಪುನರ್ಮುದ್ರಣಗಳನ್ನು ಸೂಚಿಸುವಾಗ ಹಾಮಾನಾ ಹೊತ್ತಗೆಗಳ ಮೊದಲ ಆರು–ಕಥೆ, ಚಿತ್ರ, ಪ್ರಬಂಧ; ಜೀವನ ಚರಿತ್ರೆ; ಮಕ್ಕಳ ಸಾಹಿತ್ಯ; ವಿಚಾರ, ವಿಮರ್ಶೆ; ಅಂಕಣ, ಆಕಾಶವಾಣಿ ಚಿಂತನ ಮತ್ತು ಅನುವಾದ–ವಿಭಾಗಗಳನ್ನು ಮಾತ್ರ ಗಮನಿಸಿದೆ. ನಿಜದಲ್ಲಿ ಕರ್ನಾಟಕ ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ, ಮೈಸೂರು ವಿದ್ಯಾ ಇಲಾಖೆ (ವಿದ್ಯಾ ಸಂಶೋಧನ ಶಾಖೆ) ಮತ್ತು ಮೈಸೂರು ಸರ್ಕಾರದ ಪಠ್ಯಪುಸ್ತಕಗಳ ಇಲಾಖೆಗಳು ಒಂದೇ ಪ್ರಕಾಶನ ಸಂಸ್ಥೆಯನ್ನು ಸೂಚಿಸುತ್ತವೆ. ಆದರೆ ವಿವಿಧ ಕಾಲಗಳಲ್ಲಿ ಈ ಸರ್ಕಾರಿ ಪ್ರಕಾಶನದ ಹೆಸರು ಬದಲಾಗಿರುವುದರಿಂದ ಸೂಚಿಶಾಸ್ತ್ರದ ನಿಯಮ ಗಳಿಗೆ ಅನುಗುಣವಾಗಿ ಈ ಪ್ರಕಾಶನ ಸಂಸ್ಥೆಯ ಹೆಸರನ್ನು ಬೇರೆ ಬೇರೆಯಾಗಿಯೇ ಪರಿಗಣಿಸಿದೆ. ಗೊರೂರು ಗೆಳೆಯರ ಬಳಗದ ಸ್ಥಳ ಪುಸ್ತಕದಲ್ಲಿ ಸೂಚಿತವಾಗಿಲ್ಲ. ಸಂಬಂಧಪಟ್ಟವರಿಂದ ಆ ಮಾಹಿತಿಯನ್ನು ಪಡೆಯಲಾಗಿದೆ. ನನ್ನ ಗಮನಕ್ಕೆ ಬಂದ ಪ್ರಕಾಶಕರ ಬದಲಾದ ವಿಳಾಸಗಳನ್ನು ನಕ್ಷತ್ರ ಚಿಹ್ನೆ ಹಾಕಿ ಸೂಚಿಸಿ ಈಗಿನ ವಿಳಾಸಗಳನ್ನು ಪುಟದ ಅಡಿಯಲ್ಲಿ ಕೊಟ್ಟಿದೆ.)

* ಅಪರ್ಣಾ ಪ್ರಕಾಶನ, ೪೯ ಅಕ್ಷಯ, ಟಿ.ಕೆ. ಬಡಾವಣೆ, ಸರಸ್ವತೀಪುರಂ, ಮೈಸೂರು ೫೭೦ ೦೦೯. ೨೪, ೨೬

ಉಷಾ ಸಾಹಿತ್ಯಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು ೫೭೦ ೦೦೧. ೧-೧; ೨-೨; ೩, ೧೪, ೧೫, ೧೮, ೬೩

ಐಬಿಎಚ್ ಪ್ರಕಾಶನ, ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು ೫೬೦ ೦೦೯. ೮, ೨೭, ೩೭

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬. ೩೯, ೪೧, ೪೭, ೪೯, ೫೦, ೫೧, ೫೭, ೫೮, ೫೯, ೬೦, ೬೧, ೬೨, ೬೪, ೬೫, ೬೬, ೬೯, ೭೦, ೭೧, ೮೯, ೯೦, ೯೧, ೯೩, ೯೪, ೯೫, ೯೬, ೯೭, ೧೦೧, ೧೦೨, ೧೦೬, ೧೦೭, ೧೧೮

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೪/೩ ಎ, ನೃಪತುಂಗ ರಸ್ತೆ, ಬೆಂಗಳೂರು ೫೬೦ ೦೦೨. ೫೨, ೫೩, ೫೪, ೭೨

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾನಿಲಯ, ಮುಂಬಯಿ ೪೦೦ ೦೯೮. ೧೨೨

ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮. ೧೧೩

ಕರ್ನಾಟಕ ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ. ೮೭

ಕಾವ್ಯಾಲಯ, ಮೈಸೂರು ೫೭೦ ೦೧೪. ೧೬

ಕೆ. ವಿ. ಶ್ರೀನಾಥ್, ಆಹಾರ ಸಂಶೋಧನಾ ಕೇಂದ್ರ, ಮೈಸೂರು ೫೭೦ ೦೧೩. ೩೬

ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು ೫೭೦ ೦೦೧. ೧-೫; ೧೭, ೧೯, ೨೩, ೩೩–೨, ೩; ೧೨೦

ಗೊರೂರು ಗೆಳೆಯರ ಬಳಗ, ಮೈಸೂರು. ೪೮

ಗೋಧೂಳಿ, ಐದನೆಯ ಮುಖ್ಯರಸ್ತೆ, ಜಯಲಕ್ಷ್ಮೀಪುರಂ, ಮೈಸೂರು ೫೭೦ ೦೧೨. ೧೦, ೩೩-೧; ೩೮

ಜಾನಪದ ವಿಜ್ಞಾನ ಭಾರತಿ, ಮೈಸೂರು. ೧೨೧

** ಅಪರ್ಣಾ ಪ್ರಕಾಶನ, ಎಸ್-೨, ಕಾಂತರಾಜ್ ಅರಸ್ ರಸ್ತೆ, ಸರಸ್ವತೀಪುರಂ, ಮೈಸೂರು ೫೭೦ ೦೦೯.*

CC-0. In Public Domain. Gurukul Kangri Collection, Haridwar

* ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ/ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು ೫೬೦ ೦೦೪.೯-೧, ೨, ೩, ೪, ೫, ೬; ೩೫, ೮೫
ದಸರಾ ಮಹೋತ್ಸವ ಸಮಿತಿ, ಮೈಸೂರು.೪೨, ೪೩, ೪೪, ೪೫, ೪೬
ದೇಜಗೌ ಗೆಳೆಯರ ಬಳಗದ ಪ್ರಕಟಣೆ, ಮೈಸೂರು.೫೫
ನರೇಶ್ ಅಂಡ್ ಕಂಪೆನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು ೫೬೦ ೦೧೯.೪-ಪಠ್ಯ ಆವೃತ್ತಿ; ೮೧
ಪ್ರತಿಭಾ ಗ್ರಂಥಮಾಲೆ, ಧಾರವಾಡ.೨-೧; ೫೬
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ೫೬೦ ೦೫೬.೧೧೫
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.೭೩, ೭೪, ೭೫, ೭೬, ೮೨, ೮೪, ೧೦೦, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧
ಪ್ರೀ-ಯೂನಿವರ್ಸಿಟಿ ಶಿಕ್ಷಣ ಮಂಡಳಿಗಾಗಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬.೮೮, ೯೨
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ೫೬೦ ೦೧೯.೬೮
ಭಾರತ ಭಾರತಿ ಪುಸ್ತಕ ಸಂಪದ, ಬೆಂಗಳೂರು ೫೬೦ ೦೧೯.೫
ಭಾರತೀಯ ಜ್ಞಾನಪೀಠ, ೧೮, ಇನ್‌ಸ್ಟಿಟ್ಯೂಷನಲ್ ಏರಿಯಾ, ಲೋಧಿ ರೋಡ್, ನವದೆಹಲಿ ೧೧೦ ೦೦೩.೭೮, ೭೯, ೮೦
ಮಹಾರಾಜಾ ಕಾಲೇಜು, ಮೈಸೂರು ೫೭೦ ೦೦೫.೭೭
ಮಾಸ್ತಿ ಸನ್ಮಾನ ಸಮಿತಿ ಪರವಾಗಿ ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು ೫೭೦ ೦೦೪.೬೭
ಮಿತ್ರ ಪ್ರಕಾಶನ, ೨೪, ಸರಸ್ವತೀಪುರಂ ಹೊಸ ಬಡಾವಣೆ, ಮೈಸೂರು ೫೭೦ ೦೦೯.೨೦, ೨೧, ೨೫, ೨೮, ೨೯, ೩೧
ಮೈಸೂರು ವಿದ್ಯಾ ಇಲಾಖೆ (ವಿದ್ಯಾ ಸಂಶೋಧನ ಶಾಖೆ).೯೯
ಮೈಸೂರು ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ.೯೮
ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.೬-೧; ೭-೧
ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪.೧-೨, ೩, ೪; ೪-೨, ೩, ೪, ೫; ೬-೨; ೭-೩; ೧೩, ೨೨
'ಶಿವಪ್ರಸಾದ್', ಬಸವನಗುಡಿ, ಬೆಂಗಳೂರು ೫೬೦ ೦೧೯.೪-೧
ಶ್ರೀಮತಿ ನಾರಾಯಣಮ್ಮ ಮತ್ತು ಶ್ರೀ ಎ. ಎಚ್. ಜನಾರ್ದನ ನಾಯ್ಡು, ಕೋಟೆ ಸುಗ್ಗೀಕಲ್ ರಸ್ತೆ, ಚಿಕ್ಕಮಗಳೂರು ೫೭೭ ೧೦೧.೧೨೪
ಶ್ರೀ ಲಕ್ಷ್ಮೀ ಬುಕ್ ಹೌಸ್, ರಾಮಯ್ಯರ್ ರಸ್ತೆ, ಮೈಸೂರು ೫೭೦ ೦೦೪.೭-೪
** ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ೫೭೦ ೦೦೯.೭-೨; ೧೧, ೧೨-೧, ೨; ೩೦, ೩೨, ೩೪, ೪೦, ೮೩, ೮೬, ೧೧೪
Rao and Raghavan, Prince of Wales Road, Mysore 570 004.೧೧೯, ೧೨೩

ಮರುಮುದ್ರಣಗಳು

(ಮರುಮುದ್ರಣಗಳನ್ನು ಕಂಡ ಇಲ್ಲಿನ ಹದಿನಾರು ಕೃತಿಗಳಲ್ಲಿ ಎರಡು ಕಥೆ, ಚಿತ್ರ, ಪ್ರಬಂಧ; ಒಂದು ಜೀವನ ಚರಿತ್ರೆ; ಎರಡು ಮಕ್ಕಳ ಸಾಹಿತ್ಯ; ಎರಡು ವಿಚಾರ, ವಿಮರ್ಶೆ; ಒಂದು ಅಂಕಣ, ಆಕಾಶವಾಣಿ ಚಿಂತನ; ಮೂರು ಸಂಪಾದಿತ; ಮೂರು ಪಠ್ಯ; ಒಂದು ಸೂಚಿ, ಕೋಶ, ಪರಾಮರ್ಶನ; ಒಂದು ಹಾಮಾನಾ

** ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು ೫೭೦ ೦೦೨.*
*** ಸುರುಚಿ ಸಾಹಿತ್ಯ, ಕುವೆಂಪುನಗರ, ಮೈಸೂರು ೫೭೦ ೦೨೩.*

Digitized by Arya Samaj Foundation Chennai and eGangotri
CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುರಿತು ವಿಭಾಗಗಳಿಗೆ ಸೇರಿದವು. ಹಾಮಾನಾ ಅವರ ಒಂದು ಕೃತಿ (೪) ಒಂದೇ ವರ್ಷದಲ್ಲಿ ಎರಡು ಮರುಮುದ್ರಣಗಳನ್ನು ಕಂಡ ದಾಖಲೆ ಹೊಂದಿದೆ. ಆಯಾ ನಮೂದುಗಳ ಮೊದಲ ಮುದ್ರಣಗಳನ್ನು ಕೂಡುಗೆರೆಯ ಪಕ್ಕ ಕೊಟ್ಟಿದ್ದು, ಮರುಮುದ್ರಣಗಳನ್ನು ಕಂಸಗಳಲ್ಲಿ ಕೊಟ್ಟಿದೆ. ಯಾವುದೇ ಕೃತಿಯ ಒಟ್ಟು ಮುದ್ರಣಗಳ ಸಂಖ್ಯೆಯನ್ನು ತಿಳಿಯುವುದರ ಜೊತೆಗೆ ಮೊದಲ ಮುದ್ರಣ ಹಾಗೂ ಮರುಮುದ್ರಣದ ಮೊದಲ ಅವಕಾಶಗಳ ನಡುವಿನ ಕಾಲವನ್ನು ತಿಳಿಯಲು ಈ ಕ್ರಮದಿಂದ ಸುಲಭಸಾಧ್ಯ. ವಿಸ್ತೃತ ಆವೃತ್ತಿಯ ಮುದ್ರಣಗಳನ್ನು ನಕ್ಷತ್ರ ಚಿಹ್ನೆಯಿಂದ ಗುರುತಿಸಿದೆ.)

೧–೧೯೫೬ (೧೯೬೬, ೧೯೭೧, ೧೯೮೪, ೧೯೮೮)
೨–೧೯೫೦ (೧೯೮೩*)
೪–೧೯೬೦ (೧೯೬೧–ಪಠ್ಯ ಆವೃತ್ತಿ, ೧೯೬೭, ೧೯೭೦, ೧೯೭೧, ೧೯೭೧)
೬–೧೯೬೧ (೧೯೭೬)
೭–೧೯೫೨ (೧೯೭೬, ೧೯೮೪, ೧೯೮೯)
೯–೧೯೭೧ (೧೯೭೫, ೧೯೭೮, ೧೯೮೨, ೧೯೮೮, ೧೯೯೦)
೧೨–೧೯೭೬ (೧೯೭೮)
೩೩–೧೯೭೮ (೧೯೭೯, ೧೯೮೫)
೪೦–೧೯೬೮ (೧೯೭೦, ೧೯೭೭*)
೮೧–೧೯೬೨ (೧೯೬೩)
೮೬–೧೯೭೬ (೧೯೮೬*)
೯೧–೧೯೮೩ (೧೯೮೭)
೯೩–೧೯೬೯ (೧೯೭೦)
೯೬–೧೯೭೭ (?, ೧೯೮೨)
೧೦೧–೧೯೭೩ (೧೯೭೪, ೧೯೭೫, ೧೯೭೮, ೧೯೮೦, ೧೯೮೪)
೧೨೪–೧೯೮೭ (೧೯೯೦)

ಬಹುಮಾನಗಳು, ಪದಕಗಳು, ಪ್ರಶಸ್ತಿಗಳು

೧೯೫೧ 'ಹೆಣ್ಣು ಹೃದಯ' ಕಥೆಗೆ ಶಿವಮೊಗ್ಗೆಯ ಇಂಟರ್ಮೀಡಿಯೆಟ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಕಥಾಸ್ಪರ್ಧೆಯಲ್ಲಿ ಮೊದಲ ಬಹುಮಾನ.

೧೯೫೧ 'ಹೀಗೂ ಜೀವನ' ಕಥೆಗೆ ಶಿವಮೊಗ್ಗೆಯ ಇಂಟರ್ಮೀಡಿಯೆಟ್ ಕಾಲೇಜಿನ ಸಾಹಿತ್ಯ ಸಂಘದ ಅಖಿಲ ಕರ್ಣಾಟಕ ಕಥಾಸ್ಪರ್ಧೆಯಲ್ಲಿ ಎರಡನೆಯ ಬಹುಮಾನ.

೧೯೫೪ ಮೈಸೂರು ವಿಶ್ವವಿದ್ಯಾನಿಲಯದ ಪ್ರಬಂಧ ಸ್ಪರ್ಧೆಯಲ್ಲಿ ಹೊನ್ನಸೆಟ್ಟಿ ನಗದು ಬಹುಮಾನ.

೧೯೫೮ ಕಲ್ಕತ್ತಾ ವಿಶ್ವವಿದ್ಯಾನಿಲಯದ ಚಿನ್ನದ ಪದಕ ಮತ್ತು ನಗದು ಬಹುಮಾನ, ಎಂ.ಎ. (ಭಾಷಾಶಾಸ್ತ್ರ) ಪರೀಕ್ಷೆಯಲ್ಲಿ ಪ್ರಥಮದರ್ಜೆ, ಪ್ರಥಮ ಸ್ಥಾನ ಗಳಿಸಿದ್ದಕ್ಕಾಗಿ.

೧೯೬೭ ಮದರಾಸಿನ ಕ್ರಿಶ್ಚಿಯನ್ ಲಿಟರರಿ ಸೊಸೈಟಿ ಅವರಿಂದ 'ಸಂಕೀರ್ಣ'ಕ್ಕೆ ನಗದು ಬಹುಮಾನ.

೧೯೭೩ ಬೆಂಗಳೂರಿನಲ್ಲಿ ಶ್ರೀ ನಿಡುಮಾಮಿಡಿ ಜಗದ್ಗುರುಗಳಿಂದ ಹೊಂಗನ್ನಡಿಗ ಪ್ರಶಸ್ತಿ ಮತ್ತು ಚಿನ್ನದ ಪದಕ.

೧೯೮೦ 'ಸಲ್ಲಾಪ'ಕ್ಕೆ ೧೯೭೫ರ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ.

೧೯೮೨ ಕರ್ನಾಟಕ ರಾಜ್ಯ ಪ್ರಶಸ್ತಿ (ನಗದು ಹಣ ನಿರಾಕರಣ).

೧೯೮೫ ಕರ್ನಾಟಕ ಸಾಹಿತ್ಯ ಅಕಾದೆಮಿ ಪ್ರಶಸ್ತಿ.

೧೯೮೯ 'ಸಂಪ್ರತಿ'ಗೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ.

೧೯೮೯ ಐಬಿಎಚ್ ಎಜುಕೇಶನ್ ಟ್ರಸ್ಟ್ ಪ್ರಶಸ್ತಿ.

೧೯೮೯ 'ಪ್ರಣಯ ಪದಾವಳಿ'ಗೆ ವರ್ಧಮಾನ ಪ್ರಶಸ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ। ಎಚ್. ಎಸ್. ಸುಜಾತಾ ಅವರ

ಸೀತೆಯ ಭವಿಷ್ಯ

(ಮೂಲ: ಡಾ. ನಾರ್ಲ ವೆಂಕಟೇಶ್ವರ ರಾವ್ ಅವರ ತೆಲುಗು ನಾಟಕ 'ಸೀತಜೋಸ್ಯಂ')

ಕೆಲವು ಅಭಿಪ್ರಾಯಗಳು

"ತಮ್ಮ ಅನುವಾದವು ಸೊಗಸಾಗಿದೆ, ಶೈಲಿ ಕನ್ನಡ ಜಾಯಮಾನಕ್ಕೆ ಸರಿಯಾಗಿದೆ. ಓದುಗರನ್ನು ಆಕರ್ಷಿಸಿಕೊಂಡು ಹೋಗುತ್ತದೆ. ಡಾ. ನಾರ್ಲ ಅಪೂರ್ವ ವಿದ್ವಾಂಸರು. ಇವರ ಕೃತಿಯನ್ನು ಕನ್ನಡಕ್ಕೆ ತಂದು, ಉಪಕಾರ ಮಾಡಿದ್ದೀರಿ. ರೂಢಿ, ಪರಂಪರೆಯ ದಾಸರಾಗಿರುವ ನಮ್ಮ ಜನಕ್ಕೆ, ನಿಮ್ಮ ಅನುವಾದವು ಕಣ್ಣು ತೆರೆದು, ವಿಚಾರ ವಿಮರ್ಶೆಗೆ ಒತ್ತಾಯಪಡಿಸೀತೆಂದು ನಂಬಿದ್ದೇನೆ.

ಮಾನವನ ಸಾಮಾಜಿಕ ವಿಕಾಸಕ್ರಮದ ಘಟ್ಟಗಳ ಶಾಸ್ತ್ರೀಯ ತಳಹದಿ ಮೇಲೆ ಡಾ। ನಾರ್ಲ ತಮ್ಮ ಕೃತಿಯನ್ನು ರಚಿಸಿದ್ದಾರೆ. 'ಕಣಕ', 'ಹೂರಣ' ರೂಪಕದಿಂದ ಓದುಗರನ್ನು ಎಚ್ಚರಿಸಿದ್ದು ಸ್ತುತ್ಯವಾಗಿದೆ... ಭಾರತೀಯರು ಸ್ವತಂತ್ರ ವಿಚಾರಶಕ್ತಿಯನ್ನು ಬೆಳೆಸಿಕೊಳ್ಳಬೇಕು, ರೂಢಿಮೂಢರಾಗಿ ಬಾಳಬಾರದು, ಆಚಾರ ವಿಚಾರಗಳಲ್ಲಿ ಅಂತರವು ತಗ್ಗಬೇಕು ಎಂಬ ಕೊರಗು, ಚಿಂತೆ ಡಾ. ನಾರ್ಲ ಅವರಿಗೆ. ಗತಾನುಗತಿಕರಾಗಿ ಬಾಳುವ ಜನ ಸ್ವತಂತ್ರ ಮನೋಭಾವದವರು ಆಗದೆ ದಾಸ್ಯದಲ್ಲಿಯೇ ಧನ್ಯತೆ ಬಗೆಯುವವರು ಆಗುತ್ತಾರೆ. ಸಮಾಜವನ್ನು ಬಡಿದು ಎಬ್ಬಿಸುವ ಡಾ. ನಾರ್ಲರ ಈ ಕೃತಿಯು ಕನ್ನಡಿಗರಲ್ಲಿಯೂ ಸ್ವತಂತ್ರ ವಿಚಾರಕ್ಕೆ ಪ್ರೇರಣವಾದೀತು ಎಂದು ನಾನು ಬಗೆಯುತ್ತೇನೆ. ಊಹೆ, ತರ್ಕದ ಮೇಲೆಯೆ ನಿಲ್ಲದೆ ಲಿಖಿತ ಪ್ರಮಾಣ ಆಧಾರಗಳನ್ನು ಕೊಡುವ ಡಾ. ನಾರ್ಲರ ಈ ಕೃತಿ ತರುಣರಿಗೆ ಮಾರ್ಗದರ್ಶಕವಾಗಿದೆ."

— ಶಂ. ಬಾ. ಜೋಶಿ
(೧೫-೧-೧೯೯೦)

"ನಾಟಕದ ಮತ್ತು ಉಳಿದ ಗದ್ಯಭಾಗದ ಭಾಷಾಂತರವೆಲ್ಲ ಚೆನ್ನಾಗಿಯೇ ಬಂದಿದೆ; ಓದಿ ಸಂತೋಷ ವಾಯಿತು... ನಾರ್ಲರವರ ಓದುಗಾರಿಕೆ ವಿಸ್ತಾರವಾದದ್ದು, ವಿಷಯ ಸಂಗ್ರಹಣ ಮೆಚ್ಚುವಂತಹುದು."

— ಎ. ಎನ್. ಮೂರ್ತಿರಾವ್
(೨೯-೧೧-೧೯೮೬)

"ನೀವು ತೆಲುಗಿನ ಶ್ರೇಷ್ಠವಾದ ಕೃತಿಯೊಂದನ್ನು ಕನ್ನಡಕ್ಕೆ ಸಮರ್ಪಕವಾದ ರೀತಿಯಲ್ಲಿ ಕನ್ನಡಿಸಿಕೊಟ್ಟು ನಮಗೆ ಮಹೋಪಕಾರ ಮಾಡಿದ್ದೀರಿ.

ನಿಮ್ಮ ಈ ಅನುವಾದದಲ್ಲಿ ಕನ್ನಡದ ಜಾಯಮಾನಕ್ಕೆ ಹೊಂದದ ವಾಗ್ರೂಢಿ ಒಂದೂ ಇಲ್ಲ. ಒಂದು ಕಡೆಯೂ ಸಂದಿಗ್ಧಾರ್ಥಕ್ಕೆ ಎಡೆಯಾಗಿ ಮೂಲವನ್ನು ನೋಡಿ ಪರಿಹಾರ ಮಾಡಿಕೊಳ್ಳಬೇಕೆಂಬ ಅಪೇಕ್ಷೆ ನನಗೆ ಎಂದೂ ಬರಲಿಲ್ಲ. ಬರವಣಿಗೆ ನೇರವಾಗಿದೆ, ಸರಳವಾಗಿದೆ, ಜೊತೆಗೆ ಅಷ್ಟೇ ಖಚಿತವೂ ಸತ್ವಯುತವೂ ಆಗಿ ಬಂದಿದೆ. ಇದು ಅನುವಾದವಲ್ಲ, ಸ್ವತಂತ್ರ ಕೃತಿಯೇ ಹೌದು ಎನ್ನುವ ರೀತಿಯಲ್ಲಿ ಈ ಕೃತಿಯನ್ನು ನೀವು ಕನ್ನಡಕ್ಕೆ ತಂದಿದ್ದೀರಿ. ಶ್ರೀ ನಾರ್ಲ ವೆಂಕಟೇಶ್ವರ ರಾವ್ ತಾವೇ ಕನ್ನಡದಲ್ಲಿ ಬರೆದಿದ್ದರೆ ಅವರ ಬರವಣಿಗೆ ಇದಕ್ಕಿಂತ ಭಿನ್ನವಾಗಿರುತ್ತಿರಲಿಲ್ಲ ಎನಿಸುತ್ತದೆ."

— ಎಸ್. ವಿ. ಪರಮೇಶ್ವರ ಭಟ್ಟ
(೨೬-೯-೧೯೮೬)

"ನೀವು ತುಂಬ ದಕ್ಷತೆಯಿಂದ ಅನುವಾದಕಾರ್ಯವನ್ನು ನಿರ್ವಹಿಸಿದ್ದೀರಿ. 'ರಾಮಾಯಣ' ವಿಚಾರ ದಲ್ಲಿ ದಿವಂಗತ ನಾರ್ಲ ಅವರ ಸ್ವತಂತ್ರ ಆಲೋಚನೆಯನ್ನು ಕನ್ನಡ ಜನಕ್ಕೆ ಪರಿಚಯಿಸಲು ಇದು ನೆರವಾಗುತ್ತದೆ. ಸಾಂಪ್ರದಾಯಿಕವಾಗಿ ಅಥವಾ ಸ್ವಲ್ಪಮಟ್ಟಿಗೆ ನವೀನ ದೃಷ್ಟಿಯಿಂದ ಸಹ ರಾಮಾಯಣವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಶೀಲಿಸಿದವರಿಗೆ ಸಾಕಷ್ಟು ಆಘಾತವುಂಟುಮಾಡುವಂಥ ಬರವಣಿಗೆ ಪೀಠಿಕೆಯಲ್ಲಿ ಮತ್ತು ನಾಟಕ ರಚನೆಯಲ್ಲಿ ಕಂಡುಬರುತ್ತದೆ. ಅದನ್ನು ಚರ್ಚಿಸಲು ಸಾಕಷ್ಟು ಸಾಮಗ್ರಿ ದೊರತಿದೆ."

— ರಂ. ಶ್ರೀ ಮುಗಳಿ
(೧೧-೧೨-೧೯೮೬)

"'ಸೀತೆಯ ಭವಿಷ್ಯ' ಓದಿದೆ. ಕನ್ನಡದಲ್ಲಿ ಒಂದು ಹಿಡಿಯಷ್ಟು ಇಲ್ಲದ ವೈಚಾರಿಕ ಸಾಹಿತ್ಯಕ್ಕೆ ಇದು ಭಾರೀ ಬೆಲೆಯ ಕೊಡುಗೆ. ಕನ್ನಡದ ವಿಚಾರಶೀಲ ಓದುಗರಿಗೆ ನಾರ್ಲ ಹತ್ತಿರದವರಾಗುತ್ತಾರೆ... ನಾರ್ಲರ ಕೃತಿ ಬಲು ದೊಡ್ಡದು. ಅದನ್ನು ಕನ್ನಡಿಸಿ ದೊಡ್ಡ ಕೆಲಸ ಮಾಡಿದ್ದೀರಿ. ಅಭಿನಂದನೆ!"

— ನಿರಂಜನ
(೯-೧೦-೧೯೮೬)

"ಇಂಥ ಜೀವಾಳದ ವಿಷಯಗಳ ಬಗೆಗೆ ಇಷ್ಟು ನಿಖರವೂ ಪ್ರಖರವೂ ಆದ ವಿವೇಚನೆ ಕನ್ನಡದಲ್ಲಿ ಈ ಮೊದಲು ಬಂದಂತಿಲ್ಲ... ಇಲ್ಲಿ ಪ್ರತಿಪಾದಿಸಿದ ವಿಷಯಕ್ಕೆ ಕನ್ನಡ ಸಾಹಿತ್ಯ ವಿಮರ್ಶೆಯ ಲೋಕದಲ್ಲಿ ಅತ್ಯಧಿಕ ಪ್ರಸಿದ್ಧಿಯೂ ಪ್ರಶಸ್ತಿಯೂ ಸಿಗುವುದು ಅತಿ ಅವಶ್ಯ... ಇಲ್ಲಿಯ ಸೀತೆ ದ್ರೌಪದಿಯಂತೆ. ತೇಜಸ್ವಿನೀ. ಪರಿಹಾಸ ಚತುರಳೂ ಪ್ರಖರ ನಾಲಿಗೆಯವಳೂ ವಿನಯೋಕ್ತಿಯಲ್ಲಿಯೇ ವ್ಯಂಗ್ಯ ಸಿದ್ಧಿ ಪಡೆದವಳೂ ಆದರೂ ಇವೆಲ್ಲವನ್ನೂ ಮೀರುವ ಸಾತ್ವಿಕ, ಪ್ರಸನ್ನ, ಪ್ರೇಮಮಯ ವ್ಯಕ್ತಿತ್ವವುಳ್ಳವಳೂ ಆಗಿ ಚಿತ್ರಿತಳಾಗಿದ್ದಾಳೆ... Seeta here is not a docile, demure, damsel in distress. Nor is she a domesticated housewife. She Knows and feels what she really is—the daughter of a King and the daughter-in-law of another. Yet she is not at all Conscious of her own greatness. She is vibrant and strident and yet very ardent. The two acts are but a Continuous Vehicle of Seeta's positive and dynamic stance... She seems always sensitive, sensible and lovable despite her angry moods.

As for the translation. ತುಂಬ ಅಚ್ಚುಕಟ್ಟಾಗಿದೆ. ನೈಜವಾಗಿದೆ. ಶ್ರೀ ನಾರ್ಲರೇ ಕನ್ನಡದಲ್ಲಿ ಬರೆದಂತೆ ಇದೆ. ಇದು ಅನುವಾದವೆಂದು ಅನಿಸುವುದಿಲ್ಲ. ಇದು ಅನುವಾದ ಕೌಶಲ್ಯದ ಯಥಾರ್ಥ ಪ್ರಶಸ್ತಿ... ಕನ್ನಡ ಶೈಲಿಗೆ ಹೊರತಾದ ವಾಕ್ ಪ್ರಯೋಗಗಳು ಎಲ್ಲಿಯೂ ಕಣ್ಣು ಕುಕ್ಕುವುದಿಲ್ಲ."

— ಗೌರೀಶ ಕಾಯ್ಕಿಣಿ
(೨೫-೯-೧೯೮೯)

"'ಸೀತೆಯ ಭವಿಷ್ಯ' ನನಗೆ ಎರಡು ರೀತಿಯಲ್ಲಿ ಉಪಕಾರ ಮಾಡಿದೆ. ಒಂದು ಶ್ರೀ ನಾರ್ಲ ಅವರ ಬರಹದ ಬಗ್ಗೆ ನಾನು ದೂರದಿಂದ ಹೊಂದಿದ್ದ ಗೌರವವನ್ನು ತುಂಬ ಹತ್ತಿರಕ್ಕೆ ತಂದದ್ದು. ಎರಡು ತೆಲುಗಿನಿಂದ ಕನ್ನಡಕ್ಕೆ ಬಂದ ಗ್ರಂಥವೊಂದು ಎಷ್ಟು ಹತ್ತಿರ ಕನ್ನಡವಾಗಬಹುದು ಎಂಬುದನ್ನು ದೃಷ್ಟಾಂತ ಪೂರ್ವಕವಾಗಿ ಪರಿಶೀಲಿಸುವ ಅವಕಾಶ ಸಿಕ್ಕಿದ್ದು... ನಿಮ್ಮ ಅನುವಾದ ಕಲೆ ನನಗೆ ತುಂಬ ಹಿಡಿಸಿದೆ. ಈ ಗ್ರಂಥದ ವಿವರಗಳನ್ನು ಏನೂ ಹೇಳದೆ ಸುಮ್ಮನೆ ಓದಿದರೆ ಇದು ಕನ್ನಡದ್ದೇ ಬರಹ, ಕನ್ನಡಿಗರ ಕೈಚಳಕ, ಕನ್ನಡದ ಜಾಯಮಾನ ಎಂದು ಯಾರಾದರೂ ಹೇಳಬಲ್ಲರು. ಇಷ್ಟು ಸಮೀಪವಾಗಿ ಎರಡು ಭಾಷೆಗಳನ್ನು ಬಳಸಬಲ್ಲ, ಉಪಯೋಗಿಸಬಲ್ಲ ಸಾಮರ್ಥ್ಯ ಅಪರೂಪದ್ದು."

— ಜಿ. ವೆಂಕಟಸುಬ್ಬಯ್ಯ
(೨೪-೩-೧೯೮೭)

"ಹಳೆಯ ವಿಚಾರಗಳನ್ನು ಬಡಿದೆಬ್ಬಿಸುವ ಕೃತಿ. ಒಳ್ಳೆಯ ಕೆಲಸ ಮಾಡಿದಿರಿ. ಇಂಥ ಇನ್ನೂ ಒಂದೆರಡನ್ನು ಅನುವಾದಿಸಿರಿ. ಬೇಕು, ನಮ್ಮ ಜನಕ್ಕೆ."

— ಶ್ರೀನಿವಾಸ ಹಾವನೂರ
(೮-೧೦-೧೯೮೬)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ನೀವು ಅನುವಾದಕ್ಕೆ ಆರಿಸಿಕೊಂಡ 'ಸೀತೆಯ ಭವಿಷ್ಯ'ದಲ್ಲಿ ಬೇರೆ ಬೇರೆ ಬಗೆಯ ಬರಹಗಳಿವೆ– ನಿರೂಪಣೆ, ವಾದ, ಚಿಂತನೆ ಎಲ್ಲ ಸೇರಿವೆ. ಜೊತೆಗೆ ಮೂವತ್ತೈದು ಪುಟಗಳ ನಾಟಕವಿದೆ. ನಾಟಕದ ಸಂಭಾಷಣೆಗಳಲ್ಲಿ ವೈವಿಧ್ಯವಿದೆ. ಈ ಬಗೆಯ ಬರಹಗಳ ಅಗತ್ಯಗಳನ್ನು ನಿರ್ವಹಿಸಿ ಯಶಸ್ವಿಯಾಗಿ ಅನುವಾದ ಮಾಡಿದ್ದೀರಿ. ಕನ್ನಡದಲ್ಲಿ ಸಹಜವಾಗಿ ಸಂದರ್ಭಕ್ಕೆ ಉಚಿತವಾಗಿ ಹರಿಯುವ ಭಾಷೆಯನ್ನೂ ಬಳಸಿದ್ದೀರಿ. ತುಂಬಾ ಕುತೂಹಲಕರವಾದ ಒಂದು ಪುಸ್ತಕವನ್ನು ಕನ್ನಡಿಗರು ಓದುವುದನ್ನು ಸಾಧ್ಯ ಮಾಡಿದಿರಿ. ಅಭಿನಂದನೆಗಳು."

– ಎಲ್. ಎಸ್. ಶೇಷಗಿರಿರಾವ್
(೨-೧೨-೧೯೮೬)

"ನಿಮ್ಮ ಅನುವಾದ ಕೃತಿಯನ್ನು ಪೂರ್ತಿಯಾಗಿ ಓದಿದೆ. ಅನುವಾದ ಸರಳವಾಗಿ ಮೂಲ ಲೇಖಕರ ಅಭಿಪ್ರಾಯವನ್ನು ಸರಿಯಾಗಿ ವ್ಯಕ್ತಪಡಿಸುತ್ತದೆ...

ಅನುಬಂಧಗಳಾಗಿ ಕೊಟ್ಟಿರುವ ದಶರಥ ಜಾತಕ, ರಾಮಾಯಣದ ಅರಣ್ಯಕಾಂಡದ ಒಂಬತ್ತು ಹಾಗೂ ಹತ್ತನೆಯ ಸರ್ಗಗಳ ಅನುವಾದ, ಡಾ. ಹಾ. ಮಾ. ನಾಯಕರು ಬರೆದ 'ಔಚಿತ್ಯ ವಿಚಾರ' ಎಂಬ ಲೇಖನ, ನಾರ್ಲರವರ 'ಸಾಹಿತ್ಯ ಅಕಾದೆಮಿಯ ಪ್ರಶಸ್ತಿಯನ್ನು ನಾನೇಕೆ ತಿರಸ್ಕರಿಸಿದೆ?' ಎಂಬ ಲೇಖನದ ಅನುವಾದ– ಇವೆಲ್ಲಾ ಗ್ರಂಥದ ಸಮಗ್ರತೆಗೆ ಸಹಾಯಕವಾಗಿವೆ. ಮುನ್ನುಡಿಯು ಉಚಿತವಾಗಿದೆ. ಸಂಶೋಧನಾ ಮೌಲ್ಯ ವಿರುವ ಉತ್ತಮ ಪುಸ್ತಕದ ಸಮರ್ಥ ಅನುವಾದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ."

– ಎ. ಎಸ್. ಕೆದಿಲಾಯ
(೨೯-೧೦-೧೯೮೬)

"...'ಸೀತೆಯ ಭವಿಷ್ಯ' ಓದಿ ಮುಗಿಸಿದೆ. ವಿಸ್ಮಯ, ಮೆಚ್ಚುಗೆ ಇವೇ ಮೊದಲ ಪ್ರತಿಕ್ರಿಯೆ. ಶ್ರೀ ನಾರ್ಲ ಅವರ ಆರೋಗ್ಯಪರತೆ, ವೈಜ್ಞಾನಿಕವಾಗಿ ಪ್ರತಿಯೊಂದನ್ನೂ ವಿಶ್ಲೇಷಿಸುವ ರೀತಿ ಮತ್ತು ವಿವೇಕದಿಂದ ತೀರ್ಮಾನಗಳಿಗೆ ಬರುವ ಬಗೆ ಬೆರಗುಗೊಳಿಸುವಂಥದು... ಬಹಳ ಸಮಯದ ಬಳಿಕ ಇಂಥ ಆಲೋಚನಾಪರವಾದ ಒಳ್ಳೆಯ ಪುಸ್ತಕ ಓದಲು ಅನುವು ಮಾಡಿಕೊಟ್ಟ ನಿಮಗೆ ಅಭಿನಂದನೆ. ನಿಮ್ಮ ಅನುವಾದ ಉತ್ಕೃಷ್ಟ. ಇದು ಕನ್ನಡದಲ್ಲೇ ಬರೆದುದೇನೋ ಅನ್ನುವ ಹಾಗಿದೆ."

– ಅನುಪಮಾ ನಿರಂಜನ
(೪-೧೧-೧೯೮೬)

"'ಸೀತೆಯ ಭವಿಷ್ಯ' ನಾರ್ಲ ವೆಂಕಟೇಶ್ವರ ರಾವ್ ಅವರ ಬಹು ಚರ್ಚಿತ ವಾದ, ವಿವಾದವನ್ನು ಸೃಷ್ಟಿಸಿದ ಹಾಗೂ (ಕೇಂದ್ರ ಸಾಹಿತ್ಯ ಅಕಾದೆಮಿಯ ಬಹುಮಾನವನ್ನು ತಿರಸ್ಕರಿಸುವ ಮೂಲಕ) ಸಾಹಿತ್ಯ ವಲಯಗಳಲ್ಲಿ ಕೋಲಾಹಲವನ್ನುಂಟುಮಾಡಿದ ಸ್ವಾರಸ್ಯಪೂರ್ಣ ಕೃತಿ. ಹಳೆಯ ಸಾಂಪ್ರದಾಯಿಕ ಚಿಂತನೆ ಗಳಿಗೆ ಜೋತುಬೀಳದ ಮನಸ್ಸುಗಳನ್ನು ತನ್ನ ವೈಚಾರಿಕ, ವಿಶ್ಲೇಷಕ ಮತ್ತು ಚಿಕಿತ್ಸಕ ದೃಷ್ಟಿ ಅಥವಾ ಮನೋಧರ್ಮದಿಂದಾಗಿ ಸೆರೆಹಿಡಿಯುವ ಹಾಗೂ ಆಲೋಚನಾಪರರನ್ನಾಗಿ ಮಾಡುವಂಥ ವಿರಳ ಸ್ವರೂಪದ ನಾಟಕ. ಇಲ್ಲಿಯ ಸೀತೆಯ ವ್ಯಕ್ತಿತ್ವದ ಮುಂದೆ, ಅವಳ ಚಿಂತನಶೀಲತೆ ಹಾಗೂ ನ್ಯಾಯಪರತೆಯ ಮುಂದೆ ಶ್ರೀರಾಮನೂ ಸೇರಿದಂತೆ ತ್ರೇತಾಯುಗದ ಮುನಿಜನೋತ್ತಮರು ಕೂಡ ಕುಬ್ಜರಾಗುತ್ತಾರೆ, ತತ್ತರಿಸಿ ಹೋಗುತ್ತಾರೆ. ಅವರೆಲ್ಲರ ಸಣ್ಣತನವನ್ನು ಕಂಡು ಅವರ ವಿಷಯದಲ್ಲಿ ಮರುಕಪಡುವಂತಾಗುತ್ತದೆ. ಸಹಜವಾಗಿಯೇ ಸಂಪ್ರದಾಯವಾದಿಗಳು ಸಿಡಿದೆದ್ದು ನಿಲ್ಲುವಂತೆ ಮಾಡುತ್ತದೆ. ಈ ದೃಷ್ಟಿಯಲ್ಲಿ ಈ ನಾಟಕ ವಿವಾದದ ಕೇಂದ್ರವಾಗಿದ್ದು ಆಶ್ಚರ್ಯವನ್ನೇನೂ ಉಂಟುಮಾಡುವುದಿಲ್ಲ.

ಡಾ. ಎಚ್. ಎಸ್. ಸುಜಾತಾ ಅವರು ಇಂಥ ಮಹತ್ವದ ಕೃತಿಯೊಂದನ್ನು ಕನ್ನಡಿಸಿ ಕನ್ನಡಿಗರಿಗೆ ಉಪಕಾರವನ್ನೇ ಎಸಗಿದ್ದಾರೆ. ಉತ್ತಮ ಸಾಹಿತ್ಯಕ ಅಭಿರುಚಿಯ ಪ್ರತೀಕವಾಗಿರುವ ಈ ನಾಟಕವನ್ನು ಡಾ. ಸುಜಾತಾ ತುಂಬ ಸಮರ್ಥ ರೀತಿಯಲ್ಲಿ ಅನುವಾದಿಸಿದ್ದಾರೆ. ತೆಲುಗು ಮತ್ತು ಕನ್ನಡ ಭಾಷೆಗಳ ಬಗೆಗಿನ ಅವರ ಆಳವಾದ ಅರಿವು, ಯಾವುದನ್ನೂ ಊಹೆಗೆ ಬಿಡದೆ ತಲಸ್ಪರ್ಶಿಯಾಗಿ ಶೋಧಿಸುವ ಶ್ರದ್ಧೆ ಹಾಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಭಾವನೆಗಳನ್ನೂ ಆಲೋಚನೆಗಳನ್ನೂ ಅಳವಡಿಸಬಲ್ಲ ಜಾಣ್ಮೆ ಇವುಗಳಿಗೆ ಈ ಅನುವಾದದ ಒಂದೊಂದು ಪುಟವೂ ಸಾಕ್ಷಿಯನ್ನು ನುಡಿಯುತ್ತದೆ. ಈ ಅನುವಾದ ಕಾರ್ಯದಲ್ಲಿ ಡಾ. ಸುಜಾತಾ ಅವರು ಎರಡು ಬಗೆಯ ಸವಾಲುಗಳನ್ನು ಎದುರಿಸಿದ್ದಾರೆ. ಒಂದು ಸೃಜನಶೀಲ ಪ್ರಕಾರಕ್ಕೆ ಸೇರಿದ 'ಸೀತೆಯ ಭವಿಷ್ಯ' ನಾಟಕದ ಅನುವಾದ (ಸುಮಾರು ೩೫ ಪುಟಗಳು). ಎರಡು ಚಿಂತನ ಪ್ರಧಾನವಾದ ನಾರ್ಲ ಅವರ ಸುದೀರ್ಘ (ಸುಮಾರು ೧೩೧ ಪುಟಗಳು) ಪೀಠಿಕೆ ಮತ್ತು 'ಪ್ರಶಸ್ತಿಯನ್ನು ನಾನೇಕೆ ತಿರಸ್ಕರಿಸಿದೆ?' (೩ ಪುಟಗಳು) ಎಂಬ ನಾರ್ಲ ಅವರ ಹೇಳಿಕೆ—ಇವುಗಳ ಅನುವಾದ. ಎರಡು ಪ್ರಕಾರಗಳೂ ವಿಭಿನ್ನ ರೀತಿಯ ಸಮಸ್ಯೆಗಳನ್ನು, ಸವಾಲುಗಳನ್ನು ಒಡ್ಡುವಂಥವು. ಸಂತೋಷದ ಸಂಗತಿಯೆಂದರೆ ಡಾ. ಸುಜಾತಾ ಅವರು ಈ ಎರಡೂ ಪ್ರಕಾರಗಳು ಒಡ್ಡುವ ಸಮಸ್ಯೆ ಮತ್ತು ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಅತ್ಯಂತ ಹೃದ್ಯವಾದ ಹಾಗೂ ಬಹುತೇಕವಾಗಿ ಎಲ್ಲಿಯೂ ಅನುವಾದ ಎಂದೆನಿಸದಿರುವಂಥ ಪರಿಣಾಮಕಾರಿಯಾದ ಅನುವಾದವನ್ನು ಕೊಟ್ಟಿರುವುದು. ಈ ಯಶಸ್ಸಿಗಾಗಿ ಅವರು ಅಭಿನಂದನೀಯರೂ ಆಗಿದ್ದಾರೆ."

— ಪ್ರಧಾನ್ ಗುರುದತ್ತ

(ಗ್ರಂಥಲೋಕ, ವಿಶೇಷ ಸಂಚಿಕೆ—೧೯೮೭ರ ಕರ್ನಾಟಕ ಸಾಹಿತ್ಯ ಅಕಾದೆಮಿ ಬಹುಮಾನಗಳು, ಮಾರ್ಚ್ ೧೯೮೮)

"ರೂಪಕ > ಕಥೆ > ಕೃತಿ ಈ ಕ್ರಮಬದ್ಧ ಬೆಳವಣಿಗೆಯನ್ನು ನಾರ್ಲ ಅವರು ತರ್ಕಬದ್ಧವಾಗಿ, ಆಧಾರಯುಕ್ತವಾಗಿ ಪ್ರತಿಪಾದಿಸಿದ್ದಾರೆ. ಅದಕ್ಕಿಂತ ಈ ತೊಡಕಾದ ವಿಷಯವನ್ನು ಸರಳ, ಸ್ಪಷ್ಟ, ಪರಿಣಾಮಕಾರಿ ಭಾಷೆಯಲ್ಲಿ ನೀವು ಅನುವಾದಿಸಿದ್ದೀರಿ, ಧನ್ಯವಾದಗಳು. ಇಷ್ಟು ಸುಂದರ-ಸರಳ ನಿರೂಪಣೆಗಾಗಿ ಒಮ್ಮೊಮ್ಮೆ ಹೊಟ್ಟೆಕಿಚ್ಚುಪಟ್ಟುಕೊಂಡಿದ್ದೇನೆ."

— ಎಂ. ಎಂ. ಕಲಬುರ್ಗಿ
(೧೧-೨-೧೯೯೦)

ಡಾ. ನಾರ್ಲ ವೆಂಕಟೇಶ್ವರ ರಾವ್ ಅವರು ಬರೆದು ಡಾ. ಎಚ್. ಎಸ್. ಸುಜಾತಾ ಅನುವಾದಿಸಿದ 'ಸೀತೆಯ ಭವಿಷ್ಯ' ಒಳ್ಳೆಯ ಕೃತಿ. ರಾಮಾಯಣವನ್ನು ಬೇರೊಂದು ದೃಷ್ಟಿಕೋನದಿಂದ ವಿವೇಚಿಸುವ ಈ ಕೃತಿ ಪ್ರಸಿದ್ಧವಾದುದು. ಅನುವಾದ ತುಂಬಾ ಸರಳವೂ ಸಹಜವೂ ಆಗಿದೆ."

— ಆರ್. ಎಲ್. ಅನಂತರಾಮಯ್ಯ
(ಗ್ರಂಥಲೋಕ, ವಾರ್ಷಿಕ ಸಮೀಕ್ಷಾ ವಿಶೇಷಾಂಕ—೧೯೮೭ರ ಕನ್ನಡ ಪ್ರಕಟಣೆಗಳು, ಜೂನ್ ೧೯೮೭)

"ಅತ್ಯಂತ ಸಂತೋಷದಿಂದ ಕೃತಿಯನ್ನು ಓದಿ ಮುಗಿಸಿ (ಕೆಲವು ಕಡೆ ಎರಡು ಬಾರಿ ಓದಿ) ಈಗ ಬರೆಯುತ್ತಿದ್ದೇನೆ. ನಿಮ್ಮ ಅನುವಾದ ಅತ್ಯಂತ ಸಮರ್ಥವಾಗಿ ಬಂದಿದೆ. ಅನೇಕ ಸಲ ಅದು ಅನುವಾದವೆಂದು ತೋರುವುದೇ ಇಲ್ಲ. ಅಷ್ಟು ಚೆನ್ನಾಗಿ, ಮೌಲಿಕವಾಗಿ, ಕನ್ನಡದಲ್ಲಿ ಬಂದಿದೆ."

— ಸಿ. ಎನ್. ರಾಮಚಂದ್ರನ್
(೧೮-೯-೧೯೮೯)

ಡಾ. ಎಚ್. ಎಸ್. ಸುಜಾತಾ ಅವರು ಅನುವಾದ ಕಾರ್ಯವನ್ನು ತುಂಬ ಅಚ್ಚುಕಟ್ಟಾಗಿ, ಅತ್ಯಂತ ಸಹಜವಾಗಿ ನಿರ್ವಹಿಸಿ ಜಯಗಳಿಸಿದ್ದಾರೆ. ಮುದ್ರಣವೂ ಬಹಳ ಸುಂದರವಾಗಿದೆ. ಈ ಕೃತಿಯಲ್ಲಿ ವಾದಕ್ಕೆ ಒಳಪಟ್ಟಿರುವ ಅಂಶಗಳನ್ನು ಒಪ್ಪಲಿ, ಬಿಡಲಿ, ಇದು ಮನನ ಮಾಡಬೇಕಾದ ಗಮನಾರ್ಹ ಬರವಣಿಗೆ ಎಂಬ ವಿಷಯದಲ್ಲಿ ಎರಡು ಮಾತಿಲ್ಲ."

— ಪೂರ್ಣಾನಂದ
(ಗ್ರಂಥಲೋಕ, ಮೇ ೧೯೮೭)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"It was Kannada readers' good luck and Narla's wisdom that he choose her for this work. Little wonder that her 'Seeteya Bhavishya' won the Karnataka Sahitya Academy award as the best creative translation work for the year 1987. The book is a mile-stone in our fight against tradition and orthodoxy on the intellectual plane. This brief book (186 Pages) tells the readers what many volumes had not said before about Ramayana."

– **P. S. Sridhara Murthy**

"ಶ್ರೀ ನಾರ್ಲ ವೆಂಕಟೇಶ್ವರ ರಾವ್ ಅವರು ದೀರ್ಘ ಅಧ್ಯಯನ ಮಾಡಿ ಇದನ್ನು ರಚಿಸಿದಾರೆ... ಅದರ ಪೀಠಿಕೆಯನ್ನು ನೋಡಿದರೇ ಅವರ ಅಗಾಧ ಶ್ರಮ ಹಾಗೂ ಆಸಕ್ತಿ ಅರ್ಥವಾಗುತ್ತೆ...

ನೀವು ಅಷ್ಟೇ ಆಸಕ್ತಿಯಿಂದ ಹಾಗೂ ಶ್ರಮದಿಂದ ಅದನ್ನು ಕನ್ನಡಕ್ಕೆ ಅನುವಾದ ಮಾಡಿರುವಿರಿ. ನನ್ನ ಅಭಿನಂದನೆಗಳು."

– ವಾಣಿ
(೧೭-೧೦-೧೯೮೬)

"ಶ್ರೀ ನಾರ್ಲರವರ ಪ್ರತಿಭೆ ನಿಜಕ್ಕೂ ಮೆಚ್ಚುವಂತಹುದು. ಪೀಠಿಕಾಭಾಗ ಅವರ ನಿಶಿತ ಪಾಂಡಿತ್ಯ, ಆಳವಾದ ಮತ್ತು ಅಗಾಧವಾದ ವ್ಯಾಸಂಗದ ದ್ಯೋತಕ. ರಾಮ ಮತ್ತು ಸೀತೆಯರನ್ನು ಅವರು ಕಂಡಿರುವ ದೃಷ್ಟಿಕೋನವಾಗಲೀ ರಾಮಾಯಣ ಯುದ್ಧ 'ಆಹಾರ ಸಂಚಯನ ಹಾಗೂ ಆಹಾರೋತ್ಪಾದನ ವ್ಯವಸ್ಥೆಗಳ ನಡುವಿನ ಸಂಘರ್ಷ' ಎನ್ನುವುದಾಗಲೀ ಒಪ್ಪತಕ್ಕಂತಹುದು...

ನಿಮ್ಮ ಅನುವಾದದ ಬಗೆಗೆ ಹೇಳಬೇಕೆಂದರೆ ಅನುವಾದ ಚೆನ್ನಾಗಿ ಬಂದಿದೆ; ಅಡೆತಡೆಯಿಲ್ಲದೆ ಓದಿಸಿಕೊಂಡು ಹೋಗುತ್ತದೆ..."

– ಎಂ. ಎ. ಪಿಂಗಮ್ಮ
(೯-೯-೧೯೮೭)

"...Interesting. ಅನುವಾದವೂ ತುಂಬ ಚೆನ್ನಾಗಿದೆ."

8310

– ಟಿ. ಪಿ. ಅಶೋಕ
(೧-೨-೧೯೮೮)

"'ಸೀತೆಯ ಭವಿಷ್ಯ' ಕನ್ನಡ ವೈಚಾರಿಕ ಸಾಹಿತ್ಯಕ್ಕೆ ಒಂದು ಅಮೂಲ್ಯವಾದ ಕೊಡುಗೆಯೆಂದರೆ ಉಪಚಾರದ ಮಾತಾಗುವುದಿಲ್ಲ. ಶ್ರೀ ನಾರ್ಲ ವೆಂಕಟೇಶ್ವರ ರಾವ್ ಅವರ Original ಚಿಂತನೆಗಳು ಇಡೀ ಭಾರತದ ಬೌದ್ಧಿಕ ಕ್ಷೇತ್ರಕ್ಕೇ ಬಹು ಬೆಲೆಯುಳ್ಳ ಕೊಡುಗೆಗಳು... ಹರಪ್ಪ ಸಂಸ್ಕೃತಿಯ ಮೂಲಪುರುಷರನ್ನು ವೈದಿಕ ಆರ್ಯರ ಪೂರ್ವಿಕರ ಜತೆ ತಳಕು ಹಾಕಲು ಹೆಣಗುವವರಿಗೆ ನಾರ್ಲರ ವಿಚಾರಗಳು ಅಂಜನದಂತಿವೆ... ಕೃತಿಯ ನಾಟಕ ಭಾಗದ ಬಳ್ಳಿಗೆ ಪೀಠಿಕೆಯ ಕಾಯಿ ಭಾರವಾಗದೆ ಓದಿನ ಒಟ್ಟಂದಕ್ಕೆ ಪೂರಕವಾಗಿಯೇ ಇದೆ...

ನಿಮ್ಮ ಅನುವಾದ ಸರಳ ಸುಂದರವಾಗಿದೆ; ಸೃಜನಾತ್ಮಕವಾಗಿದೆ; ಎಲ್ಲಿಯೂ ಅನುವಾದಿತ ಕೃತಿ ಎನಿಸುವುದೇ ಇಲ್ಲ!"

पुस्तकालय
कांगड़ी विश्व

– [illegible]
(೨೭-೩-೧೯೮೯)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

GURUKUL KANGRI LIBRARY
Accession ३१९८३
Class on
Cat on
Tag etc.
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹಾ ಮಾ ನಾ ಹೊತ್ತಿಗೆಗಳು

CC-0. In Public Domain. Gurukul Kangri Collection, Haridwar